ಸೋಮವಾರ, ಸೆಪ್ಟೆಂಬರ್ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 246 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ಪರಿಸರದಲ್ಲಿ ಕಲಿಯುತ್ತ ಕಲಿಸುತ್ತಾ...



ಆಳ-ಅಗಲ
'ಕೋಟಾ ಫ್ಯಾಕ್ಟರಿ'ಯ ಕಣ್ಣೀರಿನ ಕಥನಗಳು
ರಾಹುಲ್‌ಗೆ ಲಾಲು 'ಪಾಕ ಪಾಠ' 11
ಸೌಜನ್ಯಾ ಪರ ಹೋರಾಟಕ್ಕೆ ಜನಸಾಗರ 7
'ನಿಗಮ, ಮಂಡಳಿಗೆ ಶಾಸಕರು ಬೇಡ' 6
ಮಳೆ ಕೊರತೆ: ಇಳುವರಿ ಕುಂಠಿತ ಸಾಧ್ಯತೆ 10

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷಾ ದೀಕ್ಷೆ

ಪ್ರಿಯ ವಿದ್ಯಾರ್ಥಿಗಳೇ

ಎಸ್ಸೆಸ್ಸೆಲ್ಸಿ-ಪಿಯುಸಿ ಓದುತ್ತಿರುವ ನಿಮಗಾಗಿ ಅನುಭವಿ ಶಿಕ್ಷಕರಿಂದ ಸಿದ್ಧಪಡಿಸಿರುವ 'ಅಧ್ಯಾಯವಾರು ಪ್ರಶ್ನೋತ್ತರಗಳ' ಪರೀಕ್ಷಾ ದೀಕ್ಷೆ 4

ವಿದ್ಯುತ್ ಬಿಲ್ ಮನ್ನಾ ಕೋರಿಕೆ ತಿರಸ್ಕಾರ 06

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೇಂದ್ರ ಪುರಸ್ಕೃತ 61 ಯೋಜನೆಗಳು • ಬಿಡುಗಡೆಯಾಗದ ಹಣ

ಕೇಂದ್ರ ಅನುದಾನ ಶೂನ್ಯ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಇಲಾಖೆಗಳ ಮೂಲಕ ಜಾರಿಯಲ್ಲಿರುವ ಕೇಂದ್ರ ಪುರಸ್ಕೃತ 61 ಯೋಜನೆಗಳಿಗೆ ಕೇಂದ್ರ ಸರ್ಕಾರ ಪ್ರಸಕ್ತ ಆರ್ಥಿಕ ವರ್ಷದಲ್ಲಿ (2023-24) ಈವರೆಗೆ ಬಿಡಿಗಾಸೂ ಬಿಡುಗಡೆ ಮಾಡಿಲ್ಲ.

ಒಟ್ಟು 23 ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ 61 ಯೋಜನೆಗಳಿಗೆ ಕಳೆದ ಸಾಲಿನಲ್ಲಿ (2022-23) ಕೇಂದ್ರ ಸರ್ಕಾರ ಇಡೀ ವರ್ಷಕ್ಕೆ ಒಟ್ಟು ₹10,447.91 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಆದರೆ, ಪ್ರಸಕ್ತ ಸಾಲಿನಲ್ಲಿ ಆಗಸ್ಟ್ ತಿಂಗಳು ಕಳೆದರೂ ನಯಾ ಪೈಸೆ ಬಿಡುಗಡೆ ಮಾಡಿಲ್ಲ ಎಂದು ಆರ್ಥಿಕ ಇಲಾಖೆಯ ಮೂಲಗಳು ತಿಳಿಸಿವೆ.

ರಾಜ್ಯದ ಬಹುತೇಕ ಕಡೆಗಳಲ್ಲಿ ಎಲ್ಲ ಅಭಿವೃದ್ಧಿ ಯೋಜನೆಗಳು ಅನುದಾನ ಕೊರತೆಯಿಂದ ಸ್ಥಗಿತಗೊಂಡಿವೆ. ಕೇಂದ್ರ ಸರ್ಕಾರ ಕೂಡಾ ತನ್ನ ಸಹಭಾಗಿತ್ವದ ಯೋಜನೆಗಳಿಗೆ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡಿಲ್ಲ. ಹೀಗಾಗಿ, ಕೇಂದ್ರದ ನೆರವಿನ ಯೋಜನೆಗಳೂ ನನೆಗುದಿಗೆ ಬಿದ್ದಿವೆ ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ ವಿಶೇಷ

ಕೇಂದ್ರದಿಂದ ಅನುದಾನ ಬಿಡುಗಡೆ ಆಗದಿರುವ ಬಗ್ಗೆ ದೆಹಲಿಯ ಕರ್ನಾಟಕ ಭವನದಲ್ಲಿರುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಸಮನ್ವಯ) ವಂದನಾ ಗುರ್ನಾನಿ ಅವರಿಗೆ ಆರ್ಥಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ (ಆಯವ್ಯಯ ಮತ್ತು ಸಂಪನ್ಮೂಲ) ಏಕ್‌ರೂಪ್ ಕೌರ್ ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ, 'ಕೇಂದ್ರ ಪುರಸ್ಕೃತ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯಕ್ಕೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಬೇಕು' ಎಂದು ಮನವಿ ಮಾಡಿದ್ದಾರೆ.

'ನಾವು (ರಾಜ್ಯ) ಪ್ರಸಕ್ತ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದ ಅಂತ್ಯಕ್ಕೆ ಸಮೀಪಿಸುತ್ತಿದ್ದೇವೆ. ಅನುದಾನ ಬಿಡುಗಡೆ ವಿಳಂಬ ಆಗಿರುವುದರಿಂದ ಈ ಯೋಜನೆಗಳ ಅನುಷ್ಠಾನಕ್ಕೆ ಅಡ್ಡಿಯಾಗಿದೆ' ಎಂದು ಕೌರ್, ಯಾವ್ಯಾವ ಇಲಾಖೆಗಳ ಯಾವ್ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಆಗಿಲ್ಲ ಎಂಬ ಪಟ್ಟಿಯನ್ನೂ ನೀಡಿದ್ದಾರೆ. ಈ ಪಟ್ಟಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಏಕ್‌ರೂಪ್ ಕೌರ್ ಅವರನ್ನು ಇತ್ತೀಚೆಗೆ ಐಟಿಬಿಟಿ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ.

ಕೌರ್ ಅವರು ಬರೆದ ಪತ್ರದಲ್ಲಿ ಉಲ್ಲೇಖಿಸಿರುವ ಇಲಾಖೆಗಳ ಮುಖ್ಯಸ್ಥರಿಗೆ ಮರು ಪತ್ರ ಬರೆದಿರುವ ವಂದನಾ ಗುರ್ನಾನಿ, 'ಕೇಂದ್ರ ಪುರಸ್ಕೃತ ಯೋಜನೆಗಳಡಿ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ-ಗಳಿಂದ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಅನುಸರಣೆ (ಫಾಲೋಅಪ್) ಮಾಡಲು ಯೋಜನೆಗಳಿಗೆ ಸಂಬಂಧಿಸಿದ ನಿರ್ದಿಷ್ಟ ಪ್ರಸ್ತಾವನೆಗಳ ಪ್ರತಿಯನ್ನು ಮತ್ತು ಅನುದಾನ ಬಿಡುಗಡೆ ಕೋರಿ ಸಚಿವಾಲಯಕ್ಕೆ ಮನವಿಯನ್ನು ಕಳುಹಿಸಿಕೊಡಬೇಕು' ಎಂದಿದ್ದಾರೆ.

7ನೇ ಪುಟ ನೋಡಿ

ಅನುದಾನ ಬಾರದ ಇಲಾಖೆಗಳು

ಕೃಷಿ, ಸಹಕಾರ, ಅರಣ್ಯ, ಆರೋಗ್ಯ, ವಸತಿ, ಕಂದಾಯ, ಗೃಹ, ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ, ನಗರಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸೇರಿ ಒಟ್ಟು 23 ಇಲಾಖೆಗಳ 61 ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ, ಪ್ರಧಾನಮಂತ್ರಿ ಆವಾಸ್ ಯೋಜನೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ, ವಿಧವಾ ಪಿಂಚಣಿ ಯೋಜನೆ, ನರೇಗಾ, ಸ್ವಚ್ಛ ಭಾರತ್, ಸಮಗ್ರ ಶಿಕ್ಷಣ, ಮಧ್ಯಾಹ್ನದ ಬಿಸಿಯೂಟ, ಕೃಷಿ ಸಿಂಚಯಿನಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಸ್ಮಾರ್ಟ್ ಸಿಟಿ, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ, ಐಸಿಡಿಎಸ್ (ಸಾಮಾನ್ಯ) ಮುಂತಾದ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ಬಿಡುಗಡೆ ಆಗಿಲ್ಲ.

ಪ್ರಮುಖ ಇಲಾಖೆಗಳ ಕೇಂದ್ರ ಪುರಸ್ಕೃತ ಯೋಜನೆ ಅನುದಾನ (₹ ಕೋಟಿಗಳಲ್ಲಿ)

ಇಲಾಖೆ	ಯೋಜನೆ	2022-23ರಲ್ಲಿ ಬಿಡುಗಡೆ	ಪ್ರಸಕ್ತ ವರ್ಷ ಈವರೆಗೆ
ಗ್ರಾಮೀಣಾಭಿವೃದ್ಧಿ	ನರೇಗಾ	2,595.52	0
ಗ್ರಾಮೀಣಾಭಿವೃದ್ಧಿ	ಗ್ರಾಮ ಸಡಕ್	720.47	0
ವಸತಿ	ಪಿಎಂ ಆವಾಸ್ ಯೋಜನೆ (ನಗರ)	863.64	0
ವಸತಿ	ಪಿಎಂ ಆವಾಸ್ ಯೋಜನೆ (ಗ್ರಾಮೀಣ)	214.92	0
ಆರೋಗ್ಯ	ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ	881.10	0
ಶಾಲಾ ಶಿಕ್ಷಣ	ಸಮಗ್ರ ಶಿಕ್ಷಣ	861.52	0
ಶಾಲಾ ಶಿಕ್ಷಣ	ಮಧ್ಯಾಹ್ನದ ಬಿಸಿಯೂಟ	690.77	0
ನಗರಾಭಿವೃದ್ಧಿ	ಸ್ಮಾರ್ಟ್ ಸಿಟಿ	604.84	0
ಮಹಿಳಾ ಮತ್ತು ಮಕ್ಕಳ ಕಲ್ಯಾಣ	ಐಸಿಡಿಎಸ್ (ಸಾಮಾನ್ಯ)	765.87	0
ಕಂದಾಯ	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ	243.66	0
ಕಂದಾಯ	ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ಪಿಂಚಣಿ	159.46	0
ಗ್ರಾಮೀಣಾಭಿವೃದ್ಧಿ	ಸ್ವಚ್ಛ ಭಾರತ್	155.84	0
ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ	ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ	284.61	0



ಜಲಾವೃತ ರಸ್ತೆ ಕಲಬುರಗಿಯಲ್ಲಿ ಭಾನುವಾರ ಸುರಿದ ಧಾರಾಕಾರ ಮಳೆಯಿಂದ ಕೋರ್ಟ್ ಬಳಿ ರಸ್ತೆಯು ಜಲಾವೃತಗೊಂಡಿತ್ತು -ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ವಿವರ 06

ಕಾಂಗ್ರೆಸ್, ವಿರೋಧ ಪಕ್ಷಗಳ ಸದನ ನಾಯಕರ ಸಭೆ ನಾಳೆ

ಕಾರ್ಯತಂತ್ರ: 'ಇಂಡಿಯಾ' ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ವಿಶೇಷ ಅಧಿವೇಶನ ಕರೆಯುವ ಸರ್ಕಾರದ ನಿರ್ಧಾರದ ಹಿಂದೆಯೇ ಪ್ರತಿಪಕ್ಷ-ಗಳ ಮೈತ್ರಿಕೂಟ 'ಇಂಡಿಯಾ' ತನ್ನ ಕಾರ್ಯತಂತ್ರ ರೂಪಿಸಲು ಸಿದ್ಧತೆ ಆರಂಭಿಸಿದೆ. ಈ ಕುರಿತು ಚರ್ಚಿಸಲು ಕಾಂಗ್ರೆಸ್ ಪಕ್ಷ ಮಂಗಳವಾರ ಹಿರಿಯ ನಾಯಕರ ಸಭೆ ಕರೆದಿದೆ. ನಂತರ ವಿವಿಧ ಪಕ್ಷಗಳ ಸದನ ನಾಯಕರ ಸಭೆಯೂ ನಡೆಯಲಿದೆ.

ಪಕ್ಷದ ನಾಯಕಿ ಸೋನಿಯಾಗಾಂಧಿ ನೇತೃತ್ವದ 'ಕಾಂಗ್ರೆಸ್ ಸಂಸದೀಯ ಕಾರ್ಯತಂತ್ರ ಸಮಿತಿ'ಯು ಮಂಗಳವಾರ ಮೊದಲಿಗೆ ಸಭೆ ಸೇರಲಿದ್ದು ಪಕ್ಷದ ಕಾರ್ಯತಂತ್ರವನ್ನು ಅಂತಿಮಗೊಳಿಸಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಆ ನಂತರ ಅಂದೇ ರಾತ್ರಿ 'ಇಂಡಿಯಾ' ನಾಯಕರ ಸಭೆಯೂ ನಡೆಯಲಿದೆ.

ಮೂಲಗಳ ಪ್ರಕಾರ, ವಿಶೇಷ ಅಧಿವೇಶನದಲ್ಲಿ ಅನುಸರಿಸ ಬೇಕಾದ ಕಾರ್ಯತಂತ್ರ, ಪ್ರಸ್ತಾಪಿಸ-ಬೇಕಾದ ವಿಷಯಗಳ ಕುರಿತಂತೆ ಈ ಎರಡೂ ಸಭೆಗಳಲ್ಲೂ ವಿಸ್ತೃತ ಚರ್ಚೆ ನಡೆಯಲಿದೆ. ಈಗಿನ ವೇಳಾಪಟ್ಟಿಯಂತೆ ಸೆ.18ರಿಂದ ಐದು ದಿನ ಕಾಲ ಸಂಸತ್ತಿನ ವಿಶೇಷ ಅಧಿವೇಶನವು ನಡೆಯಲಿದೆ.

ಮುಂಬೈನಲ್ಲಿ ಮೂರು ದಿನಗಳ ಹಿಂದೆಯಷ್ಟೇ 'ಇಂಡಿಯಾ' ಮುಖಂಡರ ಮೂರನೇ ಸಭೆ ನಡೆಯಿತು. ಈಗ ಸಂಸತ್ತಿನ ಉಭಯ ಸದನಗಳಲ್ಲಿ ವಿವಿಧ ವಿರೋಧಪಕ್ಷಗಳ ಸದನ ನಾಯಕರ ಸಭೆಯು ನಡೆಯಲಿದೆ.

ಕೇಂದ್ರ ಸರ್ಕಾರವು ಇತ್ತೀಚೆಗೆ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ₹ 200ರಷ್ಟು ಇಳಿಸಿದೆ. ಈಗ ಸಂಸತ್ತಿನ ವಿಶೇಷ ಅಧಿವೇಶನ ಕರೆದಿದೆ. ಇನ್ನೊಂದೆಡೆ, ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಧ್ಯತೆ ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸಿದೆ. ಅದಾನಿ ಸಮೂಹ ಕುರಿತ ಇತ್ತೀಚಿನ ಬೆಳವಣಿಗೆಗಳು ಹಾಗೂ ಮುಂಬೈನಲ್ಲಿ ನಡೆದಿದ್ದ 'ಇಂಡಿಯಾ' ಮುಖಂಡರ ಸಭೆಯ ಬೆಳವಣಿಗೆಗಳಿಂದ ಜನರ ಗಮನ ಬೇರೆಡೆಗೆ ಸೆಳೆಯುವುದೇ ಈ ಎಲ್ಲ ಕ್ರಮಗಳ ಗುರಿ ಎಂದು ಪ್ರತಿಪಕ್ಷಗಳು ವ್ಯಾಖ್ಯಾನಿಸಿವೆ.

ಏಕಕಾಲದಲ್ಲಿ ಚುನಾವಣೆ ಕಾರ್ಯಸಾಧ್ಯತೆ ಪರಿಶೀಲಿಸಲು ರಚಿಸಿರುವ ಉನ್ನತ ಮಟ್ಟದ ಸಮಿತಿಯಿಂದ ಖರ್ಗೆ ಹೆಸರು ಕೈಬಿಟ್ಟಿರುವುದು ಹಾಗೂ ಸಮಿತಿಯ ಭಾಗವಾಗಲು ಅಧೀರ್ ರಂಜನ್ ಚೌಧರಿ ನಿರಾಕರಿಸಿರುವ ವಿಷಯವು ಮಂಗಳವಾರದ ಸಭೆಗಳಲ್ಲಿ ಚರ್ಚೆಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

11ನೇ ಪುಟ ನೋಡಿ

'ಸನಾತನ ಧರ್ಮದ ನಿರ್ಮೂಲನೆ ಅಗತ್ಯ'

ಪ್ರಜಾವಾಣಿ ವಾರ್ತೆ



ಉದಯನಿಧಿ ಸ್ಟಾಲಿನ್

ಚೆನ್ನೈ: 'ಸನಾತನ ಧರ್ಮವು ಸಮಾನತೆ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಇದು ಕೊರೊನಾ, ಡೆಂಗಿ, ಮಲೇರಿಯಾಕ್ಕೆ ಸಮಾನವಾದುದು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪುತ್ರ, ಸಚಿವ ಉದಯನಿಧಿ ಸ್ಟಾಲಿನ್ ಟೀಕಿಸಿದ್ದಾರೆ.

'ಸನಾತನ ಧರ್ಮ ನಿರ್ಮೂಲನೆ ಮಾಡಬೇಕು' ಎಂದೂ ಅವರು ಕರೆ ನೀಡಿದ್ದಾರೆ. ಈ ಹೇಳಿಕೆ ವಿವಾದಕ್ಕೆ ಆಸ್ಪದವಾಗಿದ್ದು, ಬಿಜೆಪಿಯು ಡಿಎಂಕೆ ಮತ್ತು ಅದರ ಮೈತ್ರಿಪಕ್ಷ ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ತಮಿಳುನಾಡು ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು, ಉದಯನಿಧಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. 'ಇದು, 'ಇಂಡಿಯಾ'ಮೈತ್ರಿಕೂಟದ ನಿಲುವೇ' ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ಮುಖಂಡರ ಆಕ್ಷೇಪದ ನಂತರವೂ, 'ಆಡಿರುವ ಪ್ರತಿ ಮಾತಿಗೂ ನಾನು ಬದ್ಧನಾಗಿದ್ದೇನೆ' ಎಂದು ಡಿಎಂಕೆ ಯುವ ಘಟಕದ ಅಧ್ಯಕ್ಷರೂ ಆಗಿರುವ ಉದಯನಿಧಿ ತಮ್ಮ ನಿಲುವು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಮೈತ್ರಿಪಕ್ಷ ಡಿಎಂಕೆ ಸನಾತನ ಧರ್ಮದ ನಿರ್ಮೂಲನೆ ಬಗ್ಗೆ ಮಾತನಾಡುತ್ತಿದೆ. ಕಾಂಗ್ರೆಸ್‌ನ ಮೌನ, ಹತ್ಯಾಕಾಂಡ ಕುರಿತ ಈ ಹೇಳಿಕೆಗೆ ಬೆಂಬಲವೇ?

ಅಮಿತ್ ಮಾಳವೀಯ
ಬಿಜೆಪಿ ಐ.ಟಿ ಘಟಕದ ಉಸ್ತುವಾರಿ

ಉದಯನಿಧಿ ಅವರ ಹೇಳಿಕೆಯಲ್ಲಿ ತಪ್ಪಿದೆ ಎಂದು ನನಗೆ ಅನ್ನಿಸುತ್ತಿಲ್ಲ

ಕಾರ್ತಿ ಪಿ.ಚಿದಂಬರಂ, ಕಾಂಗ್ರೆಸ್ ಸಂಸದ

ಡಿಎಂಕೆ ಮುಖಂಡರು ಸನಾತನ ಧರ್ಮ ಕುರಿತು ಹೇಳಿಕೆಗೆ ಟೀಕೆಗೆ ಒಳಗಾಗುತ್ತಿರುವುದು ಇದೇ ಮೊದಲಲ್ಲ. ಮನುಸ್ಮೃತಿ ಮತ್ತು ಹಿಂದುತ್ವದಲ್ಲಿ ಜಾತಿ ವ್ಯವಸ್ಥೆ ಕುರಿತು ಡಿಎಂಕೆ ಸಂಸದ ಎ.ರಾಜಾ ಹೇಳಿಕೆ ಟೀಕೆಗೊಳಗಾಗಿತ್ತು.

ರಾಜ್ಯಪಾಲ ಆರ್.ಎನ್.ರವಿ ಅವರು ಸನಾತನ ಧರ್ಮವನ್ನು ಸಾರ್ವಜನಿಕ ವೇದಿಕೆಯಲ್ಲಿ ಪ್ರಚಾರ ಮಾಡುತ್ತಿದ್ದಾರೆ ಎಂದು ಡಿಎಂಕೆ ಆರೋಪಿಸಿದ್ದು, ಈ ವಿಷಯ ತಮಿಳುನಾಡು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

11ನೇ ಪುಟ ನೋಡಿ

ಆದಿತ್ಯ ಎಲ್–1 ಕಕ್ಷೆ ಎತ್ತರ ಏರಿಕೆ

ಬೆಂಗಳೂರು: ಸೂರ್ಯನ ಅಧ್ಯಯನ-ಕ್ಕಾಗಿ ಶನಿವಾರ ಉಡಾವಣೆಗೊಂಡು ಭೂಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿರುವ 'ಆದಿತ್ಯ ಎಲ್-1' ಅನ್ನು ಭಾನುವಾರ ಯಶಸ್ವಿಯಾಗಿ ಎತ್ತರದ ಕಕ್ಷೆಗೆ ಸೇರಿಸಲಾಗಿದೆ. ಉಪಗ್ರಹವು ಆರೋಗ್ಯ ಪೂರ್ಣವಾಗಿದ್ದು, ಸಾಮಾನ್ಯ ಸ್ಥಿತಿಯಲ್ಲೇ ಕಾರ್ಯ ನಿರ್ವಹಿಸುತ್ತಿದೆ. ಸೋಮವಾರ ಇನ್ನೂ ಎತ್ತರದ ಕಕ್ಷೆಗೆ ಸೇರಿಸುವ ಕಾರ್ಯ ನಡೆಯಲಿದೆ ಎಂದು ಇಸ್ರೊ ತಿಳಿಸಿದೆ. 6

'ಭಾರತ: 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರ'

ನವದೆಹಲಿ (ಪಿಟಿಐ): '2047ರ ಹೊತ್ತಿಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪೈಕಿ ಒಂದಾಗಲಿದೆ. ಉಳಿದ ದೇಶಗಳಿಗೆ ಹೋಲಿಸಿದರೆ ನಮ್ಮ ಅರ್ಥ ವ್ಯವಸ್ಥೆಯು ಹೆಚ್ಚು ಒಳಗೊಳ್ಳುವಿಕೆ ಹಾಗೂ ನಾವೀನ್ಯದಿಂದ ಕೂಡಿರಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. 11

ಸಹೋದ್ಯೋಗಿ ಯುವತಿ ಜೊತೆ ಸಲುಗೆ • ಖಾಸಗಿ ಕ್ಷಣಗಳನ್ನು ಚಿತ್ರೀಕರಿಸಿ ಕಿರುಕುಳ

ವಿಡಿಯೊ ಬ್ಲ್ಯಾಕ್‌ಮೇಲ್: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹೋದ್ಯೋಗಿ ಯುವತಿ ಜೊತೆ ಸಲುಗೆ ಇಟ್ಟುಕೊಂಡು ಖಾಸಗಿ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಅಮೀರ್ ಹುಸೇನ್ ಫೈಸಲ್‌ನನ್ನು (26) ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಮೀರ್ ಹುಸೇನ್ ಫೈಸಲ್

'ಎಚ್‌ಎಸ್‌ಆರ್ ಲೇಔಟ್ ನಿವಾಸಿಯಾಗಿರುವ ಸಂತ್ರಸ್ತ ಯುವತಿ, ಬ್ಲ್ಯಾಕ್‌ಮೇಲ್ ಬಗ್ಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಫೈಸಲ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಸ್ಸಾಂನ ಫೈಸಲ್ ಹಾಗೂ ಯುವತಿ, ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಎರಡು ವರ್ಷಗಳ ಹಿಂದೆಯಷ್ಟೇ ಅವರಿಬ್ಬರಿಗೆ ಪರಿಚಯವಾಗಿತ್ತು. ಸಲುಗೆಯೂ ಇತ್ತು. ಇಬ್ಬರೂ ಹಲವು ಕಡೆ ಸುತ್ತಾಡಿದ್ದರು. ಇದೇ ಸಂದರ್ಭದಲ್ಲಿ ಯುವತಿಯ ಖಾಸಗಿ ವಿಡಿಯೊಗಳನ್ನು ಆರೋಪಿ ಚಿತ್ರೀಕರಿಸಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

ದೂರವಾಗಿದ್ದ ಯುವತಿ: 'ಆರೋಪಿ ಹಾಗೂ ಯುವತಿ, ಹಲವು ಬಾರಿ ಖಾಸಗಿ ಕ್ಷಣಗಳನ್ನು ಕಳೆದಿದ್ದರು. ಯುವತಿಗೆ ಆರೋಪಿ ಕಿರುಕುಳ ನೀಡಲಾರಂಭಿಸಿದ್ದ. ಅನುಮಾನಪಟ್ಟು ಬೈಯುತ್ತಿದ್ದ. ಬೇಸತ್ತ ಯುವತಿ, ಆರೋಪಿಯಿಂದ ದೂರವಾಗಿದ್ದರು' ಎಂದು ಪೊಲೀಸರು ಹೇಳಿದರು.

'ಕಂಪನಿ ಕೆಲಸ ಬಿಟ್ಟಿದ್ದ ಆರೋಪಿ, ಅಸ್ಸಾಂಗೆ ಹೋಗಿದ್ದ. ಇದಾದ ನಂತರವೂ ಯುವತಿಗೆ ಆಗಾಗ ಕರೆ ಮಾಡಲಾರಂಭಿಸಿದ್ದ. ಭೇಟಿಯಾಗುವಂತೆ ಪದೇ ಪದೇ ಒತ್ತಾಯಿಸುತ್ತಿದ್ದ. ಆದರೆ, ಯುವತಿ ಅದಕ್ಕೆ ಒಪ್ಪಿರಲಿಲ್ಲ' ಎಂದು ತಿಳಿಸಿದರು.

ಇನ್‌ಸ್ಟಾಗ್ರಾಮ್‌ನಲ್ಲಿ ನಕಲಿ ಖಾತೆ ಸೃಷ್ಟಿ: 'ಯುವತಿ ಜೊತೆ ಸಲುಗೆ ಮುಂದುವರಿಸಲು ಯೋಚಿಸುತ್ತಿದ್ದ ಆರೋಪಿ, ಪದೇ ಪದೇ ಕರೆ ಮಾಡಲಾರಂಭಿಸಿದ್ದ. ಆದರೆ, ಯುವತಿ ಕರೆ ಸ್ವೀಕರಿಸಿರಲಿಲ್ಲ. ಯುವತಿ ಹೆಸರಿನಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ, ಮೂರು ಖಾಸಗಿ ಫೋಟೊಗಳನ್ನು ಅಪ್‌ಲೋಡ್ ಮಾಡಿದ್ದ. ಅದರ ಲಿಂಕ್‌ನ್ನು ಯುವತಿಗೆ ಕಳುಹಿಸಿದ್ದ' ಎಂದು ಪೊಲೀಸರು ಹೇಳಿದರು.

'ಫೋಟೊ ನೋಡಿ ಹೆದರಿದ್ದ ಯುವತಿ, ಆರೋಪಿಗೆ ಕರೆ ಮಾಡಿದ್ದರು. 'ನಾನು ಕರೆದ ಕಡೆ ಬರಬೇಕು. ಇಲ್ಲದಿದ್ದರೆ, ಖಾಸಗಿ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಸಿದ್ದ. ಮತ್ತಷ್ಟು ಗಾಬರಿಗೊಂಡಿದ್ದ ಯುವತಿ, ಠಾಣೆಗೆ ದೂರು ನೀಡಿದ್ದರು. ಇದರ ನಡುವೆಯೇ ಆರೋಪಿ, ಅಸ್ಸಾಂನಿಂದ ಚೆನ್ನೈಗೆ ಬಂದಿದ್ದ. ಚೆನ್ನೈಗೆ ಬರುವಂತೆ ಯುವತಿಗೆ ಹೇಳಿದ್ದ' ಎಂದು ತಿಳಿಸಿದರು.

ಸಂತ್ರಸ್ತೆ ಜೊತೆ ಕಾರ್ಯಾಚರಣೆ

'ಆರೋಪಿ ಬಂಧಿಸಲು ವಿಶೇಷ ತಂಡ ರಚಿಸಿ, ಸಂತ್ರಸ್ತೆ ಜೊತೆಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ಮೆಜೆಸ್ಟಿಕ್ ನಿಲ್ದಾಣಕ್ಕೆ ಮಹಿಳಾ ಸಿಬ್ಬಂದಿ ಸಮೇತ ಯುವತಿಯನ್ನು ಕರೆದೊಯ್ದು, ಅಲ್ಲಿಂದಲೇ ಆರೋಪಿಗೆ ವಿಡಿಯೊ ಕರೆ ಮಾಡಿಸಲಾಗಿತ್ತು. ಚೆನ್ನೈಗೆ ಬರುತ್ತಿರುವುದಾಗಿ ಹೇಳಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.'ಯುವತಿ ಜೊತೆಗೆ ಪೊಲೀಸರು ಇರುವ ಮಾಹಿತಿ ಆರೋಪಿಗೆ ಗೊತ್ತಿರಲಿಲ್ಲ. ಚೆನ್ನೈಗೆ ಹೋಗಿದ್ದ ಯುವತಿ, ಆರೋಪಿಯನ್ನು ಭೇಟಿಯಾಗಿದ್ದರು. ಅದೇ ಸಂದರ್ಭದಲ್ಲಿ ಸಿಬ್ಬಂದಿ, ಆರೋಪಿಯನ್ನು ಸೆರೆ ಹಿಡಿದು ನಗರಕ್ಕೆ ಕರೆತಂದಿದ್ದಾರೆ' ಎಂದು ತಿಳಿಸಿದರು.

'ಆರೋಪಿ ಮತ್ತಷ್ಟು ಮಹಿಳೆಯರಿಗೆ ಬ್ಲ್ಯಾಕ್‌ಮೇಲ್ ಮಾಡಿರುವ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ. ಸದ್ಯ ಯುವತಿ ಮಾತ್ರ ದೂರು ನೀಡಿದ್ದಾರೆ' ಎಂದು ಹೇಳಿದರು.

ಅಪರಾಧ ಸುದ್ದಿ

ಲೇಔಟ್ ಯೋಜನೆ ಬದಲಾವಣೆ: ತನಿಖೆಗೆ ಒಪ್ಪಿಗೆ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ಯೋಜನೆ ಬದಲಾಯಿಸಿದ ಪ್ರಕರಣದ ತನಿಖೆ ನಡೆಸಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ.

2009ಲ್ಲಿ ವಿಶ್ವೇಶ್ವರಯ್ಯ ಬಡಾವಣೆ ನಿರ್ಮಿಸುವಾಗ 60X40 ನಿವೇಶನಗಳನ್ನು ನಿರ್ಮಿಸುವುದು ಮೂಲ ಯೋಜನೆಯಾಗಿತ್ತು. ಅದನ್ನು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬಳಿಕ ಬದಲಾಯಿಸಿ 30X40 ನಿವೇಶನಗಳನ್ನಾಗಿ ಮಾಡಿ ಮರು ಹಂಚಿಕೆ ಮಾಡಲಾಗಿತ್ತು. ಈ ಬಗ್ಗೆ ಭಾಸ್ಕರ ರೆಡ್ಡಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದರು.

ಆಗಿನ ಬಿಡಿಎ ಆಯುಕ್ತ ಟಿ. ಶ್ಯಾಮ್ ಭಟ್ ಸೇರಿದಂತೆ ಇಬ್ಬರು ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ನೀಡುವಂತೆ ಎಸಿಬಿ 2021ರಲ್ಲಿ ಸರ್ಕಾರಕ್ಕೆ ಪತ್ರ ಬರೆದಿತ್ತು. 2022ರಲ್ಲಿ ಹೈಕೋರ್ಟ್ ಆದೇಶದಂತೆ ಎಸಿಬಿಯನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಎಸಿಬಿಯ ಎಲ್ಲ ಪ್ರಕರಣಗಳು ಲೋಕಾಯುಕ್ತಕ್ಕೆ ಹಸ್ತಾಂತರವಾಗಿದ್ದವು.

ಇದೀಗ ಪ್ರಕರಣದ ತನಿಖೆ ನಡೆಸಲು ಸರ್ಕಾರ ಒಪ್ಪಿಗೆ ಸೂಚಿಸಿರುವುದರಿಂದ ಲೋಕಾಯುಕ್ತ ತನಿಖೆ ಕೈಗೊಳ್ಳಲಿದೆ ಎಂದು ದೂರುದಾರ ಭಾಸ್ಕರ ರೆಡ್ಡಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಆಪರೇಷನ್ ಬಿಜೆಪಿ ಕೆಲಸ'

ರಾಮನಗರ:ಬಿಜೆಪಿಗೆ ರಾಜ್ಯದಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವ ಸಾಮರ್ಥ್ಯ ಇಲ್ಲ. ಇನ್ನೊಬ್ಬರ ನೆರವು ಇಲ್ಲದೆ ಬಿಜೆಪಿ ಎಂದಿಗೂ ಸ್ವತಂತ್ರವಾಗಿ ಬಹುಮತದೊಂದಿಗೆ ಸರ್ಕಾರ ನಡೆಸಿಲ್ಲ. ಆಪರೇಷನ್ ಮಾಡುವುದೇ ಬಿಜೆಪಿಯವರ ಕೆಲಸ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಲೇವಡಿ ಮಾಡಿದ್ದಾರೆ.

ಜಾನಪದ ಲೋಕಕ್ಕೆ ಭಾನುವಾರ ಭೇಟಿ ನೀಡಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಯಾವಾಗ 113 ಸ್ಥಾನಗಳಲ್ಲಿ ಗೆದ್ದು ಸರ್ಕಾರ ಮಾಡಿದೆ?. ವಾಮಮಾರ್ಗದಲ್ಲಿ ಅಧಿಕಾರ ಹಿಡಿಯುವುದು ಬಿಟ್ಟರೆ, ಅವರಿಗೆ ಬೇರೇನೂ ಗೊತ್ತಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

'ಎಐಸಿಟಿಇ ಐಡಿಯಾ' ಪ್ರಯೋಗಾಲಯ ಉದ್ಘಾಟನೆ



ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ–2020ರ ಮೂಲಕ ಭಾರತವು ವಿದ್ಯಾರ್ಥಿ ಕೇಂದ್ರಿತವಾಗಿ ಸಂಶೋಧನೆ ಮತ್ತು ನಾವೀನ್ಯ ವಲಯವನ್ನು ಸುಧಾರಿಸಲು ನಿರ್ಣಯ ತೆಗೆದುಕೊಂಡಿದೆ' ಎಂದು ಎಐಸಿಟಿಇ ಅಧ್ಯಕ್ಷ ಟಿ.ಜಿ. ಸೀತಾರಾಮನ್ ಹೇಳಿದರು.

ಬೆಂಗಳೂರಿನ ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಯೋಜಿಸಿದ್ದ 'ನೆಟ್‌ವರ್ಕ್‌ಗಳು, ಮಲ್ಟಿಮೀಡಿಯಾ ಮತ್ತು ಮಾಹಿತಿ ತಂತ್ರಜ್ಞಾನ' ಎಂಬ ವಿಷಯದ ಕುರಿತು ಆಯೋಜಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ತಾಂತ್ರಿಕ ಸಂಸ್ಥೆಗಳು ವೃತ್ತಿಪರ ಕೌಶಲಗಳೊಂದಿಗೆ ವಿದ್ಯಾರ್ಥಿಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ' ಎಂದರು.

ಇದೇ ವೇಳೆ, 'ಎಐಸಿಟಿಇ–ಐಡಿಇಎ' ಪ್ರಯೋಗಾಲಯವನ್ನು ಡಾ. ಟಿ.ಜಿ. ಸೀತಾರಾಮನ್ ಅವರು ಉದ್ಘಾಟಿಸಿದರು. ಪ್ರಯೋಗಾಲಯವು ವಿದ್ಯಾರ್ಥಿಗಳಿಗೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತಶಾಸ್ತ್ರದ ಮೂಲಭೂತ ಅಂಶಗಳ ಅಧ್ಯಯನಕ್ಕೆ ನೆರವಾಗಲಿದೆ. ಈ ಪ್ರಯೋಗಾಲಯ ಅಭಿವೃದ್ಧಿಗೆ ಎಐಸಿಟಿಇ ₹15 ಲಕ್ಷ ಮಂಜೂರು ಮಾಡಿದೆ.

ಸಂಸ್ಥೆಯ ಪ್ರಾಂಶುಪಾಲ ಎಚ್.ಸಿ. ನಾಗರಾಜ್ ಮಾತನಾಡಿದರು. ಸಮ್ಮೇಳನದಲ್ಲಿ ತಜ್ಞರು ಪ್ರಬಂಧಗಳನ್ನು ಮಂಡಿಸಿದರು.

ಬಾಲಕಿಗೆ ಕಿರುಕುಳ: ಎಚ್ಚರಿಕೆ ನೀಡಿದ್ದಕ್ಕೆ ತಂದೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮಗಳ ತಂಟೆಗೆ ಬರಬೇಡ' ಎಂದು ಎಚ್ಚರಿಕೆ ನೀಡಿದ್ದ ತಂದೆಯನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ಜಾಹೀದ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಅಶೋಕ ನಗರ ಠಾಣೆ ವ್ಯಾಪ್ತಿಯ ನಂಜಪ್ಪ ವೃತ್ತದ ನಿವಾಸಿ ಜಾಹೀದ್, 15 ವರ್ಷದ ಬಾಲಕಿಯೊಬ್ಬರಿಗೆ ಕಿರುಕುಳ ನೀಡುತ್ತಿದ್ದ. ಇದರಿಂದ ಬೇಸತ್ತ ಬಾಲಕಿಯ ತಂದೆ, ಎಚ್ಚರಿಕೆ ನೀಡಿದ್ದರು. ಕೋಪಗೊಂಡಿದ್ದ ಆರೋಪಿ, ಬಾಲಕಿಯ ತಂದೆಯನ್ನು ಕೊಂದಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೃತ್ಯ ಎಸಗಿ ಜಾಹೀದ್ ಪರಾರಿಯಾಗಿದ್ದ. ಅವರ ಸಂಬಂಧಿಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಕೆಲ ಸುಳಿವು ಆಧರಿಸಿ ಆರೋಪಿ ಜಾಹೀದ್‌ನನ್ನು ಬಂಧಿಸಲಾಗಿದೆ' ಎಂದು ತಿಳಿಸಿವೆ.

ಆರೋಪಿ ಮನೆಯಲ್ಲಿ ಕೃತ್ಯ: 'ಬಾಲಕಿ, ರಸ್ತೆಯಲ್ಲಿ ಹೋಗುವಾಗ ಹಾಗೂ ಇತರೆಡೆ ಸಂಚರಿಸುವಾಗ ಆರೋಪಿ ಅಡ್ಡಗಟ್ಟುತ್ತಿದ್ದ. ತನ್ನನ್ನು ಪ್ರೀತಿಸುವಂತೆ ಪೀಡಿಸುತ್ತಿದ್ದ. ಮನೆ ಬಳಿಯೂ ಆಗಾಗ ಓಡಾಡಿ, ಅನುಚಿತವಾಗಿ ವರ್ತಿಸುತ್ತಿದ್ದ. ಈತನ ಕಾಟದಿಂದ ಬೇಸತ್ತ ಬಾಲಕಿ, ಗೂಡ್ಸ್ ವಾಹನ ಚಾಲಕರಾಗಿರುವ ತಂದೆಗೆ ವಿಷಯ ತಿಳಿಸಿದ್ದರು' ಎಂದು ಮೂಲಗಳು ಹೇಳಿವೆ.

'ತಿಂಗಳ ಹಿಂದೆಯಷ್ಟೇ ತಂದೆ, ಜಾಹೀದ್‌ಗೆ ಎಚ್ಚರಿಕೆ ನೀಡಿದ್ದರು. ಅಷ್ಟಾದರೂ ಆರೋಪಿ, ಬಾಲಕಿಗೆ ಕಿರುಕುಳ ನೀಡಲಾರಂಭಿಸಿದ್ದ. ಭಾನುವಾರವೂ ಬಾಲಕಿಯನ್ನು ಅಡ್ಡಗಟ್ಟಿ ಕಿರುಕುಳ ನೀಡಿದ್ದ. ವಿಷಯ ಗೊತ್ತಾಗುತ್ತಿದ್ದಂತೆ ಬಾಲಕಿಯ ತಂದೆ, ಆರೋಪಿ ವಾಸವಿರುವ ಮನೆಗೆ ಭಾನುವಾರ ರಾತ್ರಿ ಹೋಗಿದ್ದರು. ಜಾಹೀದ್‌ಗೆ ಬುದ್ಧಿವಾದ ಹೇಳುವಂತೆ ಮನೆಯವರಿಗೆ ತಿಳಿಸಿದ್ದರು.'

'ಬಾಲಕಿ ತಂದೆ, ಮನೆಯವರ ಜೊತೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಜಾಹೀದ್ ಸಹ ಸ್ಥಳದಲ್ಲಿದ್ದ. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಜಾಹೀದ್, ಬಾಲಕಿಯ ತಂದೆಗೆ ಚಾಕುವಿನಿಂದ ಇರಿದಿದ್ದ. ಸ್ಥಳದಲ್ಲಿ ಕುಸಿದು ಬಿದ್ದಿದ್ದ ಬಾಲಕಿಯ ತಂದೆಯನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೋಕ್ಸೊ ಚಿಂತನೆ: 'ಕೊಲೆ ಆರೋಪದಡಿ ಜಾಹೀದ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆರೋಪಿಯು ಬಾಲಕಿಗೆ ಕಿರುಕುಳ ನೀಡುತ್ತಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿಯೂ ಪ್ರಕರಣ ದಾಖಲಿಸಿಕೊಳ್ಳಲು ಚಿಂತನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿಷ್ಕಾ' ವಂಚನೆ: ಆಸ್ತಿ ಪತ್ತೆಗೆ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣವನ್ನು ಠೇವಣಿ ಇರಿಸಿಕೊಂಡು ವಾಪಸು ನೀಡದೇ ವಂಚಿಸಿದ್ದ ಆರೋಪದಡಿ 'ನಿಷ್ಕಾ ವಿವಿಧೋದ್ದೇಶ ಸೌಹಾರ್ದ ಕೋ–ಆಪರೇಟಿವ್ ನಿಯಮಿತ' ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ನಿರ್ದೇಶಕರ ಆಸ್ತಿಗಳ ಪತ್ತೆಗಾಗಿ ಶೋಧ ಆರಂಭಿಸಿದ್ದಾರೆ.

ಶ್ರೀನಿವಾಸನಗರದಲ್ಲಿ ಮುಖ್ಯ ಕಚೇರಿ ಹೊಂದಿದ್ದ ಸಂಸ್ಥೆಯಲ್ಲಿ ಬೆಂಗಳೂರು ಹಾಗೂ ರಾಜ್ಯದ ಹಲವು ನಗರಗಳ ಜನರು ಹಣ ಹೂಡಿಕೆ ಮಾಡಿದ್ದರು. ಆದರೆ, ನಿಗದಿತ ಸಮಯಕ್ಕೆ ಹೂಡಿಕೆದಾರರಿಗೆ ಹಣ ವಾಪಸು ನೀಡಿರಲಿಲ್ಲ. ಈ ವಂಚನೆ ವಿರುದ್ಧ ಹೂಡಿಕೆದಾರರು ಪೊಲೀಸರಿಗೆ ದೂರು ನೀಡಿದ್ದರು.

ಬಳ್ಳಾರಿ ಜಿಲ್ಲೆಯ ಕೌಲ್ ಬಜಾರ್ ಹಾಗೂ ಬೆಂಗಳೂರಿನ ಹನುಮಂತನಗರ ಠಾಣೆಗಳಲ್ಲಿ 2020ರಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದವು. ಎರಡೂ ಪ್ರಕರಣ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಸಿಐಡಿ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ತನಿಖೆ ಮುಂದುವರಿಸಿದ್ದು, ಸಂಸ್ಥೆ ಹಾಗೂ ನಿರ್ದೇಶಕರ ಹೆಸರಿನಲ್ಲಿರುವ ಆಸ್ತಿಗಳ ಪಟ್ಟಿ ಸಿದ್ಧಪಡಿಸುತ್ತಿದ್ದಾರೆ.

'ಪ್ರಮುಖ ಆರೋಪಿ ಫಣಿರಾಜ್‌ಗೌಡ, ಕೃಷ್ಣಕುಮಾರ್, ಬಸವರಾಜ್ ಹಾಗೂ ಇತರರು ಸೇರಿಕೊಂಡು 2011ರಲ್ಲಿ ನಿಷ್ಕಾ ವಿವಿಧೋದ್ದೇಶ ಸೌಹಾರ್ದ ಕೋ–ಆಪರೇಟಿವ್ ನಿಯಮಿತ ಸ್ಥಾಪಿಸಿದ್ದರು. ಠೇವಣಿದಾರರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ, ವಾಪಸು ನೀಡದೇ ವಂಚಿಸಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

14 ಆರೋಪಿಗಳ ಆಸ್ತಿ ಜಪ್ತಿಗೆ ಕ್ರಮ: 'ಠೇವಣಿದಾರರ ಹಣವನ್ನು ಸಾಲ ಹಾಗೂ ಇತರೆ ಉದ್ದೇಶಕ್ಕಾಗಿ ಹಲವೆಡೆ ವರ್ಗಾಯಿಸಿರುವ ಆರೋಪಿಗಳು, ಅದೇ ಹಣದಲ್ಲಿ ಆಸ್ತಿ ಮಾಡಿರುವ ಮಾಹಿತಿ ಇದೆ. ಹೀಗಾಗಿ, ಪ್ರಕರಣದ 14 ಆರೋಪಿಗಳ ಆಸ್ತಿ ಬಗ್ಗೆ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಅದೇ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಂಗ್ರಹಿಸಿ ಜಪ್ತಿಗೆ ಕೋರಿಕೆ ಸಲ್ಲಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಸಂಸ್ಥೆಯ ಮಾಜಿ ಅಧ್ಯಕ್ಷ ಫಣಿರಾಜ್ ಗೌಡ, ಉಪಾಧ್ಯಕ್ಷರಾಗಿದ್ದ ಕೃಷ್ಣಕುಮಾರ್, ಬಸವರಾಜು, ನಿರ್ದೇಶಕರಾಗಿದ್ದ ಜಿತೇಂದ್ರ ಕುಮಾರ್ ಸಾರಂಗಿ, ಎಂ. ಪ್ರಿಯದರ್ಶಿನಿ, ಪುಟ್ಟರಾಜು, ಸುಬ್ಬೇಗೌಡ, ಶಿವಲಿಂಗಯ್ಯ, ನಾಗೇಶ್, ವಿಜೇಂದ್ರಕುಮಾರ್, ತೇಜಶ್ವರಿ, ಎಂ. ಮರಿಸ್ವಾಮಿ, ಶ್ರೀಶಾ ಭಟ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ರಾಮರಾಜು ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದೆ' ಎಂದು ಮೂಲಗಳು ಹೇಳಿವೆ.

'ವಂಚನೆ ಕೃತ್ಯದಲ್ಲಿ 14 ಆರೋಪಿಗಳು ಭಾಗಿಯಾಗಿರುವ ಪುರಾವೆಗಳು ಸಿಕ್ಕಿವೆ. ಹೀಗಾಗಿ, ಎಲ್ಲರ ಆಸ್ತಿಗಳನ್ನು ಪತ್ತೆ ಮಾಡಿ ಜಪ್ತಿ ಮಾಡಲಾಗುವುದು. ಚಾಲ್ತಿಯಲ್ಲಿರುವ ಕಾನೂನಿನನ್ವಯ ಸಕ್ಷಮ ಪ್ರಾಧಿಕಾರದ ಮೂಲಕ ಠೇವಣಿದಾರರಿಗೆ ಹಣ ಸಿಗಲಿದೆ' ಎಂದು ತಿಳಿಸಿವೆ. 'ಆರೋಪಿಗಳ ಆಸ್ತಿ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇದ್ದರೆ (ಇನ್‌ಸ್ಪೆಕ್ಟರ್ ಟಿ.ಡಿ. ಸತೀಶ್‌ಕುಮಾರ್, ಮೊ. 9632482086) ತಿಳಿಸಬಹುದು. ಹೆಸರು ಗೌಪ್ಯವಾಗಿರಿಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

ಸ್ಪೇನ್ ನಟ ಗಾಬ್ರಿಯಲ್ ಬಂಧನ

ವೆನಿಸ್ (ಎಎಫ್‌ಪಿ): ಲೈಂಗಿಕ ದೌರ್ಜನ್ಯದ ಆರೋಪ ಹೊತ್ತಿರುವ ಸ್ಪೇನ್ ನಟ ಗಾಬ್ರಿಯಲ್ ಗೆವೆರಾ ಅವರನ್ನು ವೆನಿಸ್‌ನಲ್ಲಿ ಬಂಧಿಸಲಾಗಿದೆ ಎಂದು ಇಟಲಿಯ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

'ಮೈ ಫಾಲ್ಟ್' ಚಿತ್ರದಲ್ಲಿನ ಅಭಿನಯಕ್ಕಾಗಿ ಪ್ರಶಸ್ತಿಗೆ ಭಾಜನವಾಗಿರುವ 22 ಹರೆಯದ ಗೆವೆರಾ ಅವರು ವೆನಿಸ್‌ನಲ್ಲಿ ನಡೆಯುತ್ತಿರುವ 'ಫಿಲ್ಮಿಂಗ್ ಇಟಲಿ' ಚಿತ್ರೋತ್ಸವದಲ್ಲಿ ಪ್ರಶಸ್ತಿ ಸ್ವೀಕರಿಸಬೇಕಿತ್ತು. ವೆನಿಸ್ ಲಿಡೊಗೆ ಆಗಮಿಸಿದ್ದ ನಟನನ್ನು ಪೊಲೀಸರು ಬಂಧಿಸಿದರು.

ಅಧ್ಯಕ್ಷರಾಗಿ ಎ.ಎಸ್. ನಾಗರಾಜಸ್ವಾಮಿ ಮರು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ಎ.ಎಸ್. ನಾಗರಾಜಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ತಾ.ಸಿ. ತಿಮ್ಮಯ್ಯ ಮರು ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ಅವರನ್ನು ಆಯ್ಕೆ ಮಾಡಲಾಗಿದೆ. ಗೌರವಾಧ್ಯಕ್ಷರಾಗಿ ವೀರಭದ್ರಚನ್ನಮಲ್ಲ ಸ್ವಾಮೀಜಿ, ಸಂಸ್ಥಾಪಕ ಸದಸ್ಯರಾಗಿ ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಕಾರ್ಯಾಧ್ಯಕ್ಷರಾಗಿ ಎಂ. ಪ್ರಕಾಶಮೂರ್ತಿ, ಉಪಾಧ್ಯಕ್ಷರಾಗಿ ಎಚ್. ಶಂಕರ್, ಬಿ.ಸಿ. ರಾಜಕುಮಾರ್, ಕೋಶಾಧ್ಯಕ್ಷರಾಗಿ ಶಾಂತಲಾ ಸುರೇಶ್, ಕಾರ್ಯದರ್ಶಿಗಳಾಗಿ ಇಂದಿರಾ ಶರಣ್ ಜಮ್ಮಲದಿನ್ನಿ ಮತ್ತು ಬಿ.ಕೆ. ಸುಂದರೇಶ್, ಸಂಘಟನಾ ಕಾರ್ಯದರ್ಶಿಗಳಾಗಿ ಬಿ.ಸಿ. ಜಗದೀಶ್, ಷಡಾಕ್ಷರಿ, ಸಂಚಾಲಕರಾಗಿ ಎಸ್. ಸದಾಶಿವಯ್ಯ ಮತ್ತು ಉದಾಂತ ಶಿವಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಿ.ಕೆ. ರಾಮೇಗೌಡ, ಕೆ. ಪುಟ್ಟಕಾಮಯ್ಯ, ಎಂ.ಜಿ. ದಯಾನಂದಕಟ್ಟೆ, ಆರ್. ವಿಠ್ಠಲ್, ಪ್ರಭು ಅವರು ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.


ಕಸ ತೆರವುಗೊಳಿಸಿ

ಕಬ್ಬನ್‌ಪೇಟೆ ಬಡಾವಣೆಯ ಧರ್ಮರಾಜ ಸ್ವಾಮಿ ವಾರ್ಡ್‌ನ 3ನೇ ಅಡ್ಡ ರಸ್ತೆಯಲ್ಲಿರುವ ಲೂದ್ ಸ್ಕೂಲ್ ಪಕ್ಕದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಮಳೆಯಾದಾಗ, ಇಲ್ಲಿ ಸಂಗ್ರಹವಾಗಿರುವ ಕಸವೆಲ್ಲ ರಸ್ತೆಯ ಮೇಲೆ ಕೊಚ್ಚಿ ಹೋಗುತ್ತದೆ. ಇದರಿಂದ, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಜತೆಗೆ ಇದು ಸೊಳ್ಳೆಗಳ ತಾಣವಾಗಿ ಮಾರ್ಪಟ್ಟಿದ್ದು, ರೋಗಗಳು ಹರಡುವ ಭೀತಿ ಶುರುವಾಗಿದೆ. ಆದ್ದರಿಂದ, ಬಿಬಿಎಂಪಿ ಕೂಡಲೇ ಈ ಕಸವನ್ನು ವಿಲೇವಾರಿ ಮಾಡುವ ಮೂಲಕ ನಗರದ ಸೌಂದರ್ಯ ಹಾಗೂ ಸ್ವಚ್ಛತೆ ಕಾಪಾಡಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ



ಕಬ್ಬನ್‌ಪೇಟೆಯ ಲೂದ್ ಶಾಲೆ ಪಕ್ಕದಲ್ಲಿ ಹಾಕಿರುವ ಕಸ.



ಹೆಬ್ಬಾರ್ ಕಾಂಡಿಮೆಂಟ್ಸ್ ಮುಂಭಾಗದಲ್ಲಿ ವಾಹನಗಳನ್ನು ನಿಲ್ಲಿಸಿರುವುದು.

ಪಾದಚಾರಿ ಮಾರ್ಗದಲ್ಲಿ ಪಾರ್ಕಿಂಗ್

ಹೊಸಕೆರೆಹಳ್ಳಿಯ ಕೆರೆಕೋಡಿ ರಸ್ತೆಯ ಹೆಬ್ಬಾರ್ ಕಾಂಡಿಮೆಂಟ್ಸ್ ಮುಂಭಾಗದ 20 ಅಡಿ ರಸ್ತೆಯ ಪಾದಚಾರಿ ಮಾರ್ಗದಲ್ಲಿ ವಾಹನಗಳ ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಅನನಕೂಲವಾಗಿದೆ. ಇಲ್ಲಿ ಪ್ರತಿನಿತ್ಯ ಬಿಬಿಎಂಪಿ ಲಾರಿಗಳು, ಖಾಸಗಿ ವಾಹನಗಳು, ಟ್ಯಾಕ್ಸಿಗಳು, ಟೆಂಪೊಗಳನ್ನು ನಿಲ್ಲಿಸಲಾಗುತ್ತಿದೆ. ಇದರಿಂದ ಪಾದಚಾರಿಗಳು ಮುಖ್ಯರಸ್ತೆಯಲ್ಲೇ ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಸಂಚಾರ ಪೊಲೀಸರು ಇಲ್ಲಿನ ಅನಧಿಕೃತ ವಾಹನ ನಿಲುಗಡೆಯನ್ನು ತಪ್ಪಿಸಬೇಕು.

ರಾಮೇಗೌಡ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ

'ಮಿತಿ ಮೀರಿದ ಧೂಮಪಾನ ವ್ಯಸನಿಗಳ ಕಾಟ'

ಭಾರತೀಯ ವಿದ್ಯಾಭವನದ ಹಿಂಭಾಗದ ರಸ್ತೆಯಲ್ಲಿರುವ ಫೈಯರ್ ಫೀಲ್ಡ್ ಲೇಔಟ್‌ನ ಪಾರಿಜಾತ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿ ಧೂಮಪಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಈ ಅಪಾರ್ಟ್‌ಮೆಂಟ್ ಪಕ್ಕದಲ್ಲಿರುವ ಕಂಪನಿಯ ಉದ್ಯೋಗಿಗಳು ಪ್ರತಿದಿನ ಇಲ್ಲಿಗೆ ಬಂದು ಧೂಮಪಾನ ಮಾಡುತ್ತಿದ್ದಾರೆ. ಇದರಿಂದ, ಇಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಇದರ ಅಕ್ಕಪಕ್ಕದಲ್ಲಿ ಶಾಲಾ–ಕಾಲೇಜುಗಳಿದ್ದರೂ ಸಿಗರೇಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ನಿಯಂತ್ರಿಸಿ ಬಡಾವಣೆಯ ಸ್ವಚ್ಛತೆ ಕಾಪಾಡಬೇಕು.

ಜಗದೀಶ್ ಆರಾಧ್ಯ, ಸ್ಥಳೀಯ ನಿವಾಸಿ

'ಬಸ್ ತಂಗುದಾಣದ ಆಸನ ವ್ಯವಸ್ಥೆ ಸರಿಪಡಿಸಿ'

ರಾಜರಾಜೇಶ್ವರಿ ವಿಧಾನಸಭೆ ಕ್ಷೇತ್ರದ ವರ್ತುಲ ರಸ್ತೆಯ ಮಲ್ಲತ್ತಹಳ್ಳಿಯ ಡಾ. ಎ.ಐ.ಟಿ ಕಾಲೇಜಿನ ಮುಂಭಾಗದಲ್ಲಿರುವ ಬಸ್ ತಂಗುದಾಣದಲ್ಲಿ ಕುಳಿತುಕೊಳ್ಳುವ ಬೆಂಚ್ ಮುರಿದು ಬಿದ್ದಿದೆ. ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇಲ್ಲಿ ಬರುತ್ತಾರೆ. ಆದರೆ, ಕುಳಿತುಕೊಳ್ಳಲು ಅಳವಡಿಸಿದ್ದ ಕಬ್ಬಿಣದ ಬೆಂಚ್ ಸಂಪೂರ್ಣವಾಗಿ ಮುರಿದು ಬಿದ್ದಿದೆ. ಇದರಿಂದ, ಯಾರು ಇದರ ಮೇಲೆ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಆಸನದ ವ್ಯವಸ್ಥೆಯನ್ನು ಕಲ್ಪಿಸಬೇಕು.

ಎಚ್ ತುಕಾರಾಂ, ಮಲ್ಲತ್ತಹಳ್ಳಿ ನಿವಾಸಿ



ಎ.ಐ.ಟಿ ಕಾಲೇಜಿನ ಮುಂಭಾಗದಲ್ಲಿರುವ ಬಸ್ ತಂಗುದಾಣದ ದುಃಸ್ಥಿತಿ.

'ಮ್ಯಾನ್‌ಹೋಲ್ ಮುಚ್ಚಳ ಬದಲಿಸಿ'

ಎಂ.ಎಸ್.ಆರ್ ನಗರದ 2ನೇ ಕ್ರಾಸ್‌ನ ರಸ್ತೆಯಲ್ಲಿರುವ ಮ್ಯಾನ್‌ಹೋಲ್ ಮುಚ್ಚಳ ಒಡೆದು ಹೋಗಿದೆ. ಇದರಿಂದ, ದುರ್ವಾಸನೆ ಬೀರುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬಿಡಬ್ಲ್ಯೂಎಸ್‌ಬಿಬಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಮ್ಯಾನ್‌ಹೋಲ್‌ನ ಮುಚ್ಚಳವನ್ನು ಬದಲಿಸಬೇಕು.

ಕೃಷ್ಣಮೂರ್ತಿ, ಸ್ಥಳೀಯ ನಿವಾಸಿ



ಎಂ.ಎಸ್‌ಆರ್ ನಗರದ 2ನೇ ಕ್ರಾಸ್‌ನಲ್ಲಿರುವ ಮ್ಯಾನ್‌ಹೋಲ್ ಕಿತ್ತುಕೊಂಡು ಹೋಗಿರುವುದು.

ವರದಿ ಪರಿಣಾಮ

ಶೇಷಾದ್ರಿಪುರದಲ್ಲಿರುವ ಬಿಬಿಎಂಪಿ ಪಶ್ಚಿಮ ವಿಭಾಗದ ಜಂಟಿ ಆಯುಕ್ತರ ಕಚೇರಿಯ ಮುಂಭಾಗದಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಫ್ಲೆಕ್ಸ್ ತೆರವುಗೊಳಿಸಲಾಗಿದೆ.

'ಪ್ರಜಾವಾಣಿ' ಕುಂದು ಕೊರತೆ ವಿಭಾಗದಲ್ಲಿ ಆಗಸ್ಟ್ 28ರಂದು 'ಅನಧಿಕೃತ ಫ್ಲೆಕ್ಸ್ ತೆರವುಗೊಳಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬಿಬಿಎಂಪಿಯ ಅಧಿಕಾರಿಗಳು ಫ್ಲೆಕ್ಸ್ ತೆರವುಗೊಳಿಸಿದ್ದಾರೆ.



ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ಅಳವಡಿಸಿದ್ದ ಫ್ಲೆಕ್ಸ್ ತೆರವುಗೊಳಿಸಿರುವುದು.

ಬೆಂಗಳೂರು ಆರ್ಟ್ ಪಾರ್ಕ್‌ನ 'ಮೀಟ್ ದಿ ಆರ್ಟಿಸ್ಟ್' ಕಾರ್ಯಕ್ರಮ

ಶಿಲ್ಪ ಉದ್ಯಾನದಲ್ಲಿ ಕಲಾಕೃತಿಗಳ ಸೊಬಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರ ಕಲ್ಪನೆಯಲ್ಲಿ ಸ್ಥಳದಲ್ಲೇ ಅರಳಿದ ಹಲವು ಬಗೆಯ ಕಲಾಕೃತಿಗಳು, ಕಲಾವಿದರ ಜತೆಗೆ ಒಂದಷ್ಟು ಸಂವಾದ, ಕಲೆಗಳ ವರ್ಣನೆ...

–ಇದು 'ಬೆಂಗಳೂರು ಆರ್ಟ್ ಪಾರ್ಕ್' ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಶಿಲ್ಪ ಉದ್ಯಾನದಲ್ಲಿ ಭಾನುವಾರ ಆಯೋಜಿಸಿದ್ದ 'ಮೀಟ್ ದಿ ಆರ್ಟಿಸ್ಟ್' ಕಾರ್ಯಕ್ರಮದ ನೋಟಗಳು.

ಜಲವರ್ಣ, ತೈಲವರ್ಣ, ಆಕ್ರಿಲಿಕ್, ಡಿಜಿಟಲ್ ಪೇಯಿಂಟಿಂಗ್, ಸಮಕಾಲೀನ ಚಿತ್ರಕಲೆ, ಅಮೂರ್ತ ಕಲೆ... ಹೀಗೆ ನಾನಾ ಕಲಾಕೃತಿಗಳು ಕಲಾವಿದರ ಕೈಚಳಕದಲ್ಲಿ ಅನಾವರಣಗೊಂಡಿದ್ದವು. ಇಡೀ ದಿನ ನಡೆದ ಪ್ರದರ್ಶನದಲ್ಲಿ ಕಲಾಸಕ್ತರು ಕಲೆಗಳನ್ನು ಕಣ್ತುಂಬಿಕೊಂಡು ಅವುಗಳ ಮಾಹಿತಿ ಪಡೆದರು.

ಪುರಭವನ, ರವೀಂದ್ರ ಕಲಾಕ್ಷೇತ್ರ, ಕನ್ನಡಭವನಕ್ಕೆ ಬಂದವರೂ ಇತ್ತ ಕಣ್ಣು ಹಾಯಿಸಿ ಕಲಾಕೃತಿಗಳನ್ನು ಆಸ್ವಾದಿಸಿದರು. ಕಲಾವಿದರ ಕೈಯಲ್ಲಿ ನಾಡಿನ ಇತಿಹಾಸ, ಪ್ರಕೃತಿಯ ರಮಣೀಯತೆ, ಸಂಸ್ಕೃತಿ, ಗ್ರಾಮೀಣ ಸೊಗಡಿನ ಕಲಾಕೃತಿಗಳು ಅನಾವರಣಗೊಂಡಿದ್ದವು. ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಪ್ರದರ್ಶನ, ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು.

'ನಗರ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಿಂದ ಕಲಾವಿದರು ಪ್ರದರ್ಶನಕ್ಕೆ ಬಂದಿದ್ದಾರೆ. ಸ್ಥಳದಲ್ಲೇ ಕಲಾಕೃತಿ ರಚಿಸಿ ನೀಡುವ ಉದ್ದೇಶದಿಂದ ಪ್ರತಿ ತಿಂಗಳ ಮೊದಲ ವಾರ ಕಾರ್ಯಕ್ರಮ ನಡೆಸಲಾಗುತ್ತಿದೆ' ಎಂದು ಆರ್ಟ್ ಪಾರ್ಕ್ ಅಧ್ಯಕ್ಷ ಜಿ. ಜಯಕುಮಾರ್ ಹೇಳಿದರು.

'ನಮಗೆ ವಾಣಿಜ್ಯ ಉದ್ದೇಶ ಇಲ್ಲ. ಕಲಾವಿದರಿಗೆ ವೇದಿಕೆ ಕಲ್ಪಿಸುವುದು, ಪ್ರೇಕ್ಷಕರ ಜತೆಗೆ ಸಂವಾದ ನಡೆಸುವ ಏಕೈಕ ಉದ್ದೇಶದಿಂದ ಮೀಟ್ ದಿ ಆರ್ಟಿಸ್ಟ್ ಕಾರ್ಯಕ್ರಮ ರೂಪಿಸಲಾಗಿದೆ. ಕಡಿಮೆ ದರಕ್ಕೆ ಕಲಾಕೃತಿಗಳು ಲಭಿಸುತ್ತವೆ' ಎಂದು ಹೇಳಿದರು.

'ಜಗತ್ತನ್ನು ಕಂಡುಕೊಳ್ಳಲು ಕಲೆ, ಸಾಹಿತ್ಯವೊಂದು ಅಭಿವ್ಯಕ್ತಿ ಮಾಧ್ಯಮ. ಕಲಾವಿದರಿಗೆ ವೇದಿಕೆ ಅಗತ್ಯವಿದೆ' ಎಂದು ಹೇಳಿದರು. ಭೂಮಿಜಾದ ವ್ಯವಸ್ಥಾಪಕ ಟ್ರಸ್ಟಿ ಗಾಯತ್ರಿ ಕೃಷ್ಣ ಪ್ರದರ್ಶನ ಉದ್ಘಾಟಿಸಿದರು. 25ಕ್ಕೂ ಹೆಚ್ಚು ಕಲಾವಿದರು ಪಾಲ್ಗೊಂಡಿದ್ದರು.



'ಮೀಟ್ ದಿ ಆರ್ಟಿಸ್ಟ್' ಕಾರ್ಯಕ್ರಮದಲ್ಲಿ ಕಲಾವಿದ ಎಸ್‌ಜಿ.ವಾಸುದೇವ್, ಆರ್ಟ್ ಪಾರ್ಕ್ ಅಧ್ಯಕ್ಷ ಜಿ.ಜಯಕುಮಾರ್ ಅವರು ಕಲಾಕೃತಿ ವೀಕ್ಷಿಸಿದರು. – ಪ್ರಜಾವಾಣಿ ಚಿತ್ರ

> **ಮನೆ ಮನೆಗೂ ಚಿತ್ರಕಲೆಗಳನ್ನು ತಲುಪಿಸುವ ಉದ್ದೇಶದಿಂದ ಪ್ರದರ್ಶನ ಆಯೋಜಿಸಲಾಗುತ್ತಿದೆ. ಚಿತ್ರಸಂತೆಗಿಂತ ಕಡಿಮೆ ದರಕ್ಕೆ ಇಲ್ಲಿ ಕಲಾಕೃತಿಗಳು ಲಭಿಸುತ್ತವೆ**
> **ಮಂಜುನಾಥ್ ವಾಲಿ,** ಕಲಾವಿದ

> **ಚಿತ್ರಸಂತೆಗೆ ಹವ್ಯಾಸಿ ಕಲಾವಿದರೇ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಆರ್ಟ್ ಪಾರ್ಕ್ ಆಯೋಜಿಸುವ ಈ ಕಾರ್ಯಕ್ರಮದಲ್ಲಿ ವೃತ್ತಿಪರ ಕಲಾವಿದರಿಗೆ ಆದ್ಯತೆ ಇರುತ್ತದೆ**
> **ಮಹಾವೀರ್,** ಕಲಾಸಕ್ತ

ತಮಿಳುನಾಡಿಗೆ ನೀರು: ಕಲ್ಲು ಹೊತ್ತು ಪ್ರತಿಭಟನೆ

ಚಾಮರಾಜನಗರ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಭಾನುವಾರವೂ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕೆಆರ್‌ಎಸ್ ಜಲಾಶಯದಿಂದ ನೀರು ಹರಿಸಲು ಆರಂಭಿಸಿದ ನಂತರ ಪ್ರತಿ ದಿನ ಒಂದೊಂದು ರೀತಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಕನ್ನಡ ಚಳವಳಿಗಾರರು ನಗರದ ಭುವನೇಶ್ವರಿ ವೃತ್ತದಲ್ಲಿ ಚಪ್ಪಡಿ ಕಲ್ಲು ಹೊತ್ತುಕೊಂಡು ತಮ್ಮ ಆಕ್ರೋಶ ಹೊರಹಾಕಿದರು. ತಮಿಳುನಾಡು, ಕರ್ನಾಟಕ ಸರ್ಕಾರಗಳು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು. ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, 'ತಮಿಳುನಾಡಿಗೆ ನೀರು ಹರಿಸಲು ಆದೇಶಿಸುವ ಮೂಲಕ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕನ್ನಡಿಗರ ಮೇಲೆ ಚಪ್ಪಡಿ ಕಲ್ಲು ಹಾಕಿದೆ. ಅದರ ಸಂಕೇತವಾಗಿ ಚಪ್ಪಡಿ ಕಲ್ಲು ಹೊತ್ತು ಪ್ರತಿಭಟನೆ ನಡೆಸುತ್ತಿದ್ದೇವೆ' ಎಂದರು.

ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಗು. ಪುರುಷೋತ್ತಮ ಇತರರು ಇದ್ದರು.

ಟ್ಯಾಪ್‌ರೂಟ್: ಕ್ರೀಡಾಮೇಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ಯಾಪ್‌ರೂಟ್ ವಿದ್ಯಾಸಂಸ್ಥೆಗಳ ಬೃಹತ್ ಕ್ರೀಡಾಮೇಳ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು.

ಏಷ್ಯನ್ ಪ್ಯಾರಾ ಗೇಮ್ಸ್ ಚಿನ್ನದ ಪದಕ ವಿಜೇತೆ ರಕ್ಷಿತಾ ರಾಜು, 17ನೇ ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತೆ ಸುಶ್ಮಿತಾ ಪವರ್, ದಿ ಪ್ರಿಂಟರ್ಸ್ ಮೈಸೂರ್ ಪ್ರೈವೇಟ್ ಲಿಮಿಟೆಡ್‌ನ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಕಿರಣ್ ಸುಂದರ್ ರಾಜನ್ ಕ್ರೀಡಾಮೇಳಕ್ಕೆ ಚಾಲನೆ ನೀಡಿದರು.

ಟ್ಯಾಪ್‌ರೂಟ್ ವಿದ್ಯಾಸಂಸ್ಥೆಗಳ ನಿರ್ದೇಶಕ ಶ್ರೀಧರ್, ಸಹ ನಿರ್ದೇಶಕ ಹರಿಸರ್ವೋತ್ತಮ್ ರೆಡ್ಡಿ, ಶೈಕ್ಷಣಿಕ ವಿಜ್ಞಾನ ಸಂಯೋಜಕ ರಘುನಂದನ್, ಬಿಜಿನೆಸ್ ಹೆಡ್ ವೈಭವ್ ಕುಮಾರ್ ಸಿಂಗಾಲ್ ಶುಭ ಹಾರೈಸಿದರು.

ಟ್ಯಾಪ್‌ರೂಟ್ ಸಂಸ್ಥೆಯ 8 ಕಾಲೇಜುಗಳ 4,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.



ಟ್ಯಾಪ್‌ರೂಟ್ ವಿದ್ಯಾಸಂಸ್ಥೆಗಳ ಬೃಹತ್ ಕ್ರೀಡಾಮೇಳ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು.

ತೆಲಂಗಾಣಕ್ಕೆ ₹83 ಸಾವಿರ ಕೋಟಿಯ ರೈಲ್ವೆ ಯೋಜನೆ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಒಟ್ಟು ₹83,543 ಕೋಟಿ ವೆಚ್ಚದಲ್ಲಿ 15 ಹೊಸ ರೈಲು ಮಾರ್ಗಗಳು ಸೇರಿ 30 ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಜಿ. ಕಿಶನ್ ರೆಡ್ಡಿ ಭಾನುವಾರ ತಿಳಿಸಿದ್ದಾರೆ.

ಆಡಳಿತಾರೂಢ ಬಿಆರ್‌ಎಸ್ ಅಸಹಕಾರದಿಂದಾಗಿ 700 ಕಿಲೋಮೀಟರ್ ರೈಲು ಹಳಿ ಹಾಕುವ ಕಾಮಗಾರಿ ಸ್ಥಗಿತಗೊಂಡಿವೆ ಎಂದು ಆರೋಪಿಸಿದರು.

'ರೈಲ್ವೆ ಯೋಜನೆಗಳಿಗೆ ಭೂಸ್ವಾಧೀನ ಚುರುಕುಗೊಳಿಸುವಂತೆ, ಹೈದರಾಬಾದ್‌ನಲ್ಲಿ ಬಹು-ಮಾದರಿ ಸಾರಿಗೆ ವ್ಯವಸ್ಥೆಯ (ಎಂಎಂಟಿಎಸ್) ಎರಡನೇ ಹಂತದ ಯೋಜನೆಗಳಿಗೆ ಬೆಂಬಲ ನೀಡುವಂತೆ ರಾಜ್ಯ ಸರ್ಕಾರವನ್ನು ಕೋರಿದ್ದೇವೆ. ಆದರೆ, ಇದಕ್ಕೆ ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ' ಎಂದು ತೆಲಂಗಾಣ ಬಿಜೆಪಿ ಅಧ್ಯಕ್ಷರೂ ಆಗಿರುವ ರೆಡ್ಡಿ ಆರೋಪಿಸಿದರು.

ತೆಲಂಗಾಣದಲ್ಲಿ 40 ರೈಲು ನಿಲ್ದಾಣಗಳನ್ನು ಆಧುನೀಕರಿಸಲು ಮತ್ತು ಪುನರ್ ಅಭಿವೃದ್ಧಿಪಡಿಸಲು ಇತ್ತೀಚೆಗೆ ರೈಲ್ವೆ ಅನುಮೋದನೆ ನೀಡಿದೆ. ಕೇಂದ್ರ ಸರ್ಕಾರ ₹ 2,300 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಈಗಾಗಲೇ 21 ನಿಲ್ದಾಣಗಳಿಗೆ ಪ್ರಧಾನಿ ಮೋದಿ ಅಡಿಪಾಯ ಹಾಕಿದ್ದಾರೆ ಎಂದು ಹೇಳಿದರು.

'ದೇವರು ಇಲ್ಲ ಎನ್ನುವವನೇ ಮೂರ್ಖ'

ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವರು ಇಲ್ಲ ಎಂದು ಪ್ರತಿಪಾದಿಸುವವರೇ ದೊಡ್ಡ ಮೂರ್ಖರು' ಎಂದು ಹರಿಹರಪುರದ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಹರಿಹರಪುರ ಪೀಠ ಮತ್ತು ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ ಭಾನುವಾರ ಆಯೋಜಿಸಿದ್ದ ಸಾಧಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಿರಂತರ, ಪೂರ್ಣ, ಅಖಂಡ ಜ್ಞಾನವೇ ದೇವರು. ಬುದ್ಧಿಗೆ ನಿಲುಕದ ಎಲ್ಲ ನಂಬಿಕೆಗಳನ್ನು ಮೂಢನಂಬಿಕೆ ಎಂದು ಸಾರಸಗಟಾಗಿ ಅಭಿಪ್ರಾಯ ಹೊಂದಿರುವ ಒಂದು ವರ್ಗ ಇದೆ. ದೇವರ ತತ್ವಾನುಭವದ ಪರಿಚಯವೇ ಈ ವರ್ಗಕ್ಕೆ ಇಲ್ಲ. ಬುದ್ಧಿಗೆ ನಿಲುಕದೇ ಇರುವ ವಿಚಾರದಲ್ಲಿ ತನ್ನ ನಂಬಿಕೆಯು ತನಗೆ ಅಥವಾ ಪರರಿಗೆ ಹಿಂಸೆಯನ್ನು ಉಂಟು ಮಾಡಿದರೆ ಅದು ಮೂಢನಂಬಿಕೆ. ಹಿಂಸೆ ಉಂಟು ಮಾಡದೇ ಇದ್ದರೆ ಅದು ತನ್ನ ವಿವೇಚನೆಗೆ ಬಿಟ್ಟಿದ್ದು. ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ' ಎಂದರು.

ಶಾಸಕ ಕೆ. ಗೋಪಾಲಯ್ಯ ಮಾತನಾಡಿ, 'ಮಳೆ ಕಡಿಮೆಯಾಗಿದೆ. ಕಾವೇರಿಯಲ್ಲಿ ಇರುವ ನೀರು ತಮಿಳುನಾಡಿಗೆ ಹರಿದು ಹೋದರೆ ಬಹಳ ತೊಂದರೆಯಾಗಲಿದೆ. 1.5 ಕೋಟಿ ಜನರಿರುವ ಬೆಂಗಳೂರಿನವರೇ ಕಾವೇರಿ ನೀರು ಹೆಚ್ಚು ಬಳಸುವುದು. ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಮಂಡ್ಯ ಇನ್ನಿತರ ಕಡೆಗಳಲ್ಲಿ ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಆದರೆ, ಬೆಂಗಳೂರಿನ ಜನ ಬಾಯಿಮುಚ್ಚಿ ಕುಳಿತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಇಸ್ರೊ ಪ್ರಾಧ್ಯಾಪಕ ಬಿ.ಎನ್. ಸುರೇಶ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ಸಂಸ್ಕೃತ ವಿದ್ವಾಂಸ ಕೆ.ಎನ್. ಸೂರ್ಯನಾರಾಯಣ ಅವರಿಗೆ ಸಾಧಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಜೆಪಿ ಮುಖಂಡ ಶ್ರೀಹರಿ ಅರವಿಂದ ಘೋಳಸಂಗಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ, ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ ಪ್ರಧಾನ ಸಂಚಾಲಕ ಬಿ.ಎಸ್. ರಾಘವೇಂದ್ರ ಭಟ್, ಸಮಾಜದ ಪ್ರಮುಖರಾದ ರುದ್ರಮುನಿ, ನರಸಿಂಹ ಮೂರ್ತಿ, ಪ್ರವೀಣ್ ಮಾತನಾಡಿದರು.



ಬಿ.ಎನ್. ಸುರೇಶ್ ಹಾಗೂ ಕೆ.ಎನ್. ಸೂರ್ಯನಾರಾಯಣ ಅವರಿಗೆ 'ಸಾಧಕಶ್ರೀ' ಪ್ರಶಸ್ತಿಯನ್ನು ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಪ್ರದಾನ ಮಾಡಿದರು. ಎಚ್.ಎಸ್. ಸಚ್ಚಿದಾನಂದ ಮೂರ್ತಿ, ರವಿಶಂಕರ್, ಶಾಸಕ ಕೆ. ಗೋಪಾಲಯ್ಯ, ರಾಘವೇಂದ್ರ ಭಟ್ ಇದ್ದರು. –ಪ್ರಜಾವಾಣಿ ಚಿತ್ರ

'ಉದಯನಿಧಿ ವಜಾಗೊಳಿಸಿ'

ಬೆಂಗಳೂರು: ಸನಾತನ ಧರ್ಮ ನಿರ್ಮೂಲನೆ ಆಗಬೇಕು ಎಂದು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆ ನೀಡಿದ್ದಾರೆ. ದುರಹಂಕಾರ ಮತ್ತು ಅಜ್ಞಾನದಿಂದ ಹೇಳಿಕೆ ನೀಡಿರುವ ಅವರನ್ನು ಸಚಿವ ಸ್ಥಾನದಿಂದಲೇ ಉಚ್ಚಾಟಿಸಬೇಕು ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಒತ್ತಾಯಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿರುವ ಅವರು, ಇಂತಹ ದ್ವೇಷಕಾರಿ ಹೇಳಿಕೆ ನೀಡಿದ್ದಕ್ಕಾಗಿ ಅವರು ದೇಶದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ವಚನ ಶ್ರಾವಣ–2023: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಎಸ್.ಐ. ಭಾವಿಕಟ್ಟಿ, ಅಧ್ಯಕ್ಷತೆ: ಬಿ.ಕೆ. ರಾಜು, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಶಾರದ ವಿದ್ಯಾಲಯ, ಮಾಚೋಹಳ್ಳಿ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 9.30ರಿಂದ

ಬಾಲಕಿಯರ ಉಚಿತ ವಸತಿಗೃಹ ನಿರ್ಮಾಣ ಕಾಮಗಾರಿಗೆ ಶಂಕು ಸ್ಥಾಪನೆ: ರಾಮಲಿಂಗಾರೆಡ್ಡಿ, ನಾಮಫಲಕ ಅನಾವರಣ: ಸಂತೋಷ್ ಎಸ್. ಲಾಡ್, ಅತಿಥಿಗಳು: ಉದಯ್ ಬಿ. ಗರುಡಾಚಾರ್, ಶ್ರೀನಿವಾಸ್ ಮಾನೆ, ಪಿ.ಜಿ.ಆರ್. ಸಿಂಧ್ಯ, ಅಧ್ಯಕ್ಷತೆ: ಕೆ. ಜಿಯೋಜಿರಾವ್, ಆಯೋಜನೆ ಮತ್ತು ಸ್ಥಳ: ಬಿ. ಅರಸೋಜಿರಾವ್ ಧರ್ಮ ಸಂಸ್ಥೆ, ವಿಶ್ವೇಶ್ವರಪುರ, ಬೆಳಿಗ್ಗೆ 10ರಿಂದ

'ಬರಿದಾದ ಕಾವೇರಿ–ಮುಂದೇನು' ಸಮಾಲೋಚನಾ ಸಭೆ: ಆಯೋಜನೆ: ಕನ್ನಡ ಕ್ರಿಯಾ ಸಮಿತಿ, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 5

ರಾಘವೇಂದ್ರತೀರ್ಥ ಗುರುಸಾರ್ವಭೌಮರ ಆರಾಧನಾ ಸಪ್ತರಾತ್ರೋತ್ಸವ: 'ಸರ್ವಸಮರ್ಪಣೋತ್ಸವ' ಸಂಸ್ಥಾನ ಪೂಜೆ: ವಿದ್ಯಾಶ್ರೀಶತೀರ್ಥ ಶ್ರೀಪಾದ ಸ್ವಾಮೀಜಿ ಬೆಳಿಗ್ಗೆ 10ಕ್ಕೆ, 'ರಾಘವೇಂದ್ರ ವಿಜಯ ಪ್ರವಚನ (ರಾಯರ ಜೀವನ ಚರಿತ್ರೆ)' ಉಪನ್ಯಾಸ: ಜಗನ್ನಾಥಚಾರ್ಯ ರಾಯಚೂರು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ

ಪ್ರವಚನ ವಾಹಿನಿ: 'ಆರೋಗ್ಯ–ಅಧ್ಯಾತ್ಮ' ಕುರಿತು ಉಪನ್ಯಾಸ: ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಶ್ರೀಮದ್ಭಾಗವತ ಸಪ್ತಾಹ: 'ರುಕ್ಮಿಣಿ ವಿವಾಹ' ಕುರಿತು ಉಪನ್ಯಾಸ: ಅರಳುಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಧಕೃಷ್ಣ ದೇವಸ್ಥಾನ ಭಕ್ತ ಮಂಡಳಿ ಟ್ರಸ್ಟ್, ಸಂಜಯನಗರ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಕಂಬಳಿಹುಳು ಪ್ರಾಜೆಕ್ಟ್‌ನಡಿ ಮಕ್ಕಳಿಗೆ ವಿವರಣೆ

ಪರಿಸರದಲ್ಲಿ ಕಲಿಯುತ್ತಾ ಕಲಿಸುತ್ತಾ...

ಮಕ್ಕಳಿಗೆ ಪರಿಸರದ ಮೂಲಕವೇ ಶಿಕ್ಷಣ ಕಲಿಸಬೇಕು. ಮಕ್ಕಳ ಜೊತೆಗೆ ಶಿಕ್ಷಕರೂ ಕಲಿಯುತ್ತಾ, ಕಲಿಸುತ್ತಾ ಹೆಜ್ಜೆ ಹಾಕಬೇಕು. ಇದೇ ಮಾದರಿ ಅನುಸರಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಮೂಡಂಬೈಲು ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ **ಅರವಿಂದ ಕುಡ್ಲ, 'ಸೆ.5ರ ಶಿಕ್ಷಕರ ದಿನಾಚರಣೆ'** ಸಂದರ್ಭದಲ್ಲಿ ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

'ನಾವು ಮಕ್ಕಳನ್ನು ತರಗತಿಯೊಳಗೆ ಕೂರಿಸಿಕೊಂಡು, ತರಗತಿಯ ಹೊರಗಿನ ಪರಿಸರದಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ಕಲಿಸು ತ್ತೇವೆ. ಆದರೆ, ಮಕ್ಕಳನ್ನು ಪರಿಸರದ ನಡುವೆಯೇ ಕೂರಿಸಿ ದರೆ, ಅನೇಕ ವಿಷಯಗಳನ್ನು ಕಲಿಯುತ್ತಾರೆ' - ಹಿರಿಯ ಶಿಕ್ಷಣ ಚಿಂತಕರೊಬ್ಬರು ಹೇಳಿದ ಈ ಮಾತು ಸದಾ ನೆನಪಾಗುತ್ತದೆ.

ನಾನು ಸರ್ಕಾರಿ ಶಾಲಾ ಶಿಕ್ಷಕನಾಗಿ ಕೆಲಸಕ್ಕೆ ಸೇರಿದ್ದು ಕಾಡಿನ ಅಂಚಿನ ಗ್ರಾಮೀಣ ಭಾಗದ ಶಾಲೆಗೆ. ಆಗ, ಮಧ್ಯಾಹ್ನದ ಬಿಸಿಯೂಟಕ್ಕಾಗಿ ಶಾಲೆ ಅಂಗಳದಲ್ಲಿ ತರಕಾರಿ ಬೆಳೆಯಲು ಪೋಷಕರ ನೆರವಿನಿಂದ ಕೈತೋಟ ಮಾಡಿದ್ದೆ. ಆ ತೋಟಕ್ಕೆ ಬೀಜ ಹಾಕಿಸಿದ್ದೆ. ಆ ಬೀಜಗಳು ಮೊಳೆತು ಮೊದಲ ಎರಡು ಎಲೆಗಳು ಮೂಡಿದಾಗ ಮಕ್ಕಳು 'ಓ..ಇದು ಸೌತೆ ಬಳ್ಳಿ. ಅರೆ ಇದು ಕುಂಬಳ ಬಳ್ಳಿ, ಅಲ್ವಾ. ಇದು ಮಾತ್ರ ಚೀನೀಕಾಯಿ ಬಳ್ಳಿಯೇ' ಎಂದು ಸುಲಲಿತವಾಗಿ ಗುರುತಿಸಿ ಹೇಳುತ್ತಿದ್ದರು. ಗ್ರಾಮೀಣ ಪರಿಸರದಲ್ಲಿ ಬೆಳೆಯುವ ಮಕ್ಕಳಲ್ಲಿನ ಈ ಸಸ್ಯಗಳ ಜ್ಞಾನ ಕಂಡು ಬೆರಗಾದೆ. ಇಂಥ ಮಕ್ಕಳಿಗೆ, 'ಸಸ್ಯಶಾಸ್ತ್ರದ ಪಾಠ ಮಾಡುವುದು ಎಷ್ಟು ಸರಿ' ಎಂಬ ಪ್ರಶ್ನೆ ಮೂಡಿತ್ತು.

ಪರಿಸರದ ಮೂಲಕ ಶಿಕ್ಷಣ ಸಿಗಬೇಕು. ಬಹಳಷ್ಟು ಮಕ್ಕಳಿಗೆ ಪರಿಸರದ ಕಥೆಗಳೆಂದರೆ ಬಹಳ ಇಷ್ಟವಾಗುತ್ತವೆ. ಆಸಕ್ತಿಯಿಂದ ಕೇಳಿ ತಿಳಿದುಕೊಳ್ಳುತ್ತಾರೆ. ಇದು ನನ್ನ ಅನುಭವ ಕೂಡ. ಹೀಗೆ ಹೇಳುವಾಗ ಒಂದು ಘಟನೆ ನೆನಪಾಗುತ್ತದೆ. ಒಮ್ಮೆ ನಾನು ಬಿಡುವಿನ ಸಮಯದಲ್ಲಿ ಶಾಲೆಯ ಸುತ್ತಲಿದ್ದ ಹೂವು, ಕೀಟ, ಚಿಟ್ಟೆಗಳ ಫೋಟೊ ತೆಗೆಯುತ್ತಿದ್ದೆ. ಫೋಟೊ ತೆಗೆದಾಗಲೆಲ್ಲ, ಮಕ್ಕಳು ಓಡೋಡಿ ಬಂದು, 'ಯಾವ ಫೋಟೊ ತೆಗೆದ್ರಿ ತೋರಿಸಿ ಸರ್' ಎಂದು ದುಂಬಾಲು ಬೀಳುತ್ತಿದ್ದರು. ಕ್ಲಿಕ್ಕಿಸಿದ ಫೋಟೊ ತೋರಿಸಿದಾಗ, 'ಇದು ಯಾವ ಹೂವು, ಯಾವ ಹಣ್ಣು, ಯಾವ ಹಕ್ಕಿ, ಪ್ರಾಣಿ, ಕೀಟ.. ಇದರ ಬಣ್ಣ ಏಕೆ ಹೀಗಿದೆ ? ಇದು ಎಲ್ಲ ಕಡೆ ಇರುತ್ತದಾ' - ಇಂಥ ಹಲವಾರು ಪ್ರಶ್ನೆ ಕೇಳುತ್ತಿದ್ದರು.

ಮಕ್ಕಳ ಕೆಲವೊಂದು ಕುತೂಹಲದ ಪ್ರಶ್ನೆಗೆ ಉತ್ತರ ಹೇಳಲು / ವಿವರಿಸಲು ಕಷ್ಟವಾಗುತ್ತಿತ್ತು. ಅವರ ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿಯೇ ನಾನೂ ಹುಡುಕಾಟ ನಡೆಸುತ್ತಿದ್ದೆ. ಇಂಟರ್ನೆಟ್, ಸಾಮಾಜಿಕ ಜಾಲತಾಣಗಳನ್ನು ಜಾಲಾಡಿ ಪುಸ್ತಕಗಳನ್ನು ತಡಕಾಡಿ ಉತ್ತರಗಳನ್ನು ಹುಡುಕಿ ಮಕ್ಕಳಿಗೂ ಹೇಳುತ್ತಿದ್ದೆ. ಈ ಬೆಳವಣಿಗೆಗಳಿಂದ ಮಕ್ಕಳ ಜೊತೆಗೆ, ನನ್ನ ಪರಿಸರ ಕಲಿಕಾಸಕ್ತಿಯೂ ವಿಸ್ತಾರವಾಯಿತು. ಸಾಮಾಜಿಕ ಜಾಲತಾಣಗಳಲ್ಲಿ ಫೋಟೊಗ್ರಫಿ, ಹಕ್ಕಿ, ಚಿಟ್ಟೆ, ಕಪ್ಪೆ, ಜೇಡ ಮೊದಲಾದ ಜೀವಿಗಳ ಬಗ್ಗೆ ಆಸಕ್ತರ ಗುಂಪುಗಳು ಪರಿಚಯ ವಾದವು. ಪರಿಸರ ಶಿಕ್ಷಣ ಸಂಬಂಧಿಸಿದ ಕಾರ್ಯಾಗಾರಗಳಲ್ಲಿ ಭಾಗವಹಿಸಿದೆ. ನಾನು ಕಲಿತಿದ್ದೆಲ್ಲವನ್ನೂ ಮಕ್ಕಳಿಗೆ ವರ್ಗಾಯಿಸುತ್ತಾ ಹೊರಟೆ. ಪ್ರತಿ ಜೀವಿಯ ಸಂತಾನೋತ್ಪತ್ತಿಕಾಲ ಮತ್ತು ವಿಧಾನ ವಿಶಿಷ್ಟವಾದದ್ದು. ಕಪ್ಪೆಗಳು ಮಳೆಗಾಲದಲ್ಲಿ ಮಾತ್ರ ಏಕೆ ಕೂಗುತ್ತವೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿದ್ದೇ ಇಂಥ ಹುಡುಕಾಟದ ಸಮಯದಲ್ಲಿ.

ಈ ಚಟುವಟಿಕೆ ನಡುವೆ ಕಳೆದವರ್ಷ ಮಕ್ಕಳ ಸಹಭಾಗಿತ್ವದಲ್ಲಿ ಕಂಬಳಿಹುಳುಗಳನ್ನು ಸಾಕಿ ಚಿಟ್ಟೆಯಾಗಿಸುವ ಕಿರು ಯೋಜನೆ(ಪ್ರಾಜೆಕ್ಟ್)ಯೊಂದನ್ನು ತೆಗೆದುಕೊಂಡಿದ್ದೆ. ಈ ಯೋಜನೆಯಲ್ಲಿ ಮಕ್ಕಳೊಂದಿಗೆ ಸೇರಿ ಸಸ್ಯಗಳ ಮೇಲೆ ಹರಿದಾಡುವ ಕಂಬಳಿಹುಳುಗಳನ್ನು ತಂದು, ರೇಷ್ಮೆ ಹುಳು ಸಾಕಿದಂತೆ ಸಾಕಿ ಕೊನೆಗೆ ಅದರಿಂದ ಚಿಟ್ಟೆ ಅಥವಾ ಪತಂಗ ಹೊರಬರುವ ಪ್ರಕ್ರಿಯೆಯನ್ನು ಗಮನಿಸಿ ದಾಖಲಿಸಬೇಕಿತ್ತು. ಮಕ್ಕಳು ಬಹಳ ಉತ್ಸಾಹದಿಂದ ಈ ಯೋಜನೆಯಲ್ಲಿ ಪಾಲ್ಗೊಂಡರು, ಅವರಿಗೆ ತುಂಬಾ ಖುಷಿ ಕೊಟ್ಟಿತು.

ಈ ಪ್ರಾಜೆಕ್ಟ್ ಮುಗಿದ ಮೇಲೆ, ಮಕ್ಕಳಿಗೆ 'ನೀವು ಕಂಬಳಿಹುಳು ಸಾಕಿದ್ದರಿಂದ ಏನೇನು ತಿಳಿದುಕೊಂಡಿದ್ದೀರಿ, ಬರೆಯಿರಿ' ಎಂದು ಹೇಳಿ ಬಿಳಿ ಹಾಳೆಯೊಂದನ್ನು ಕೊಟ್ಟೆ. ಈ ಹಿಂದೆ ಪರೀಕ್ಷೆ ವೇಳೆ ಹಾಳೆ ಕೊಟ್ಟರೆ, ಏನೂ ಬರೆಯದೇ ಖಾಲಿ ಹಾಳೆಯನ್ನು ವಾಪಸ್ ಕೊಡುತ್ತಿದ್ದ ಮಕ್ಕಳು, ಈಗ ಅರ್ಧ ಪುಟಕ್ಕೂ ಹೆಚ್ಚು ತಮ್ಮ ಅನುಭವವನ್ನು ಬರೆದಿದ್ದರು. ಅವರ ಭಾಷಾ ಸಾಮರ್ಥ್ಯ, ಅನುಭವ, ವಿಜ್ಞಾನ ಕಲಿಕೆಗಳೆಲ್ಲ ಅಲ್ಲಿ ವ್ಯಕ್ತವಾಗಿದ್ದವು. ನೋಡಿ ಕಲಿಯುವ, ಮಾಡಿ ತಿಳಿಯುವ ವಿಧಾನ ಅವರಲ್ಲಿ ಉತ್ತಮ ಕಲಿಕೆಯನ್ನು ಉಂಟುಮಾಡಬಲ್ಲದು ಎಂಬುದು ನಮಗೂ ಅರ್ಥವಾಗಿತ್ತು.

ಕಂಬಳಿ ಹುಳು ಪ್ರಾಜೆಕ್ಟ್ ವೇಳೆ, ನನ್ನ ಬಳಿಯಿದ್ದ ಕೆಲವು ಚಿಟ್ಟೆ, ಹಕ್ಕಿ, ಜೇಡದಂತಹ ಜೀವಿಗಳಿಗೆ ಸಂಬಂಧಿಸಿದ ಚಿತ್ರಸಹಿತ ಪುಸ್ತಕಗಳನ್ನು ಮಕ್ಕಳಿಗೆ ಸಿಗುವಂತೆ ಶಾಲೆಯ ಪುಸ್ತಕದ ಗೂಡಿನಲ್ಲಿ ಇಟ್ಟಿದ್ದೆ. ಪ್ರಾಜೆಕ್ಟ್‌ನಿಂದ ಪ್ರೇರಿತರಾದ ಪುಟಾಣಿಗಳು, ಈಗ ಯಾವುದೇ ಕೀಟ ಕಂಡರೂ ತಕ್ಷಣ ಓಡಿ ಬಂದು, 'ಅಲ್ಲೊಂದು ಹುಳ ಇದೆ ಫೋಟೊ ತೆಗೀರಿ ಸಾರ್' ಎಂದು ದುಂಬಾಲು ಬೀಳುತ್ತಾರೆ. ಫೋಟೊ ತೆಗೆದ ನಂತರ 'ಈ ಕೀಟ ಯಾವುದು ಎಂದು ಅಲ್ಲಿರುವ ಪುಸ್ತಕದಲ್ಲಿ ಹುಡುಕುತ್ತೀರಾ' ಎಂದು ಕೇಳಿದರೆ, ಥಟ್ಟನೆ ಪುಸ್ತಕ ತೆಗೆದು, ತಾವು ನೋಡಿದ ಕೀಟದ ಚಿತ್ರವನ್ನು ಹುಡುಕಿ, 'ಇಲ್ಲಿದೆ ನೋಡಿ, ಇದೇ ಇರಬೇಕು' ಎಂದು ತೋರಿಸುತ್ತಾರೆ. ಒಂದೇ ರೀತಿಯ ಎರಡು ಜೀವಿಯ ಚಿತ್ರಗಳನ್ನು ಕಂಡರೆ ಅವುಗಳಲ್ಲಿ ತಾವು ನೋಡಿದ್ದು ಯಾವುದು ಎಂದು ವಿಮರ್ಶೆ ಮಾಡುತ್ತಾರೆ.

ಹಿಂದೆ ಓತಿಕ್ಯಾತ ಕಂಡರೆ ಕಲ್ಲು ಹೊಡೆದು ಸಾಯಿಸುತ್ತಿದ್ದ ಮಕ್ಕಳು ಈಗ ಕುತೂಹಲದಿಂದ ಅದನ್ನು ಗಮನಿಸುತ್ತಾರೆ. ಹಾವುಗಳನ್ನು ಕಂಡರೆ ಕರೆದು ತೋರಿಸುತ್ತಾರೆ. ಅದರಲ್ಲಿ ವಿಷ ಇದೆಯೇ ಎಂದು ಪ್ರಶ್ನಿಸುತ್ತಾರೆ. ಹಕ್ಕಿಗಳನ್ನು ಕಂಡರೆ ಸಂತೋಷಪಡುತ್ತಾರೆ. ಅವುಗಳು ಗೂಡು ಕಟ್ಟುವುದನ್ನು ಕಂಡರೆ ತೊಂದರೆ ಕೊಡದೆ ಸುಮ್ಮನೆ ಕುತೂಹಲದಿಂದ ಗಮನಿಸುತ್ತಾರೆ. ಜೇಡ, ಹಲ್ಲಿ, ಜಿರಲೆ ಕಂಡರೆ ಬೆಚ್ಚಿ ಬೀಳುವ ಬದಲು ಅದರ ಬಣ್ಣ ಆಕಾರ ಗಾತ್ರಗಳನ್ನು ಗಮನಿಸಿ ಅಗತ್ಯಬಿದ್ದರೆ ಅವುಗಳನ್ನು ತರಗತಿಯಿಂದ ಹೊರಗೆ ಬಿಟ್ಟು ಬರುತ್ತಾರೆ. ಅವರ ಮನೆಯಲ್ಲೇನಾದರೂ ವಿಶೇಷ ಬಣ್ಣ ಅಥವಾ ಆಕಾರದ ಜೀವಿ ಕಂಡರೆ ಪೋಷಕರ ಮೊಬೈಲ್‌ನಲ್ಲಿ ಫೋಟೊ ತೆಗೆದು 'ಇದ್ಯಾವ ಜೀವಿ ಹೇಳಿ ಸಾರ್' ಎಂದು ಕಳುಹಿಸುತ್ತಾರೆ. ಇದೆಲ್ಲ ಪರಿಸರ ಶಿಕ್ಷಣ ದಿಂದ ಮಕ್ಕಳಲ್ಲಾಗಿರುವ ಬದಲಾವಣೆಗಳು.

ಪರಿಸರದೊಂದಿಗೆ ಕಲಿಕೆ ಮಕ್ಕಳಲ್ಲಿ ಗಮನಿಸುವಿಕೆ, ಪ್ರಶ್ನಿಸುವಿಕೆ, ಆಸಕ್ತಿ, ಕುತೂಹಲ ಮತ್ತು ಅಧ್ಯಯನ ಪ್ರವೃತ್ತಿಯನ್ನು ಬೆಳೆಸುತ್ತದೆ. ಜೊತೆಗೆ ಪರಿಸರದ ಬಗ್ಗೆ ಕಾಳಜಿಯನ್ನೂ ಬೆಳೆಸುತ್ತದೆ. ❖




ಕಾನನದ ನಡುವೆ ಮಕ್ಕಳಿಗೆ ಪರಿಸರದ ಪಾಠ

'ಸ್ಪೇಸ್'ನಲ್ಲಿ ಇನ್ನಷ್ಟು ಕೋರ್ಸ್,ಉದ್ಯೋಗ

ಗುರುರಾಜ್ ಎಸ್ ದಾವಣಗೆರೆ

ಕಳೆದ ಸಂಚಿಕೆಯಿಂದ



ಭಾರತ ಹಾಗೂ ವಿಶ್ವದ ಬಾಹ್ಯಾಕಾಶ (ಸ್ಪೇಸ್) ಯೋಜನೆಗಳು ಒಂದೊಂದೇ ಯಶಸ್ವಿಯಾಗುತ್ತಿದ್ದಂತೆ ವಿದ್ಯಾರ್ಥಿ ಸಮೂಹದಲ್ಲಿ ಬಾಹ್ಯಾಕಾಶ ವಿಜ್ಞಾನ - ತಂತ್ರಜ್ಞಾನ - ಸಂಶೋಧನೆಯ ಕಡೆ ಭಾರಿ ಒಲವು ವ್ಯಕ್ತವಾಗುತ್ತಿದೆ. ಕಾಲೇಜು, ವಿಶ್ವವಿದ್ಯಾಲಯಗಳು ಡಿಪ್ಲೊಮಾ, ಪದವಿ, ಪಿಎಚ್.ಡಿಯವರೆಗೂ ಶಿಕ್ಷಣ ನೀಡುತ್ತಿವೆ. ಸರ್ಟಿಫಿಕೇಟ್ ಕೋರ್ಸ್‌ಗಳೂ ಇವೆ. ಹಳೆಯ ಕೋರ್ಸ್‌ಗಳ ಜೊತೆಗೆ ಹೊಸ ಕಾಲದ ಅಗತ್ಯಕ್ಕೆ ತಕ್ಕಂತೆ ನವನವೀನ ಕೋರ್ಸ್‌ಗಳನ್ನು ಪ್ರಾರಂಭಿಸುತ್ತಿವೆ.

ಕಳೆದ ಸಂಚಿಕೆಯಲ್ಲಿ ಕೆಲವು ಡಿಪ್ಲೊಮಾ ಕೋರ್ಸ್‌ಗಳ ಬಗ್ಗೆ ವಿವರಣೆ ನೀಡಲಾಗಿತ್ತು. ಈ ಸಂಚಿಕೆಯಲ್ಲಿ ಪದವಿ ಕೋರ್ಸ್‌ಗಳ ಜೊತೆಗೆ, ಸರ್ಟಿಫಿಕೇಟ್ ಕೋರ್ಸ್‌ಗಳು ಹಾಗೂ ಇನ್ನಷ್ಟು ಉದ್ಯೋಗಾವಕಾಶ ಸಾಧ್ಯತೆಗಳ ಬಗ್ಗೆ ಗಮನಹರಿಸೋಣ.

ಪದವಿ ಕೋರ್ಸ್‌ಗಳು

ಕೋರ್ಸ್	ಕಲಿಸುವ ಸಂಸ್ಥೆ	ಶುಲ್ಕ
ಬಿಎಸ್‌ಸಿ ಇನ್ ಸ್ಪೇಸ್ ಸೈನ್ಸ್	ಹಲವು ಐಐಟಿಗಳು ಮತ್ತು ಪ್ರಾತಿನಿಧಿಕ ಉನ್ನತ ಶಿಕ್ಷಣ ವಿವಿಗಳು	₹1 ಲಕ್ಷ ದಿಂದ ₹7ಲಕ್ಷದ ವರೆಗೆ
ಬಿಟೆಕ್ ಇನ್ ಸ್ಪೇಸ್ ಟೆಕ್ನಾಲಜಿ		
ಬಿಟೆಕ್ ಇನ್ ಏರೋಸ್ಪೇಸ್ ಎಂಜಿನಿಯರಿಂಗ್		
ಎಂಟೆಕ್ ಇನ್ ಏರೋ ಸ್ಪೇಸ್ ಎಂಜಿನಿಯರಿಂಗ್		
ಎಂಟೆಕ್ ಇನ್ ಸ್ಪೇಸ್ ಟೆಕ್ನಾಲಜಿ		

ಕೋಷ್ಟಕಗಳಲ್ಲಿ ಉಲ್ಲೇಖಿಸಿರುವ ಸಂಸ್ಥೆಗಳು ಮತ್ತು ಕೋರ್ಸ್‌ಗಳನ್ನು ಕಲಿತ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಲು ಸರ್ಕಾರಿ, ಖಾಸಗಿ ಮತ್ತು ನವೋದ್ಯಮಗಳು ಭಾರಿ ಬಂಡವಾಳ ಹೂಡುತ್ತಿವೆ. ದೇಶದ ಹಾಗೂ ವಿದೇಶಗಳ ಬಾಹ್ಯಾಕಾಶ ಯೋಜನೆಗಳಿಗೆ ಸಾಥ್ ನೀಡಲು ಬೃಹತ್ ಉದ್ಯಮವೇ ಸಿದ್ಧಗೊಳ್ಳುತ್ತಿದೆ. ಇಸ್ರೊ ತನ್ನ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಬೇಕಾದ ಸಲಕರಣೆ ಮತ್ತು ಸಾಧನಗಳನ್ನು ಸುಮಾರು 500 ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಂದಲೇ ಪಡೆದುಕೊಳ್ಳುತ್ತದೆ.

ಯಾರಿಗೆ ಕೆಲಸ?

ಡಿಪ್ಲೊಮಾ, ಪದವಿ ಮತ್ತು ಎಂಜಿನಿಯರಿಂಗ್‌ನಲ್ಲಿ ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್, ಏರೋಸ್ಪೇಸ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಬಿಗ್‌ಡೇಟಾ, ಸೈಬರ್ ಸೆಕ್ಯುರಿಟಿ, ಡ್ರೋನ್, ಹೈಪರ್ ಸಾನಿಕ್ಸ್, ಇನ್‌ಫರ್ಮೇಶನ್ ಆ್ಯಂಡ್ ಕಮ್ಯುನಿಕೇಶನ್ಸ್ ಟೆಕ್ನಾಲಜಿ, ಮೆಶೀನ್ ಲರ್ನಿಂಗ್, ಆಪ್ಟಿಕ್ಸ್, ಕ್ವಾಂಟಂ ಕಂಪ್ಯೂಟಿಂಗ್, ರೊಬಾಟಿಕ್ಸ್, ಸ್ಪೇಸ್‌ಲಾ, ಸ್ಪೇಸ್ ಮೆಡಿಸಿನ್, ವರ್ಚುವಲ್ ರಿಯಾಲಿಟಿ ವಿಷಯಗಳನ್ನು ಚೆನ್ನಾಗಿ ಕಲಿತವರಿಗೆ ವಿಪುಲ ಉದ್ಯೋಗಾವಕಾಶಗಳಿವೆ.

ಉದ್ಯೋಗ ನೀಡುವವರಾರು ?

ನಮ್ಮ ಸಾರ್ವಜನಿಕ ಸಂಸ್ಥೆಗಳಾದ ಇಸ್ರೊ, ಎಚ್‌ಎಎಲ್, ಡಿಆರ್‌ಡಿಒ, ಭಾರತ್ ಎಲೆಕ್ಟ್ರಾನಿಕ್ಸ್, ಭಾರತೀಯ ನೌಕಾದಳ, ಎನ್‌ಎಎಲ್, ನ್ಯೂಸ್ಪೇಸ್ ಇಂಡಿಯ ಲಿಮಿಟೆಡ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಶಿಯನ್ ಟೆಕ್ನಾಲಜಿ, ಆ್ಯಂಟ್ರಿಕ್ಸ್ ಕಾರ್ಪೊರೇಷನ್ (ಅಂತರಿಕ್ಷ್) ಆಕರ್ಷಕ ಸಂಬಳದ ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ.

ಬಾಹ್ಯಾಕಾಶ ವಿಜ್ಞಾನ - ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಅನೇಕ ನವೋದ್ಯಮಗಳು ಸಾವಿರಾರು ಪದವೀಧರರಿಗೆ ಈಗಾಗಲೇ ಉದ್ಯೋಗ ಕಲ್ಪಿಸಿವೆ. ಸಂತಸದ ವಿಚಾರವೆಂದರೆ ಶೇ 90 ರಷ್ಟು ನವೋದ್ಯಮಗಳು ಬೆಂಗಳೂರಿನಲ್ಲೇ ಇವೆ.

ಅಮೆರಿಕದ ನಾಸಾ ಸಂಸ್ಥೆ ಹೆಚ್ಚಾಗಿ ಅಮೆರಿಕದ ಪೌರತ್ವ ಇರುವವರನ್ನೇ ಕೆಲಸಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ಅನಿವಾರ್ಯವಾದಾಗ ಮಾತ್ರ ವಿದೇಶಿಯರಿಗೆ ಕೆಲಸ ನೀಡುತ್ತಾರೆ. ಯುರೋಪಿಯನ್ ಸ್ಪೇಸ್ ಏಜೆನ್ಸಿ, ಜಪಾನ್‌ಗಳಲ್ಲಿ ವಿಶ್ವದ ಎಲ್ಲ ಭಾಗದವರಿಗೂ ಕೆಲಸ ಮಾಡುವ ಅವಕಾಶವಿದೆ.

ಬಾಹ್ಯಾಕಾಶ ಕ್ಷೇತ್ರದ ಉದ್ಯೋಗ ನೀಡುವ ವಿದೇಶಿ ಖಾಸಗಿ ಕಂಪನಿಗಳಲ್ಲಿ ಪ್ರಮುಖವಾಗಿರುವವು ಹೀಗಿವೆ; ಬೋಯಿಂಗ್, ಸ್ಪೇಸ್ ಎಕ್ಸ್, ಬ್ಲೂ ಓರಿಜಿನ್, ಸಿಯರ್ರ ಸ್ಪೇಸ್ ಕಾರ್ಪೊರೋಷನ್;ವರ್ಜಿನ್ ಗೆಲಾಕ್ಟಿಕ್, ಆರ್ಬಿಟಲ್ ಸೈನ್ಸ್ ಕಾರ್ಪೊರೇಶನ್, ಜನರಲ್ ಡೈನಮಿಕ್ಸ್ ಕಾರ್ಪೊರೇಶನ್,ಅಸ್ತ್ರಸ್ಪೇಸ್,ಲಾಕ್ ಹೀಡ್ ಮಾರ್ಟಿನ್ ಕಾರ್ಪೊರೇಶನ್, ದ ಅಲ್ಟ್ರಾ ವೆಲ್ಥಿ.

ಯಾವ್ಯಾವ ಹುದ್ದೆಗಳು:

ಉದ್ಯೋಗಕ್ಕಾಗಿ ಬಾಹ್ಯಾಕಾಶ ಕ್ಷೇತ್ರ ಪ್ರವೇಶಿಸಲು ಆಸಕ್ತಿಯಿರುವ ತಂತ್ರಜ್ಞರಿಗೆ ದೊರೆಯಲಿರುವ ಪ್ರಮುಖ ಹುದ್ದೆಗಳು ಹೀಗಿವೆ; ಸ್ಯಾಟಲೈಟ್ ಎಂಜಿನಿಯರ್, ಸ್ಯಾಟಲೈಟ್ ಪ್ರೊಡಕ್ಷನ್ ಲೀಡ್,ಪ್ರೊಪಲ್ಶನ್ ಎಂಜಿನಿಯರ್,ಲಾಂಚ್ ಎಂಜಿನಿಯರ್,ಟೆಸ್ಟ್ ಎಂಜಿನಿಯರ್,ಮಿಶನ್ಸ್, ಮ್ಯಾನೇಜರ್,ಕ್ವಾಲಿಟಿ ಇನ್ಸ್‌ಪೆಕ್ಟರ್, ಬಿಲ್ಡ್ ಸೂಪರ್ ವೈಸರ್,ಸ್ಟಾರ್‌ಲಿಂಕ್ ಮ್ಯಾನೇಜರ್,ಕ್ವಾಲಿಟಿ ಇನ್‌ಸ್ಪೆಕ್ಟರ್

(ಲೇಖಕರು: ಪ್ರಾಚಾರ್ಯರು, ವಿದ್ಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು) ಮುಗಿಯಿತು

ಸರ್ಟಿಫಿಕೇಟ್ ಕೋರ್ಸ್‌ಗಳು

ಕೋರ್ಸ್	ಕಲಿಸುವ ಸಂಸ್ಥೆ	ಶುಲ್ಕ
ಸರ್ಟಿಫಿಕೇಟ್ ಇನ್ ಸ್ಪೇಸ್ ಟೆಕ್ನಾಲಜಿ ಅಂಡ್ ಅಪ್ಲಿಕೇಶನ್ಸ್	ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್ ಡೆಹ್ರಾ ಡೂನ್	₹12,000
ಸರ್ಟಿಫಿಕೇಟ್ ಕೋರ್ಸ್ ಇನ್ ಸ್ಯಾಟಲೈಟ್ ಕಮ್ಯುನಿಕೇಶನ್	ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್	₹18,000
ಸರ್ಟಿಫಿಕೇಟ್ ಕೋರ್ಸ್ ಇನ್ ರಿಮೋಟ್ ಸೆನ್ಸಿಂಗ್ ಅಂಡ್ ಜಿಐಎಸ್	ನೋಯಿಡ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವಾರಂಗಲ್	₹10,000
ಸರ್ಟಿಫಿಕೇಟ್ ಕೋರ್ಸ್ ಇನ್ ಸ್ಯಾಟಲೈಟ್ ಮೀಟಿಯೋರಾಲಜಿ ಆ್ಯಂಡ್ ವೆದರ್ ಇನ್‌ಫಾರ್ಮ್ಯಾಟಿಕ್ಸ್	ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೀಟಿಯೋರಾಲಜಿ, ಪುಣೆ	₹20,000
ಸರ್ಟಿಫಿಕೇಟ್ ಕೋರ್ಸ್ ಇನ್ ಸ್ಪೇಸ್ ಲಾ	ಇಂಡಿಯನ್ ಸೊಸೈಟಿ ಆಫ್ ಇಂಟರ್‌ನ್ಯಾಶನಲ್ ಲಾ, ದೆಹಲಿ	₹25,000

ಭಾರತದಲ್ಲಿರುವ ಪ್ರಮುಖ ಖಾಸಗಿ ಬಾಹ್ಯಾಕಾಶ ತಂತ್ರಜ್ಞಾನ ಕಂಪನಿಗಳು

1. ಧ್ರುವ ಸ್ಪೇಸ್, 2. ಏರೋಗುರು ಪ್ರೈವೇಟ್ ಲಿಮಿಟೆಡ್, 3.ಸ್ಕೈರೂಟ್ ಏರೋಸ್ಪೇಸ್ 4. ಅಗ್ನಿಕುಲ್ ಕಾಸ್ಮೋಸ್, 5.ಬೆಲ್ಲಾಟ್ರಿಕ್ಸ್ ಏರೋಸ್ಪೇಸ್, 6.ಪಿಕ್ಸೆಲ್ಸ್, 7.ಕಾವಾ ಸ್ಪೇಸ್ 8.ಟೀಂ ಇಂಡಸ್, 9.ಆಸ್ಟ್ರೋಗೇಟ್ ಲ್ಯಾಬ್ 11.ದಿಗಂತರ, 12.ನ್ಯೂಸ್ಪೇಸ್ ರಿಸರ್ಚ್ ಅಂಡ್ ಟೆಕ್ನಾಲಜೀಸ್, 13.ವಸುಂಧರಾ ಜಿಯೋ ಟೆಕ್ನಾಲಜೀಸ್ 14.ಸ್ಯಾಟ್‌ಶೂರ್, 15.ಆದ್ಯ ಏರೋಸ್ಪೇಸ್ 16.ಮನಸ್ತು ಸ್ಪೇಸ್, 17.ಆರ್ಬಿಟ್ ಏಯ್ಡ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಗಮನಿಸಿ:– ಈ ಭಾಗದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವ ಮೊದಲು ಈ ಕೆಳಗಿನ ಅಂಶಗಳನ್ನು ತಿಳಿದುಕೊಂಡಿರಿ

* ನಿರ್ದಿಷ್ಟ ನಿಯಮಕ್ಕೆ ಅನುಸಾರವಾಗಿ ವ್ಯವಸ್ಥಿತಗೊಳಿಸಿರುವ ಸಂಖ್ಯೆಗಳ ಗಣವೇ ಶ್ರೇಢಿಯಾಗಿದೆ
* ಶ್ರೇಢಿಯ ಯಾವುದೇ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದರೆ ಆ ಶ್ರೇಢಿಯು ಸಮಾಂತರ ಶ್ರೇಢಿಯಾಗಿರುತ್ತದೆ.
* ಸಮಾಂತರ ಶ್ರೇಢಿಯ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದು ಅದನ್ನು ಸಾಮಾನ್ಯ ವ್ಯತ್ಯಾಸ (c.d) ಎನ್ನುತ್ತಾರೆ ಮತ್ತು ಅದನ್ನು dಯಿಂದ ಸೂಚಿಸುತ್ತಾರೆ.
* ಸಮಾಂತರ ಶ್ರೇಢಿಯ nನೇ ಪದ $T_n = a + (n - 1)d$ ಆಗಿರುತ್ತದೆ.
* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕೂಡಿದಾಗ ಅದರ ಮುಂದಿನ ಪದ ದೊರೆಯುತ್ತದೆ
$$T_{n+1} = T_n + d$$
* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕಳೆದಾಗ ಅದರ ಹಿಂದಿನ ಪದ ದೊರೆಯುತ್ತದೆ
$$T_{n-1} = T_n - d$$
* ಸಮಾಂತರ ಶ್ರೇಢಿಯ ಸಾಮಾನ್ಯರೂಪ
$$a, a + d, a + 2d.....a + (n - 1) d$$
* ಸಮಾಂತರ ಶ್ರೇಢಿಯ nನೇ ಪದಗಳ ಮೊತ್ತ ಮೊದಲ ಮತ್ತು ಕೊನೆಯ ಪದಗಳ ಸರಾಸರಿಯು nನಷ್ಟು ಇರುತ್ತದೆ.
* ಸ್ವಾಭಾವಿಕ ಸಂಖ್ಯೆಗಳ ಮೊದಲ n ಪದಗಳ ಮೊತ್ತ ಇದನ್ನು $\sum n$ ಎಂದು ಸಹ ಸೂಚಿಸುತ್ತಾರೆ.
$$\therefore \sum n = \frac{n(n+1)}{2}$$
* ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ
$$S_n = \frac{n}{2}\left[2a + (n-1)d\right]$$

ಈ ವರ್ಷ ನಡೆದ (ಮಾರ್ಚ್– 2023) ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ಮೊದಲಿಗೆ ನೋಡೋಣ.

1) 4, 7, 10 ...... ಸಮಾಂತರ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ 4, 7, 10 ....

ಇಲ್ಲಿ $a = 4$,

$d = 7 - 4 = 3$,

$n = 20$

$$t_n = a + (n-1)d$$
$$t_{20} = 4 + (20-1)3$$
$$= 4 + 19 \times 3$$
$$= 4 + 57$$
$$= 61$$

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$$a_2 + a_4 = 54$$
$$a + d + a + 3d = 54$$
$$2a + 4d = 54$$
$$a + 2d = 27 \quad \text{.......................... (i)}$$

ಮೊದಲ 11 ಪದಗಳ ಮೊತ್ತ 693

$$S_{11} = 693$$
$$\frac{11}{2}\left[2a + (11-1)d\right] = 693$$
$$2a + 10d = 693\frac{2}{11}$$
$$2a + 10d = 126$$
$$a + 5d = 63 \quad \text{.............. (ii)}$$

(i) ರಲ್ಲಿ (ii) ಅನ್ನು ಕಳೆದಾಗ

$$a + 2d = 27$$
$$a + 5d = 63$$
$$-3d = -36$$
$$\therefore d = 12$$

ಈಗ ಇರುವ ಜಾಗದಲ್ಲಿ 12ನ್ನು ಹಾಕಿದಾಗ

$$a + 2(12) = 27$$
$$\therefore a = 3$$

ಸಾಮಾನ್ಯ AP ಯು ಹೀಗಿದೆ

$$a,\ a + d,\ a + 2d,\ a + 3, ...$$
$$3,\ 3 + 12,\ 3 + 24,\ 3 + 36, ...$$
$$3,\ 15,\ 27,\ 39, ...$$

ಆದ್ದರಿಂದ ಸಮಾಂತರ ಶ್ರೇಢಿ = 3, 15, 27, 39, ...

$$x_n = 132 + a_{54}$$
$$x_n = 132 + a + 53d$$
$$x_n = 132 + 3 + 636$$
$$x_n = 771$$
$$a + (n-1) = 771$$
$$3 + (n-1)12 = 771$$
$$12(n-1) = 768$$
$$n - 1 = 64$$
$$n = 65$$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಮಸ್ಯೆ ಮತ್ತು ಪರಿಹಾರ

1) $\frac{3}{2}, \frac{1}{2}, \frac{1}{2}, -\frac{1}{2}, -\frac{3}{2}$ .... ಈ ಸಮಾಂತರ ಶ್ರೇಢಿಯ ಮೊದಲ ಪದ **a** ಮತ್ತು ಸಾಮಾನ್ಯ ವ್ಯತ್ಯಾಸ **d** ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = \frac{3}{2}$, $d = \frac{1}{2} - \frac{3}{2} = -1$

2) ಈ ಕೆಳಗಿನವುಗಳಲ್ಲಿ ಯಾವ ಸಂಖ್ಯಾ ಪಟ್ಟಿಗಳು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತವೆ? ಅವುಗಳು ಸಮಾಂತರ ಶ್ರೇಢಿಯನ್ನುಂಟು ಮಾಡಿದರೆ ಅದರ ಮುಂದಿನ ಎರಡು ಪದಗಳನ್ನು ಕಂಡುಹಿಡಿಯಿರಿ.

i) 4, 10, 16, 22 .... ii) 1, –1, –3, –5 ....

iii) –2, 2, –2, 2 .... iv) 1, 1, 1, 2, 2, 2, 3, 3, 3 ....

ಪರಿಹಾರ: (i) $a_2 - a_1 = 10 - 4 = 6$

$$a_3 - a_2 = 16 - 10 = 6$$
$$a_4 - a_3 = 22 - 16 = 6$$

ಅಂದರೆ $a_{k+1} - a_k$ ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಮೇಲಿನ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸ $d = 6$ ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡಿದೆ

ಅದರ ಮುಂದಿನ ಎರಡು ಪದಗಳು 22+6 = 28 ಮತ್ತು 28 + 6 = 34

ii) $a_2 - a_1 = -1 - 1 = -2$

$$a_3 - a_2 = -3 - (-1) = -3 + 1 = -2$$
$$a_4 - a_3 = -5 - (-3) = -5 + 3 = -2$$

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ ಆದ್ದರಿಂದ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸ $d = -2$ ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ. ಅದರ ಮುಂದಿನ ಎರಡು ಪದಗಳು –5 +(–2) = –7 ಮತ್ತು –7 + (–2) = –9

(ಮುಂದುವರಿಯುವುದು)

II PUC PHYSICS

Chapter – 1

ELECTRIC CHARGES AND FIELDS

1) Define the term Electrostatics.

Ans:- Electrostatics is that branch of physics that deals with the study of forces, fields and potentials arising from static charges (electric charges at rest).

2) Mention some of the properties of charges.

Ans:- The properties of charges are as follows -

(a) There are two types of charges – positive and negative.

(b) Like charges repel and unlike charges attract each other.

(c) A charged body attracts light uncharged bodies.

d) Charge can neither be created nor destroyed. i.e., charge is conserved.

(e) Charge remains unaffected by motion and it is independent of the velocity of the body.

(f) Charges always reside on the outer surface of the conductor.

(g) Accelerated charges radiate energy in the form of electromagnetic waves.

(h) Charge is quantised that is charge exists in discrete 'packets'.

(i) It is a scalar quantity and its SI unit is Coulomb.

3) What is meant by 'Induction'?

Ans:- Induction is the property of a conductor to become electrified when there is presence of a charged body present nearby.

4) Which is the sure test of electrification?

Ans:- The sure test of electrification is repulsion between two charged bodies and not attraction.

5) When is the electrostatic force maximum between the two point charges?

Ans:- The electrostatic force between the two point charges separated by a given distance is maximum when the charges are in air or in vacuum.

6) Give reasons, why the charges get distributed over the outer surface of the conductor?

Ans:- Charges get distributed over the outer surface of the conductor in order to have minimum repulsion between them.

7) Why does the charges get distributed uniformly over the surface of the circular conductor?

Ans:- Charges get distributed uniformly over the surface of the circular conductor because the surface of the circular conductor is uniform.

8) Whats does the Coulomb's Law state?

Ans:- Coulomb's Law: The force of attraction or repulsion acting along a straight line between two electric charges is directly proportional to the product of the charges and inversely to the square of the distance between them.

9) Which are the regions on the conductor on which the charges are accumulated in abundance?

Ans:- The regions on the conductor on which the charges are accumulated in abundance are the pointed ends of the conductor.

10) A comb run through the dry hair attracts small bits of paper. Why? What happens, if the hair is wet?

Ans:- When a comb is run through the dry hair it gets charged hence it starts attracting. When the hair is wet there is absence of friction due to which the comb does not get charged and hence it does not attract the paper bits.

11) What is 'electric flux'?

Ans:- The measure of count of number of electric field lines crossing an area is known as Electric Flux.

12) Write a note on earthing? How is it done?

Ans:- When we bring a charged body in contact with the earth, all the excess charge on the body disappears by causing a momentary current to pass to the ground through the connecting conductor (such as our body). This process of sharing the charges with the earth is called grounding or earthing. It provides a safety measure for electrical circuits and appliances.

A thick metal plate is buried deep into the earth and thick wires are drawn from this plate theses are used in buildings for the purpose of earthing near the mains supply.

The electric wiring in our houses has three wires – live, neutral and earth. The first two wires carry electric current from the power station and the third is earthed by connecting it to the buried metal plate.

Metallic bodies of the electric appliances such as electric iron, refrigerator, TV are connected to the earth wire. When any fault occurs or live wire touches the metallic body, the charge flows to the earth without damaging the appliance and without causing any injury to the humans; this would have otherwise been unavoidable since the human body is a conductor of electricity.

13) An arbitrary surface encloses a dipole. What is the electric flux through this surface?

Ans:- Zero

14) A metallic spherical shell has an inner radius R_1 and outer radius R_2. A charge Q is placed at the centre of the spherical cavity. What will be surface charge density on – (i) the surface, and (ii) the outer surface?

Ans:- (i) $\frac{-Q}{4\pi R_1^2}$

(ii) $\frac{-Q}{4\pi R_2^2}$

15) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?

Ans:- The electric fields bind the atoms to neutral entity. Fields are caused by excess charges. There can be no excess charge on the inner surface of an isolated conductor.

16) If the total charge enclosed by a surface is zero, does it imply that the electric field everywhere on the surface is zero? Conversely, if the electric field everywhere on a surface is zero, does it imply that net charge inside is zero.

Ans:- No, the field may be normal. However, the converse is true.

17) What is meant by Electrification?

Ans:- Electrification or charging is a process of making a body to lose or gain electrons.

18) Mention some of the methods of charging a body.

Ans:- Some methods of charging a body are-

Charging by (a) friction,

(b) conduction and

(c) Induction.


19) Write a note on Charging by friction.

Ans:- Charging by friction - is a method of charging a body. When two suitable bodies are rubbed against each other, at many points of contact, electrons are transferred from one body to another. The body which gains electrons become negatively charged and the body which loses electrons become positively charged.

20) Write a note on Charging by conduction.

Ans:- Charging by conduction - is a method of charging a body. Whenever an uncharged conductor is placed in contact with a charged body, charges flow from the charged body to the uncharged conductor and both the bodies in contact will have the same type of charge.

(Contd.....)



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಬಿಎಸ್ಸಿ ನಂತರ ಎಂಬಿಎ ಮಾಡಬಹುದೇ?

● **ನನ್ನ ಮಗ ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್) ನಂತರ ಎಂಬಿಎ ಮಾಡಬೇಕೆಂದುಕೊಂಡಿದ್ದಾನೆ. ಆದರೆ, ಎಂಬಿಎ ಆಯ್ಕೆಯಲ್ಲಿ ಗೊಂದಲವಿದೆ. ಸಲಹೆ ನೀಡಿ.**

ವನಜಾಕ್ಷಿ, ಊರು ತಿಳಿಸಿಲ್ಲ.

2. ನಾನು ಬಿ.ಇ (ಪಾಲಿಮರ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ) ಮುಗಿಸಿ ಎಂಬಿಎ ಮಾಡಬಯಸಿದ್ದೇನೆ. ವಿಷಯ ಆಯ್ಕೆ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ವೈವಿಧ್ಯಮಯ,ಬಹುಪಯೋಗಿ ಗುಣಲಕ್ಷಣಗಳಿಂದ ಅಸಂಖ್ಯಾತ ಉದ್ಯಮಗಳಲ್ಲಿ ಪಾಲಿಮರ್ ಬಳಕೆ ಯಾಗುತ್ತಿದೆ. ಎಂಬಿಎ ಕೋರ್ಸ್‌ನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲ ತತ್ವಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಇದರ ಆಧಾರದ ಮೇಲೆ, ನೀವು ವೃತ್ತಿ ಮತ್ತು ಖಾಸಗಿ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ಹಾಗಾಗಿ ನಮ್ಮ ಅಭಿಪ್ರಾಯದಂತೆ, ಬಿ.ಇ ನಂತರ ವೃತ್ತಿಪರ ಜೀವನವನ್ನು ರೂಪಿಸಿ ಕೊಳ್ಳಲು, ಎಂಬಿಎ ಉತ್ತಮ ಆಯ್ಕೆ.

ಪ್ರತಿಭೆ ಮತ್ತು ಆಸಕ್ತಿ ಪರಿಗಣಿಸಿ, ಯಾವ ವಿಭಾಗದ ವೃತ್ತಿಯಲ್ಲಿ ತೃಪ್ತಿ ಮತ್ತು ಯಶಸ್ಸು ಕಾಣಬಹುದು ಎಂದು ಪರಿಶೀಲಿಸಿ, ಅದರಂತೆ ವೃತ್ತಿಯೋಜನೆ ತಯಾರಿಸಿ. ಉದಾ: ಉತ್ಪಾದನಾ ಕ್ಷೇತ್ರ, ಮಾರುಕಟ್ಟೆ, ಮಾನವ ಸಂಪನ್ಮೂಲದ ನಿರ್ವಹಣೆ, ಲಾಜಿಸ್ಟಿಕ್ಸ್, ಹಣಕಾಸು ಮುಂತಾದ ಸ್ಪೆಷಲೈಸೇಷನ್‌ಗಳಲ್ಲಿ ಎಂಬಿಎ ಮಾಡಬಹುದು.

ವೃತ್ತಿಯೋಜನೆ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/@ExpertCareerConsultantAuthor

ಇನ್ನಷ್ಟು ಪ್ರಶ್ನೋತ್ತರಕ್ಕಾಗಿ www.prajavani.net ನೋಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

CKC GROUP

150 YEARS

THE LONG ARM OF LAW NEVER FAILS TO CATCH UP WITH THE UNLAWFUL

HIGH ETHICS AND HIGH GOVERNANCE AT C. KRISHNIAH CHETTY GROUP OF JEWELLERS TRIUMPHS YET AGAIN. WE THANK THE HON'BLE NCLT FOR UPHOLDING THE PRINCIPLES OF LAW AND JUSTICE.

THIS COURT ORDER BY HON'BLE NCLT PROHIBITS COMPETING BUSINESS BY OUR DIRECTOR MR. C. GANESH NARAYAN

Six Generations of responsible, fair, ethical, unanimous business decisions of Shareholders and Directors cannot be wrong.

Six Generations of fine minds, values and respect for each other built and governed the iconic Sesquicentennial (150 Year old) fine jewellery business, Since 1869. Today, one Director cannot overturn the events and decisions of his respected predecessors, including his own Father.

The order is appealable. But the order demonstrated the truth. We thank our Patrons for believing in us in the face of unlawful acts by one member and his wife that attempt to diminish the fair name of C. Krishniah Chetty for personal benefit. We continue to respect all members of Shareholders and Directors without bias, without favouritism.

We maintain old world values and respect. We welcome all shareholders to resolve their differences to keep the flag of high thinking of the founders of the amazing C. Krishniah Chetty name and brand of ethical business.

ISSUED IN PUBLIC INTEREST BY FELLOW DIRECTORS

C. V. HAYAGRIV	C. TRIVENI VINOD
CHAITANYA V COTHA (+91 96119 69699)	C. VINOD HAYAGRIV (+91 96111 01869)

RELEVANT PORTIONS OF THE RECENT ORDER, DATED 24.08.2023, PASSED BY THE HON'BLE NATIONAL COMPANY LAW TRIBUNAL, BENGALURU

IA Nos.05, 06, 07 of 2020 in CP No.04/BB/2020 U/R 32 of NCLT Rules, 2016.
(Read along with Section 166 of Companies Act 2013)

HON'BLE NCLT RE-CONFIRMS ORDER DATED 12.07.2021 AND COMES DOWN HEAVILY ON THE SHOWROOM & BUSINESS OPERATING NEXT DOOR VIDE ORDER DATED 24.08.2023

Prayers in IAs 5, 6, 7 of 2020 in CP 04/BB/2020 under rule 32 of NCLT rules 2016 granted

IA 05: *For the reasons sworn to in the accompanying affidavit, it is respectfully prayed that this Hon'ble Tribunal may, pending hearing and disposal of this Company Petition, pass the following ad-interim directions and interim orders restraining Respondent No 2 Ganesh Narayan and Respondent No. 3 Mrs. Valli Narayan through themselves or through their agents, servants company/s, or anybody acting through or under them from directly or indirectly starting a competing Jewelry Store/Business in 'B' Block, Touchstone, Main Guard Cross Road, Bengaluru 560 001, directly or indirectly abutting C. Krishniah Chetty and Sons Private Ltd.'s (CKCPL) flagship jewelry store in the 'A' Block of the building.*

IA 06: *For the reasons sworn to in the accompanying affidavit, it is respectfully prayed that this Hon'ble Tribunal may, pending hearing and disposal of this Company Petition, pass the following ad-interim directions and interim orders restraing Respondent No. 2 Ganesh Narayan and Respondent No. 3 Mrs. Valli Narayan through themselves or through their agents, servents, indirectly engaging in any business at any location – including online portals/websites which compete with the business of the CKC Group and/ or any of its entities.*

IA 07: *For the reasons sworn to in the accompanying affidavit, it is respectfully prayed that the Hon'ble Tribunal may, pending hearing and disposal of this Company Petition, pass the following ad-interim directions and interim orders restraining Respondent No. 2 Ganesh Narayan and Respondent No. 3 Mrs.Valli Narayan through themselves or through their agents, servants, company/s, or anybody acting through or under them from directly or indirectly using the domain name www.ckcgroupofjewellers.com or any other domain which is similar to that of the CKC Group or any of its entities and to direct Respondent No.2 Ganesh Narayan to transfer to CKC Group the domain name www.ckcgroupofjewellers.com*

Para No 22 of the order of the Hon'ble NCLT dated 24.08.2023 held that: Accordingly, IA Nos.05, 06 and 07 of 2020 stand allowed and disposed of.

Scan QR code to Download the Court Orders

THE ONLY 5 MAGNIFICENT SHOWROOMS & BOUTIQUES



THE HERITAGE SHOWROOM
35 Commercial Street,
Bengaluru - 560 001



THE TOUCHSTONE
Main Guard Cross Road,
Bengaluru - 560 001



THE TOUCHSTONE SOUTH
5th Block, Jayanagar,
Bengaluru - 560 041



THE TOUCHSTONE WEST
Margosa Road, Malleshwaram,
Bengaluru - 560 003



THE TOUCHSTONE EAST
Phoenix Marketcity, Whitefield,
Bengaluru - 560 048

C. KRISHNIAH CHETTY™
GROUP OF JEWELLERS

Commercial Street • Main Guard Cross Road • Jayanagar, 5th Block • Malleswaram, Margosa Road • Phoenix Marketcity, Whitefield.
Tel: 080-4000 1869 / 4100 1869 | www.ckcjewellers.com | blogs.ckcjewellers.com

The only entities of the CKC Group: C. Krishniah Chetty & Sons™ · C. Krishniah Chetty Jewellers® · The 1869 Guild. C. Krishniah Chetty & Sons Manufacturers | C. Krishniah Chetty & Sons · C. Krishniah Chetty Charitable Trust · C. Krishniah Chetty Foundation

***Caution Notice - Issued in Public Interest:** *An unrelated business enterprise which has fraudulently changed their name from Deepali Co P Ltd., to same name as ours has been started by Mr. C. Ganesh Narayan current director of our company, and with his wife. The new unauthorised showroom is on LEFT wing of the Touchstone (next to our Flagship Showroom). Their entity is under restraint & being tried under contempt of court orders. We caution all clients/ public to refrain from assuming there is another authorised C. Krishniah Chetty, which is not the case. They are not authorised to use the CKC name or CKC GROUP logo. Matters are pending in courts on high priority.
Note: *If their business is closed by law, products sold by them (since 15.03.2023 when their conflicting business began) will not be considered for buy-back/ exchange under our CKC policies.*



ಶಿವಾಜಿ ನಗರ ಬಸ್ ನಿಲ್ದಾಣದಲ್ಲಿ ನಿಂತಿರುವ ಬಿಟಿಎಸ್ ಬಸ್‌ಗಳು (ಸಂಗ್ರಹ ಚಿತ್ರ)

ಬಿಎಂಟಿಸಿ ಇತಿಹಾಸ

1939ರಲ್ಲಿ 103 ಬೆಂಗಳೂರು ನಗರ ಬಸ್‌ಗಳು, 15 ಬೆಂಗಳೂರು ಕಂಟೋನ್ಮೆಂಟ್ ಬಸ್‌ಗಳು ಖಾಸಗಿಯವರ ಮಾಲೀಕತ್ವದಲ್ಲಿದ್ದವು. ಎಲ್ಲ ಬಸ್ ಮಾಲೀಕರನ್ನು ಒಂದು ಯೂನಿಯನ್ ಅಡಿಯಲ್ಲಿ ತರುವ ಪ್ರಯತ್ನದ ಫಲವಾಗಿ 1940ರ ಜ.30ರಂದು ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿ (ಬಿಟಿಸಿ) ಎಂಬ ಯೂನಿಯನ್ ಆರಂಭವಾಯಿತು. 1956ರಲ್ಲಿ ಬಿಟಿಸಿಯನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇದಾಗಿ 6 ವರ್ಷಗಳ ಬಳಿಕ 1962ರಲ್ಲಿ ಬೆಂಗಳೂರು ಟ್ರಾನ್ಸ್‌ಪೋರ್ಟ್ ಸರ್ವೀಸ್ (ಬಿಟಿಎಸ್) ಎಂದು ಹೆಸರು ಬದಲಾಯಿಸಲಾಯಿತು.

ಮೈಸೂರು ಗವರ್ನ್‌ಮೆಂಟ್ ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ (ಎಂಜಿಆರ್‌ಟಿಡಿ) ಅಡಿಯಲ್ಲಿ ಬಿಟಿಎಸ್ ಕಾರ್ಯನಿರ್ವಹಿಸುತ್ತಿತ್ತು. ಬಳಿಕ ಎಂಎಸ್‌ಆರ್‌ಟಿಸಿ (ಈಗಿನ ಕೆಎಸ್‌ಆರ್‌ಟಿಸಿ) ಅಡಿಯಲ್ಲಿ ರಾಜ್ಯದ ಎಲ್ಲ ಸಾರಿಗೆ ಸಂಸ್ಥೆಗಳು ಬಂದವು. 1997ರಲ್ಲಿ ಪಿಜಿಆರ್ ಸಿಂಧ್ಯ ಸಾರಿಗೆ ಸಚಿವರಾಗಿದ್ದ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿಯನ್ನು ವಿಂಗಡಿಸಿ ನಾಲ್ಕು ನಿಗಮಗಳನ್ನಾಗಿ ಮಾಡಲಾಯಿತು. ಬಿಟಿಎಸ್ ಇದ್ದಿದ್ದು ಬಿಎಂಟಿಸಿಯಾಗಿ ಬದಲಾಯಿತು.



1968ರಲ್ಲಿದ್ದ ಬಿಟಿಎಸ್ ಡಬಲ್ ಡೆಕ್ಕರ್ ಬಸ್

ಕೆಎಸ್‌ಆರ್‌ಟಿಸಿಯಿಂದ ಪ್ರತ್ಯೇಕಗೊಂಡು ಸ್ವತಂತ್ರ ನಿಗಮವಾಗಿ 25 ವರ್ಷ

ರಜತ ಮಹೋತ್ಸವದ ಸಂಭ್ರಮದಲ್ಲಿ ಬಿಎಂಟಿಸಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್‌ಆರ್‌ಟಿಸಿಯಿಂದ ಪ್ರತ್ಯೇಕಗೊಂಡು ಬಿಎಂಟಿಸಿ ಉದಯವಾಗಿ 25 ವರ್ಷಗಳು ಕಳೆದಿವೆ. ಅದರ ನೆನಪಲ್ಲಿ ರಜತ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಲು ಬಿಎಂಟಿಸಿ ನಿರ್ಧರಿಸಿದೆ.

1997ರ ಆ.15ರಂದು ಕೆಎಸ್‌ಆರ್‌ಟಿಸಿಯನ್ನು ನಾಲ್ಕು ನಿಗಮಗಳನ್ನಾಗಿ ಮಾಡಲಾಯಿತು. ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿ ಜೊತೆಗೆ ಬಿಎಂಟಿಸಿ ಉದಯವಾಯಿತು.

ಮೂರು ಪಟ್ಟು ಹೆಚ್ಚಿದ ಬಸ್‌ಗಳ ಸಂಖ್ಯೆ: ಬಿಎಂಟಿಸಿ ಸ್ವತಂತ್ರ ಸಂಸ್ಥೆಯಾಗಿ ಆರಂಭಗೊಂಡಾಗ 2,088 ಬಸ್‌ಗಳು ಇದ್ದವು. ಈಗ 6,570 ಬಸ್‌ಗಳಿವೆ. ಅದರಲ್ಲಿ 6,180 ಡೀಸೆಲ್ ಬಸ್‌ಗಳಾದರೆ, 390 ವಿದ್ಯುತ್ ಚಾಲಿತ ಬಸ್‌ಗಳಾಗಿವೆ.

49 ಘಟಕಗಳು, 4 ಕಾರ್ಯಾಗಾರಗಳನ್ನು ಹೊಂದಿರುವ ಬಿಎಂಟಿಸಿಯಲ್ಲಿ ಒಟ್ಟು 29,019 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ನಿತ್ಯ 57,002 ಸುತ್ತುವಳಿಗಳಲ್ಲಿ ಬಸ್‌ಗಳು ಪ್ರಯಾಣಿಸುತ್ತಿವೆ. ಆಗ ಇದ್ದ ಬಸ್‌ಗಳಿಗೂ ಈಗಿನ ಬಸ್‌ಗಳಿಗೂ ಗುಣಮಟ್ಟದಲ್ಲಿಯೂ ಭಾರಿ ವ್ಯತ್ಯಾಸ ಇದೆ. ಪ್ರಯಾಣಿಕರ ಸ್ನೇಹಿ, ಪರಿಸರ ಸ್ನೇಹಿ ಬಸ್‌ಗಳ ಸಂಖ್ಯೆ ಈಗ ಹೆಚ್ಚಾಗಿದೆ.

ಬೆಂಗಳೂರು ಮಹಾನಗರದ ಜನರ ಸಂಪರ್ಕನಾಡಿಯಂತೆ ಕಾರ್ಯನಿರ್ವಹಿಸುತ್ತಿರುವ ಬಿಎಂಟಿಸಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಯಾಣಿಕರ ಸಂಖ್ಯೆ ಏರಿರಲಿಲ್ಲ. ಮೆಟ್ರೊ ರೈಲು ಸಂಚಾರ ಆರಂಭವಾಗಿದ್ದು, ಖಾಸಗಿ ವಾಹನಗಳನ್ನು ಹೆಚ್ಚು ಅವಲಂಬಿಸಿದ್ದು ಇದಕ್ಕೆ ಕಾರಣವಾಗಿತ್ತು. 25 ವರ್ಷಗಳನ್ನು ಪೂರೈಸುವ ಹೊತ್ತಿಗೆ ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆ ಜಾರಿಯಾಗಿ ಮತ್ತೆ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಜೂನ್‌ವರೆಗೆ ನಿತ್ಯ ಪ್ರಯಾಣಿಸುವವರ ಸಂಖ್ಯೆ 27.34 ಲಕ್ಷ ಇದ್ದಿದ್ದು, ಈಗ 35.20 ಲಕ್ಷಕ್ಕೆ ಏರಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಉತ್ತಮ ಅನುಭವ: 'ನಾನು ಜೂನಿಯರ್ ಅಸಿಸ್ಟೆಂಟ್ ಆಗಿ ಉದ್ಯೋಗಕ್ಕೆ ಸೇರಿದ 10 ವರ್ಷಗಳ ಬಳಿಕ ಬಿಎಂಟಿಸಿ ಎಂದು ಪ್ರತ್ಯೇಕ ನಿಗಮವನ್ನಾಗಿ ಮಾಡಲಾಯಿತು. ಅಲ್ಲಿವರೆಗೆ ನಗರ ಸಾರಿಗೆಗೆ ಬಿಟಿಎಸ್ ಎಂಬ ಹೆಸರಿತ್ತು. ಅದು ಕೆಎಸ್‌ಆರ್‌ಟಿಸಿ ಅಡಿಯಲ್ಲಿತ್ತು. ಅಲ್ಲಿಂದ ಇಲ್ಲಿವರೆಗೆ ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಉತ್ತಮ ಅನುಭವವನ್ನು ನೀಡಿದೆ. ಆಗ ಕೆಂಪು ಬಸ್‌ಗಳು ಮಾತ್ರ ಇದ್ದವು. ಈಗ ವಿವಿಧ ರೀತಿಯ ಹೈಟೆಕ್ ಬಸ್‌ಗಳು ಬಂದಿವೆ. ಆಗ ಸಾಮಾನ್ಯ ಸೀಟುಗಳು ಮಾತ್ರ ಇದ್ದವು. ಈಗ ಪುಶ್‌ಅಪ್ ಸೀಟುಗಳು ಬಂದಿವೆ' ಎಂದು ಬಿಎಂಟಿಸಿ ಹಿರಿಯ ಸಹಾಯಕರಾಗಿರುವ ಪುಟ್ಟರಾಜು ಬಿ. ಅವರು 'ಅನುಭವ ಹಂಚಿಕೊಂಡರು.

'ನಾನು 1986ರಲ್ಲಿ ಚಾಲಕನಾಗಿ ಸೇರಿದ್ದೆ. ಇಲ್ಲಿವರೆಗೆ ಯಾವುದೇ ಅಪಘಾತವಿಲ್ಲದಂತೆ ಕಾರ್ಯನಿರ್ವಹಿಸಿದ್ದೇನೆ. ಆಗ ₹ 500 ಸಂಬಳ ಇತ್ತು. ಈಗ ₹ 1 ಲಕ್ಷ ವೇತನ ಪಡೆಯುತ್ತಿದ್ದೇನೆ. ಅತ್ಯುತ್ತಮ ಚಾಲಕ ಎಂದು ಗುರುತಿಸಿ ಸ್ವರ್ಣ ಪದಕ ನೀಡಿ ಗೌರವಿಸಿದ್ದಾರೆ. ಡಬಲ್ ಸ್ಟಾರ್ ನೀಡಿದ್ದಾರೆ. 11 ತಿಂಗಳ ಬಳಿಕ ನಿವೃತ್ತರಾಗಲಿದ್ದೇನೆ. ನನಗೆ ಬಿಎಂಟಿಸಿ ಬದುಕು ನೀಡಿದೆ. ನನ್ನ ಕೆಲಸ ಗುರುತಿಸಿ ಪ್ರೋತ್ಸಾಹಿಸಿದೆ' ಎಂದು 37 ವರ್ಷಗಳಿಂದ ಚಾಲಕರಾಗಿರುವ ಲಕ್ಷ್ಮಣ್‌ರೆಡ್ಡಿ ತಿಳಿಸಿದರು.

ಸಂಭ್ರಮದ ಕಾರ್ಯಕ್ರಮ: ರಾಮಲಿಂಗಾರೆಡ್ಡಿ

ಬಿಎಂಟಿಸಿ ಆರಂಭವಾಗಿ 25 ವರ್ಷಗಳು ಆಗಿರುವ ಹಿನ್ನೆಲೆಯಲ್ಲಿ ಸೆ.26ರಂದು ರಜತ ಮಹೋತ್ಸವ ಕಾರ್ಯಕ್ರಮ ನಡೆಸಲಾಗುವುದು. ಅಪಘಾತವಾಗದಂತೆ ಬಸ್‌ಗಳನ್ನು ಚಲಾಯಿಸಿರುವ ಹಿರಿಯ ಚಾಲಕರಿಗೆ ಸನ್ಮಾನ, ಮೃತಪಟ್ಟ ಸಿಬ್ಬಂದಿಯ ಕುಟುಂಬದ ಒಬ್ಬರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವುದು ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.



'ಆಶೋತ್ತರಕ್ಕೆ ಸ್ಪಂದಿಸುವ ಕಾರ್ಯಕ್ರಮ'

'ಚಾಲಕರು, ನಿರ್ವಾಹಕರು ಮತ್ತು ತಾಂತ್ರಿಕ ಸಿಬ್ಬಂದಿಯೇ ನಮ್ಮ ಸಂಸ್ಥೆಯ ಬೆನ್ನೆಲುಬು. ಅವರನ್ನು ಗಮನದಲ್ಲಿ ಇಟ್ಟುಕೊಂಡೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ತಿಳಿಸಿದರು.

ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ, ಕೆಲಸ ಗುರುತಿಸಿ ಗೌರವಿಸುವ ಸಮಾರಂಭ ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬಿಎಂಟಿಸಿಯ ರಜತ ಮಹೋತ್ಸವ ಕಾರ್ಯಕ್ರಮ ಕೂಡ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿಯ ಆಶೋತ್ತರಕ್ಕೆ ಸ್ಪಂದಿಸುವುದೇ ಆಗಿದೆ ಎಂದು ವಿವರಿಸಿದರು.



ಹವಾನಿಯಂತ್ರಿತ ವಾಯುವಜ್ರ ಬಸ್

'ಬಿಎಂಟಿಸಿ ಸ್ಥಾಪಿಸಿ ಯಾವುದೇ ಪ್ರಯೋಜನವಾಗಿಲ್ಲ'

'ಕೆಎಸ್‌ಆರ್‌ಟಿಸಿಯಿಂದ ಬೇರ್ಪಡಿಸಿ ನಾಲ್ಕು ನಿಗಮಗಳನ್ನು ಮಾಡುವುದನ್ನು ನಾವು ವಿರೋಧಿಸಿದ್ದೆವು. ಅದಕ್ಕೆ ನನ್ನನ್ನು ಸೇರಿ 19 ಮಂದಿಯನ್ನು ಜೈಲಿಗೆ ಹಾಕಿದ್ದರು. 25 ವರ್ಷಗಳಲ್ಲಿ ಬಿಎಂಟಿಸಿ ಪ್ರಯಾಣಿಕರಿಗಾಗಲಿ, ಸಿಬ್ಬಂದಿಗಾಗಲಿ ಯಾವುದೇ ಪ್ರಯೋಜನವಾಗಿಲ್ಲ' ಎಂದು ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಬೇಸರ ವ್ಯಕ್ತಪಡಿಸಿದರು.

'ಸಿಬ್ಬಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೈಗಾರಿಕಾ ಬಾಂಧವ್ಯ ಇಲ್ಲ. ಬಸ್ ಸಂಚಾರ ವೇಗ ಪಡೆದಿಲ್ಲ. ಶಕ್ತಿ ಯೋಜನೆಯ ಬಳಿಕ ಪ್ರಯಾಣಿಕರು ಸ್ವಲ್ಪ ಹೆಚ್ಚಾಗಿರಬಹುದು. ಸಿಬ್ಬಂದಿ ಹೆಚ್ಚಾಗಿಲ್ಲ ಎಂದರು.

'ಸಾರಿಗೆ ಸಚಿವರು ನಿರಂಕುಶ ಪದ್ಧತಿಯನ್ನು ಕೊನೆಗೊಳಿಸಲು ಕ್ರಮ ಕೈಗೊಳ್ಳಬೇಕು. ಅಧಿಕಾರಶಾಹಿ ಪದ್ಧತಿಯನ್ನು ಕಿತ್ತು ಹಾಕಬೇಕು. ಕೈಗಾರಿಕಾ ಬಾಂಧವ್ಯವನ್ನು ಹೆಚ್ಚಿಸಬೇಕು. ಬಸ್, ಸಿಬ್ಬಂದಿಯನ್ನು ಹೆಚ್ಚಿಸಬೇಕು. ಸಂಘಟನೆಗಳೊಂದಿಗೆ ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಬೇಕು. ಆಗ ರಜತಮಹೋತ್ಸವಕ್ಕೆ ನಿಜವಾದ ಅರ್ಥ ಬರುತ್ತದೆ' ಎಂದರು.

ಸುದ್ದಿ 2 ನಿಮಿಷ

ಭಾನುವಾರವೂ ನಡೆದ ಹೈಕೋರ್ಟ್ ವಿಶೇಷ ಕಲಾಪ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ತಾತ್ಕಾಲಿಕ ಆಯ್ಕೆಪಟ್ಟಿ ರದ್ದುಪಡಿಸಿ, ಅಭ್ಯರ್ಥಿಗಳ ತಂದೆಯ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪರಿಗಣಿಸಿ ಹೊಸದಾಗಿ ತಾತ್ಕಾಲಿಕ ಪಟ್ಟಿ ಪ್ರಕಟಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಲಾದ ಮೇಲ್ಮನವಿಯನ್ನು ವಿಭಾಗೀಯ ನ್ಯಾಯಪೀಠ ರಜಾ ದಿನವಾದ ಭಾನುವಾರವೂ ವಿಶೇಷ ಕಲಾಪದ ಮೂಲಕ ವಿಚಾರಣೆ ನಡೆಸಿತು.

ಏಕಸದಸ್ಯ ನ್ಯಾಯಪೀಠವು 2023ರ ಜನವರಿ 30ರಂದು ಪ್ರಕಟಿಸಿದ್ದ ಆದೇಶವನ್ನು ಪ್ರಶ್ನಿಸಿ ಜಿ.ವಿ.ನಾಗೇಂದ್ರ ಬಾಬು, ಭಾರತಿ ಪಾಟೀಲ, ಗಣೇಶ್ ಪ್ರಸಾದ್ ಮತ್ತು ಮಮತಾ ಸೇರಿದಂತೆ 130ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ಈ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ಆಲಿಸಿತು.

ಬೆಳಗ್ಗೆ 11.30ರ ವೇಳೆಗೆ ಆರಂಭವಾದ ವಿಚಾರಣೆ ಎರಡೂವರೆ ತಾಸಿಗೂ ಹೆಚ್ಚು ಕಾಲ ನಡೆಯಿತು. ಮೇಲ್ಮನವಿದಾರರ ಪರ ವಕೀಲರ ಸುದೀರ್ಘ ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿದೆ.

ಉತ್ತರ ಪ್ರದೇಶದ ತಂಡ ಕೆಎಸ್‌ಆರ್‌ಟಿಸಿಗೆ ಭೇಟಿ



ಬೆಂಗಳೂರು: ಉತ್ತರ ಪ್ರದೇಶ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ತಂಡವು ಕೆಎಸ್‌ಆರ್‌ಟಿಸಿಗೆ ಭೇಟಿ ನೀಡಿ ಅಧ್ಯಯನ ನಡೆಸಿದೆ.

ಕೆಎಸ್‌ಆರ್‌ಟಿಸಿಯಲ್ಲಿ ಅನುಷ್ಠಾನಗೊಳಿಸಲಾಗಿರುವ ಯೋಜನೆಗಳ ಬಗ್ಗೆ ಉತ್ತರ ಪ್ರದೇಶದ ರಸ್ತೆ ಸಾರಿಗೆ ಸಂಸ್ಥೆಯ ಹೆಚ್ಚುವರಿ ವ್ಯವಸ್ಥಾಪಕ ನಿರ್ದೇಶಕಿ ಅನ್ನಪೂರ್ಣ ಗರ್ಗ್ ನೇತೃತ್ವದಲ್ಲಿ ಅಧಿಕಾರಿಗಳು ಅಧ್ಯಯನ ಕೈಗೊಂಡಿದ್ದಾರೆ. ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-4, ಪ್ರಾದೇಶಿಕ ಕಾರ್ಯಾಗಾರ, ಕೆಂಗೇರಿ, ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದ ನಿಯಂತ್ರಣ ಕೊಠಡಿಗಳಿಗೆ ಭೇಟಿ ನೀಡಿದರು.

ವಾಹನಗಳ ತಾಂತ್ರಿಕ ನಿರ್ವಹಣೆ, ಕಾರ್ಯಾಚರಣೆ, ಡ್ಯೂಟಿ ರೋಟಾ ವ್ಯವಸ್ಥೆ, ಮುಂಗಡ ಆಸನ ಕಾಯ್ದಿರಿಸುವಿಕೆ, ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡಿರುವ ವಿನೂತನ ಕ್ರಮಗಳು, ಮಾಹಿತಿ ತಂತ್ರಜ್ಞಾನ ಉಪಕ್ರಮಗಳು, ಬಸ್ ನಿಲ್ದಾಣ, ಘಟಕಗಳ ಕಾಮಗಾರಿ ಪದ್ಧತಿ, ಬಸ್‌ಗಳ ಬ್ರ್ಯಾಂಡಿಂಗ್, ಪುನಶ್ಚೇತನ ಕಾರ್ಯ, ಬಸ್ ನಿಲ್ದಾಣದ ಸ್ವಚ್ಛತೆ ಬಗ್ಗೆ ಮಾಹಿತಿ ಪಡೆದರು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕ ಸುಂದರೇಶ್ ಬಾಬು, ಮುಖ್ಯ ಪ್ರಧಾನ ವ್ಯವಸ್ಥಾಪಕ ಆರ್.ಎನ್. ವರ್ಮಾ (ತಾಂತ್ರಿಕ), ಸಲಹೆಗಾರ ಅತುಲ್ ಜೈನ್ (ಕಾರ್ಯಾಚರಣೆ) ಇದ್ದರು.



ಧಾರವಾಡದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶಾಂತಲಾ ಯಡ್ರಾವಿ, ಜಯಾ ರಾಜಶೇಖರ, ವಿನಯಾ ಒಕ್ಕುಂದ, ಮಧುರಾ ಕರ್ಣಮ್, ಬಾನು ಮುಷ್ತಾಕ, ಸವಿತಾ ನಾಗಭೂಷಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು

'ಸೃಜನಶೀಲತೆಗೆ ಒತ್ತು ನೀಡಿ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಬದುಕಿನಲ್ಲಿ ಸೃಜನಶೀಲತೆ ಬಹಳ ಮುಖ್ಯ. ಮಹಿಳೆಯರು ಸೃಜನಶೀಲತೆಗೆ ಒತ್ತು ಕೊಟ್ಟು, ಸಾಹಿತ್ಯದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಮರಾಠಿ ಲೇಖಕಿ ಡಾ.ಮಾಧುರಿ ಶಾನಭಾಗ ಹೇಳಿದರು.

ನಗರದ ಆಲೂರು ವೆಂಕಟರಾವ್ ಭವನದಲ್ಲಿ ಭಾನುವಾರ ನಡೆದ ಉತ್ತರ ಕರ್ನಾಟಕ ಲೇಖಕಿಯರ ಸಂಘದ ವಾರ್ಷಿಕೋತ್ಸವ ಹಾಗೂ 2021 ಮತ್ತು 2022 ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಸೃಜನಶೀಲ ಬರವಣಿಗೆಯ ಬದಲಾಗುತ್ತಿರುವ ಚಹರೆಗಳು' ಕುರಿತು ಅವರು ಮಾತನಾಡಿದರು. ಈಗಂತೂ ಮಹಿಳೆಯರ ಬರವಣಿಗೆ ಅವಶ್ಯಕ ಎಂದರು. ಮಹಿಳೆಯರಲ್ಲಿ ಹಂಚಿಕೊಳ್ಳಲಾರದ ಸಾಕಷ್ಟು ವ್ಯಥೆ, ನೂರೆಂಟು ಕಥೆಗಳಿವೆ. ಮಹಿಳೆಯರ ಜೀವನ ಕಥನವಾಗಿದ್ದು, ಈ ಕಥೆಗಳನ್ನು ಅಭಿವ್ಯಕ್ತಿಗೊಳಿಸಬೇಕು ಎಂದರು.

'ಹಿಂದಿನಿಂದಲೂ ಮಹಿಳೆಯರ ಮೇಲಿನ ಶೋಷಣೆ ಸ್ವರೂಪ ಬದಲಾಗುತ್ತಾ ಸಾಗಿದೆ ಹೊರತು ಶೋಷಣೆ ನಿಂತಿಲ್ಲ. ಮಾನಸಿಕ ಒತ್ತಡವನ್ನೂ ಸಾಹಿತ್ಯದ ಮೂಲಕ ಹೊರ ಹಾಕಬಹುದು. ಸಾಮಾಜಿಕ ಕೌಟುಂಬಿಕ ಒತ್ತಡಗಳಿಂದ ಹೊರ ಬರಲು ಸೃಜನಶೀಲನ ಸಾಹಿತ್ಯದ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು' ಎಂದರು.

ಶಾಂತಾದೇವಿ ಕಣವಿ ಕಥಾ ಪ್ರಶಸ್ತಿ: ಬಾನು ಮುಷ್ತಾಕ (2021) ಹಾಗೂ ಮಧುರಾ ಕರ್ಣಮ್ (2022ನೇ ಸಾಲಿನ) ಪ್ರಶಸ್ತಿ ನೀಡಲಾಯಿತು. ಈ ಪ್ರಶಸ್ತಿಯ ತಲಾ ₹10 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ.

ಲತಾ ರಾಜಶೇಖರ ಕಾವ್ಯ ಪ್ರಶಸ್ತಿ: ಸವಿತಾ ನಾಗಭೂಷಣ (2021), ವಿನಯಾ ಒಕ್ಕುಂದ (2022) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯ ತಲಾ ₹10 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ.

ಕೋಮಲಾದೇವಿ ಸೂಲಿಬೆಲೆ ಸಾಹಿತ್ಯ ಸರಸ್ವತಿ ಪ್ರಶಸ್ತಿ: ಜಯಾ ರಾಜಶೇಖರ (2021), ಶಾಂತಲಾ ಯಡ್ರಾವಿ (2022) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯ ತಲಾ ₹ 5 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ.

ರಾಜೇಶ್ವರಿ ಮಹೇಶ್ವರಯ್ಯ ಅಧ್ಯಕ್ಷತೆ ವಹಿಸಿದ್ದರು. ವೀಣಾ ಶಾಂತೇಶ್ವರ, ಶಾಂತಾ ಇಮ್ರಾಪೂರ, ಪ್ರೊ.ಮಾಲತಿ ಪಟ್ಟಣಶೆಟ್ಟಿ, ಹೇಮಾ ಪಟ್ಟಣಶೆಟ್ಟಿ, ಪ್ರೇಮಾ ನಡುವಿನಮನಿ, ಪ್ರಜ್ಞಾ ಮತ್ತಿಹಳ್ಳಿ, ಉಷಾ ಗದ್ದಿನಮಠ, ಸುನೀತಾ ಮೂರಶಿಳ್ಳಿ ಇದ್ದರು.

ಬಿಬಿಎಂಪಿ ಸಂಘದ ಚುನಾವಣೆ: 33 ಅಭ್ಯರ್ಥಿಗಳ ಸ್ಪರ್ಧೆ

17 ಸ್ಥಾನದಲ್ಲೂ ಅಮೃತ್‌ರಾಜ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಅಮೃತ್ ರಾಜ್ ನೇತೃತ್ವದ ತಂಡ ಎಲ್ಲ 17 ಸ್ಥಾನಗಳನ್ನೂ ಗೆದ್ದುಕೊಂಡಿದೆ.

ಬಿಬಿಎಂಪಿ ಕೇಂದ್ರಕಚೇರಿ ಅವರಣದ ಡಾ.ರಾಜ್ ಕುಮಾರ್ ಗಾಜಿನಮನೆಯಲ್ಲಿ ಸಂಘದ ಚುನಾವಣೆ ಭಾನುವಾರ ನಡೆಯಿತು. 17 ಕಾರ್ಯಕಾರಿ ನಿರ್ದೇಶಕ ಸ್ಥಾನಗಳಿಗೆ 33 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ ಮತದಾನ ನಡೆಯಿತು. ಬಳಿಕ ಮತ ಎಣಿಕೆ ಮಾಡಲಾಯಿತು.



ಬಿಬಿಎಂಪಿ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಅಮೃತ್ ರಾಜ್ ನೇತೃತ್ವದಲ್ಲಿ ಆಯ್ಕೆಯಾದ 17 ಕಾರ್ಯಕಾರಿ ನಿರ್ದೇಶಕರು

2,700 ಮತಗಳಲ್ಲಿ 2171ಮತಗಳು ಚಲಾವಣೆಯಾಗಿದ್ದವು. 74 ಮತಗಳು ಅಸಿಂಧುವಾಗಿದ್ದವು. ಎ. ಅಮೃತ್‌ರಾಜ್ ಮತ್ತು ಕೆ.ಜಿ. ರವಿ ನೇತೃತ್ವದಲ್ಲಿ 17 ನಿರ್ದೇಶಕರು ಗೆಲುವು ಗಳಿಸಿದರು.

ಎ. ಅಮೃತ್‌ರಾಜ್ ಅತ್ಯಧಿಕ ಮತ (1892) ಪಡೆದರು. ಕೆ.ಜಿ. ರವಿ, ಡಾ.ಶೋಭಾ, ಸೋಮಶೇಖರ್ ಎನ್.ಎಸ್, ಎಚ್.ಕೆ. ತಿಪ್ಪೇಶ್, ಆರ್. ರೇಣುಕಾಂಬ, ವಿ. ಉಮೇಶ್, ಡಿ. ರಾಮಚಂದ್ರ, ಕೆ. ಮಂಜೇಗೌಡ, ಎಸ್.ಜಿ. ಸುರೇಶ್, ಶ್ರೀಧರ್ ಎನ್, ಸಂತೋಷ್ ಕುಮಾರ್ ಎಂ., ಎನ್. ಮಂಜುನಾಥ್, ಕೆ. ನರಸಿಂಹ, ಎಚ್. ಬಿ. ಹರೀಶ್, ಕೆ. ಸಂತೋಷ್ ಕುಮಾರ್ ನಾಯ್ಕ್, ಬಿ. ರುದ್ರೇಶ್ ಜಯ ಸಾಧಿಸಿದರು.

ಎ. ಅಮೃತ್ ರಾಜ್ ಮಾತನಾಡಿ, 'ಕಳೆದ ಐದು ವರ್ಷಗಳಲ್ಲಿ ಅಧ್ಯಕ್ಷನಾಗಿ ಮತ್ತು ಪದಾಧಿಕಾರಿಗಳ ಜೊತೆಯಲ್ಲಿ ಅಧಿಕಾರಿ, ನೌಕರರ ಪರ ಹಲವಾರು ಹೋರಾಟಗಳನ್ನು ನಡೆಸಲಾಗಿತ್ತು. ವೃಂದ ಮತ್ತು ನೇಮಕಾತಿ ಸಮರ್ಪಕವಾಗಿ ಜಾರಿಗೆ ನಮ್ಮ ಹೋರಾಟ ಯಶ್ವಸಿಯಾಗಿ ಸಾವಿರಾರು ನೌಕರರಿಗೆ ಬಡ್ತಿ ಭಾಗ್ಯ ಲಭಿಸಿತು. ಸೋಲಿನ ಭೀತಿಯಿಂದ ವಿರೋಧಿ ಬಣದವರು ಜಾತಿ ರಾಜಕೀಯ ಬಣ್ಣ ಬಳೆಯಲು ಪ್ರಯತ್ನ ಮಾಡಿದರು. ಆದರೆ ನಮಗೆ ಎಲ್ಲರ ಬೆಂಬಲ ದೊರೆತಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

'ಎಲ್ಲರೂ ಸಂಘಟನೆ ಮುಖ್ಯ ಎಂದು ಎಲ್ಲ ಭೇದಗಳನ್ನು ಮರೆತು ನಮ್ಮ ತಂಡದ ಬೆಂಬಲಕ್ಕೆ ನಿಂತರು. ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿಗಾಗಿ ನಮ್ಮ ಹೋರಾಟ ನಿರಂತರ' ಎಂದು ಹೇಳಿದರು.

ಕಾರ್ಮಿಕ ಸಂಘಟನೆಗಳ ಮೇಲೆ ಸುಳ್ಳು ಆಪಾದನೆ: ಸಿದ್ದನಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕ ಸಂಘಟನೆಗಳು ನಡೆಸಿದ ಹೋರಾಟದಿಂದ ಕೈಗಾರಿಕೆಗಳು ಮುಚ್ಚಲು ಕಾರಣ ಎಂದು ಅಪಪ್ರಚಾರ ನಡೆಸಲಾಗಿದೆ ಎಂದು ಹೋರಾಟಗಾರ ಸಿದ್ದನಗೌಡ ಪಾಟೀಲ ಹೇಳಿದರು.

ನಗರದಲ್ಲಿ ಭಾನುವಾರ ಎಂಜಿನಿಯರಿಂಗ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಎಂ.ಡಿ. ಹರಿಗೋವಿಂದ ಸ್ಮಾರಕ ಉಪನ್ಯಾಸದಲ್ಲಿ 'ಕನಿಷ್ಠ ವೇತನ–ವಿವಿಧ ದೃಷ್ಟಿಕೋನಗಳು' ಕುರಿತು ಮಾತನಾಡಿದರು.

'ಸಮಾಜದ ಎದುರು ಕ್ರಾಂತಿಕಾರಿಗಳು ಎನಿಸಿಕೊಳ್ಳಲು ಕೈಗಾರಿಕೆಗಳನ್ನೇ ಮುಚ್ಚಿ, ಕಾರ್ಮಿಕರನ್ನು ಹೊರಹಾಕಿದ ಟ್ರೇಡ್ ಯೂನಿಯನ್ ನಾಯಕರನ್ನು ನಾವು ಕಂಡಿದ್ದೇವೆ. ಆದರೆ, ಹೋರಾಟಗಾರ ಎಂ.ಡಿ. ಹರಿಗೋವಿಂದ ಅವರು ಮಾತಿಗೆ ಸೀಮಿತವಾಗದೇ ಕಾರ್ಮಿಕರ ಪರ ಹೋರಾಟ ನಡೆಸಿದ್ದರು' ಎಂದರು.

'ದಾವಣಗೆರೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕೈಗಾರಿಕೆಗಳು ಮುಚ್ಚಿದ್ದವು. ಕೈಗಾರಿಕೆಗಳು ಮುಚ್ಚಲು ಉತ್ಪಾದನೆ ವಲಯ ಹಾಗೂ ಕೈಗಾರಿಕಾ ಕ್ರಾಂತಿಯಲ್ಲಿ ಆದ ಬದಲಾವಣೆಯೇ ಹೊರತು ಕಾರ್ಮಿಕ ಸಂಘಟನೆಗಳು ಕಾರಣ ಅಲ್ಲ. ಜಾಗತೀಕರಣದ ನಂತರ ಕೈಗಾರಿಕಾ ನೀತಿಗಳೂ ಬದಲಾವಣೆಯಾದವು. 1980ರ ಸಮಯದಲ್ಲಿ ಕಾರ್ಮಿಕ ಸಂಘಟನೆಗಳು ನಡೆಸಿದ ಹೋರಾಟದಿಂದ ಕೈಗಾರಿಕೆಗಳು ಮುಚ್ಚಲ್ಪಟ್ಟವು ಎಂದು ಸುಳ್ಳು ಆಪಾದನೆ ಮಾಡಲಾಯಿತು' ಎಂದು ಹೇಳಿದರು.

'ಹರಿಗೋವಿಂದ ಅವರು ಕಾರ್ಮಿಕ ವರ್ಗದ ಹೋರಾಟ ನಡೆಸಿದ್ದರು. ಬದುಕಿನ ಕೊನೆಯ ಕ್ಷಣದವರೆಗೂ ಕಾರ್ಮಿಕ ವರ್ಗದ ಬದುಕಿನ ಹಿತಾಸಕ್ತಿಗಾಗಿಯೇ ಹೋರಾಡಿದ್ದರು. ಅವರ ಬದುಕು ಹಾಗೂ ಚಳವಳಿಯ ಆಯಾಮಗಳನ್ನು ತಿಳಿಯಬೇಕಿದೆ. ಹರಿಗೋವಿಂದ ಅವರು ದೊಡ್ಡ ಕುಟುಂಬದಿಂದ ಬಂದರೂ ಕೆಳವರ್ಗದ ಪರ ಹೋರಾಟ ನಡೆಸಿದ್ದರು. ಕಾರ್ಮಿಕರನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯುವ ಕೆಲಸ ಮಾಡಿದ್ದರು. ಕಾರ್ಮಿಕರ ಬಗ್ಗೆ ಅಪಾರ ನಿಷ್ಠೆ, ಕಾಳಜಿ ಹೊಂದಿದ್ದರು. ಬರೀ ತತ್ವದ ಮಾತನಾಡಲಿಲ್ಲ. ಆಲೋಚನೆಗಳನ್ನೂ ಕಾರ್ಯರೂಪಕ್ಕೆ ತಂದಿದ್ದರು' ಎಂದರು.

ಎಐಟಿಯುಸಿ ಬೆಂಗಳೂರು ಜಿಲ್ಲಾ ಮಂಡಳಿ ಅಧ್ಯಕ್ಷ ಎಂ.ದೀಪಕ್ ಅಧ್ಯಕ್ಷತೆ ವಹಿಸಿದ್ದರು. ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ ಸೆಂಟರ್ ಫಾರ್ ಲೇಬರ್ ಸ್ಟಡೀಸ್‌ನ ಬಾಬು ಮ್ಯಾಥ್ಯು, ವಕೀಲ ಎಸ್.ಎನ್.ಮೂರ್ತಿ, ಭಾರತೀಯ ವಕೀಲರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮುರಳೀಧರ್, ಎಐಟಿಯುಸಿ ರಾಜ್ಯ ಮಂಡಳಿ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯ್‌ಭಾಸ್ಕರ್ ಹಾಜರಿದ್ದರು.

ಬೆಂಗಳೂರಿನಿಂದ ಕೆಆರ್‌ಎಸ್‌ಗೆ ಬೈಕ್ ರ‍್ಯಾಲಿ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಡೆಯುತ್ತಿರುವ ಹೋರಾಟಕ್ಕೆ ವಿವಿಧ ಸಂಘಟನೆಗಳು ಬೆಂಬಲ ನೀಡುತ್ತಿದ್ದು, ಭಾನುವಾರ ಬೆಂಗಳೂರಿನ ಕನ್ನಡಪರ ಸಂಘಟನೆಗಳ ಸದಸ್ಯರು ಕೆಆರ್‌ಎಸ್‌ವರೆಗೂ ಬೈಕ್ ರ‍್ಯಾಲಿ ನಡೆಸಿ ಪ್ರತಿಭಟನೆಗೆ ಸಾಥ್ ನೀಡಿದರು.

ಕರ್ನಾಟಕ ರಕ್ಷಣಾ ವೇದಿಕೆ, ಕರುನಾಡು ಸೇವಕರ ಪಡೆ, ಕರ್ನಾಟಕ ರಕ್ಷಣಾ ಸೇನೆ, ಕನ್ನಡಿಗರ ರಕ್ಷಣಾ ವೇದಿಕೆ ಸದಸ್ಯರು ಬೈಕ್, ಕಾರುಗಳಲ್ಲಿ ಬಂದರು. ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ಉದ್ದಕ್ಕೂ 'ಕಾವೇರಿ ಉಳಿಸಿ ಮಂಡ್ಯ ರೈತರನ್ನು ಕಾಪಾಡಿ' ಎಂದು ಘೋಷಣೆ ಕೂಗಿದರು.

'ಕಾವೇರಿ ನೀರು ಕುಡಿದು ಬದುಕುತ್ತಿರುವ ಬೆಂಗಳೂರು ಜನರೂ ಕಾವೇರಿ ನದಿ ನೀರು ರಕ್ಷಿಸಿಕೊಳ್ಳಬೇಕು. ಹೀಗಾಗಿ ಬೆಂಗಳೂರಿನ ಜನ, ಸಂಘಟನೆಗಳ ಮುಖಂಡರು, ಚಿತ್ರರಂಗದ ಗಣ್ಯರೂ ಹೋರಾಟದಲ್ಲಿ ಪಾಲ್ಗೊಳ್ಳಬೇಕು' ಎಂದು ಕರುನಾಡು ಸೇವಕರು ಪಡೆಯ ಲೋಕೇಶ್‌ಗೌಡ ಹೇಳಿದರು.

ಚಿತ್ರಾವಳಿ

1


2


3


4


1. ನಗರದಲ್ಲಿ ಭಾನುವಾರ ಸ್ವಕುಳಸಾಲಿ ಸಂಘ ಆಯೋಜಿಸಿದ್ದ 'ಭಗವಾನ್ ಜಿಹ್ವೇಶ್ವರರ ಜಯಂತ್ಯುತ್ಸವ ಮತ್ತು ದಿಂಡಿ ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡಿದ್ದ ಸಮುದಾಯದ ಮಹಿಳೆಯರು ಭಜನೆ ಮಾಡಿ ಸಂಭ್ರಮಿಸಿದರು
—ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನೌಕರರ ಸಂಘವು ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರ ಬೀಳ್ಕೊಡಿಗೆ ಸಮಾರಂಭದಲ್ಲಿ ನಿವೃತ್ತರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಕೃಷ್ಣಪ್ಪ, ಕಾರ್ಯದರ್ಶಿ ಮಂಜುನಾಥ್, ಇಲಾಖೆಯ ಹೆಚ್ಚುವರಿ ನಿರ್ದೇಶಕ ನಾರಾಯಣ ಗೌಡ ಇದ್ದರು.

3. ಬೆಂಗಳೂರಿನ ಉಬುಂಟು ಕನ್ಸೋರ್ಟಿಯಂ ಸದಸ್ಯರು ಕಾಂಬೋಡಿಯಾಕ್ಕೆ ಭೇಟಿ ನೀಡಿ ಕಾಂಬೋಡಿಯ ಮಹಿಳಾ ಉದ್ಯಮಿಗಳ ಸಂಘದೊಂದಿಗೆ (ಸಿಡಬ್ಲ್ಯುಇಎ) ಉದ್ಯಮಶೀಲತೆ ಮತ್ತು ವ್ಯಾಪಾರದ ಬಗ್ಗೆ ಮಾತುಕತೆ ನಡೆಸಿ, ತಿಳಿವಳಿಕಾ ಪತ್ರಕ್ಕೆ ಸಹಿ ಹಾಕಿದರು. ಉಬುಂಟ್ ಒಕ್ಕೂಟ ಮತ್ತು ವಿವಿಧ ಸಂಘಟನೆಗಳ ಪ್ರಮುಖರಾದ ರತ್ನಪ್ರಭಾ, ಉಮಾ ರೆಡ್ಡಿ, ಸರ್ವಮಂಗಳಾ ಪಾಟೀಲ, ರಿಜಾ ಫಾತಿಮಾ, ವಸಂತ ಕುಮಾರಿ, ರತ್ನಪ್ರಭಾ ಪಾಟೀಲ್, ರಚನಾ ಮಹೇಶ್, ಅನುಷ್ಕಾ, ಉಮಾ, ಸುಜಾತಾ ಪಾಟೀಲ ಇದ್ದರು.

4. ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಇತ್ತೀಚೆಗೆ ಆಯೋಜಿಸಿದ್ದ 'ಏರೋಸ್ಪೇಸ್ ಎಂಜಿನಿಯರ್‌ಗಳ ರಾಷ್ಟ್ರೀಯ ಸಮಾವೇಶ'ದಲ್ಲಿ ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗ ಮಂಡಳಿಯ ಅಧ್ಯಕ್ಷ ಪಿ.ವಿ. ವೆಂಕಿಟಕೃಷ್ಣನ್, ಜೆ.ಜೆ. ರಾಮಮೂರ್ತಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ



ಕಾಯಕ ಯೋಗಿಯ ನೋಡಿಲ್ಲಿ...



ವಿಜಯನಗರದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುತ್ತಿರುವ ಪತ್ರಿಕಾ ವಿತರಕ ವೆಂಕಟರಾಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಕಿರಣಗಳು ಭೂಮಿಗೆ ಮುತ್ತಿಕ್ಕುವ ಮುನ್ನವೇ ಇವರು ಪ್ರತಿನಿತ್ಯವೂ ಕಾಯಕಕ್ಕೆ ಹಾಜರು. ಮಳೆ, ಚಳಿ, ಗಾಳಿ ಇದ್ಯಾವುದನ್ನೂ ಲೆಕ್ಕಿಸುವುದಿಲ್ಲ. ಎಷ್ಟೇ ತಾಪತ್ರಯಗಳು ಎದುರಾದರೂ ಇವರು ಕಾಯಕವನ್ನು ಮರೆಯುವುದಿಲ್ಲ... – ಅವರೇ ದಿನ ಪತ್ರಿಕೆಗಳ ಬೆನ್ನೆಲುಬಿನಂತಿರುವ ಪತ್ರಿಕಾ ವಿತರಕರು; ಮುಂಜಾನೆಯ ಕಾಯಕ ಜೀವಿಗಳು.

ನಗರದಲ್ಲಿ ಬಹುತೇಕರು ಎದ್ದೇಳುವ ಹೊತ್ತಿಗೆ ಇವರೆಲ್ಲರೂ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸಿರುತ್ತಾರೆ.

ಕೋವಿಡ್‌ನ ದುರಿತ ಸಮಯದಲ್ಲೂ ತಮ್ಮ ವೃತ್ತಿ ಮರೆಯಲಿಲ್ಲ. ಲಾಕ್‌ಡೌನ್ ಸಮಯದಲ್ಲಿಯೂ ವಿತರಕರು ಕೆಲವೊಮ್ಮೆ ಏಟು ತಿಂದರು, ಮತ್ತೆ ಕೆಲವೊಮ್ಮೆ ಜಾಗೃತಿಯ ಪಾಠ ನೀಡಿದರು. ಪ್ರತಿದಿನವೂ ಮನೆಗೆ ಪತ್ರಿಕೆ ತಲುಪಿಸುವಲ್ಲಿ ತಪ್ಪಲಿಲ್ಲ.

'ಸಿಲಿಕಾನ್ ಸಿಟಿ'ಯ ವಿಜಯನಗರ, ಇಂದಿರಾನಗರ, ಜಯನಗರ, ಹೆಬ್ಬಾಳ, ಜೆ.ಪಿ.ನಗರ, ಚಾಮರಾಜಪೇಟೆ, ಬಸವನಗುಡಿ, ಮೆಜೆಸ್ಟಿಕ್, ರಾಜಾಜಿನಗರ... ಹೀಗೆ ನಗರದ ಎಲ್ಲೆಡೆಯ ಮನೆಗಳಿಗೆ ನಿರಂತರ ಪತ್ರಿಕೆ ತಲುಪಿಸುವ ಕಾರ್ಯದಲ್ಲಿ ತೊಡಗುತ್ತಾರೆ.

ಬೆಳ್ಳಂಬೆಳಿಗ್ಗೆ ಕೆಲಸ ಆರಂಭಿಸುವ ಇವರು ದಿನಪತ್ರಿಕೆಗಳ ಜತೆ ತಮ್ಮ ಬದುಕು ರೂಪಿಸಿಕೊಂಡಿದ್ದಾರೆ. ಆದರೆ ಇಂಥ ಕಾಯಕಜೀವಿಗಳನ್ನು ಗುರುತಿಸುವುದೇ ಇಲ್ಲ. ನಮ್ಮ ಧಾವಂತದ ಬದುಕಿನಲ್ಲಿ ಈ ಸೇವೆಯನ್ನೂ ಗಮನಿಸುವುದೇ ಇಲ್ಲ. ವಿತರಕರ ಕೆಲಸ ಹಂಚಿಕೊಳ್ಳುವ ಪೇಪರ್ ಹುಡುಗರೂ ನಮಗೆ ಪತ್ರಿಕೆ ತಲುಪಿಸುವ ಹುಡುನಷ್ಟೆ!

ಆದರೆ ಪತ್ರಿಕೆಗಳ ಬೆನ್ನೆಲುಬಾಗಿರುವ ಪತ್ರಿಕಾ ವಿತರಕರು ಎದುರಿಸುತ್ತಿರುವ ತಾಪತ್ರಯಗಳು ಸಾಕಷ್ಟಿವೆ. ವಿತರಕರ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಸಂಘಟಿತರಾಗಿ, ತಮ್ಮ ಹಕ್ಕುಗಳಿಗೆ ಹೋರಾಟ ರೂಪಿಸಬೇಕು ಎಂದು ಸಂಘದ ಪ್ರತಿನಿಧಿಗಳು ಆಗ್ರಹಿಸುತ್ತಾರೆ.

'ವಿಮಾ ಸೌಲಭ್ಯ ಕಲ್ಪಿಸಬೇಕು, ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು, ಕೆಲಸದ ವೇಳೆಯಲ್ಲಿ ಮೃತಪಟ್ಟರೆ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಬೇಕು, ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡಬೇಕು ಹಾಗೂ ಶೂನ್ಯ ಬಡ್ಡಿದರಲ್ಲಿ ಸಾಲ ಸೌಲಭ್ಯ ಕಲ್ಪಿಸಬೇಕೆಂದು ಬಹಳ ವರ್ಷಗಳಿಂದ ಹೋರಾಡುತ್ತಿದ್ದೇವೆ. ಆದರೆ, ಇನ್ನೂ ಬೇಡಿಕೆ ಈಡೇರಿಲ್ಲ' ಎಂದು ಸಂಘದ ಪ್ರತಿನಿಧಿಗಳು ಹೇಳುತ್ತಾರೆ.

'ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಬೇಕು. ಹಲವು ದಶಕಗಳ ಬೇಡಿಕೆಗೆ ಪರಿಹಾರ ದೊರೆಯದೆ ಬೇಡಿಕೆಯಾಗಿಯೇ ಉಳಿದಿವೆ' ಎಂದು ಅಳಲು ತೋಡಿಕೊಳ್ಳುತ್ತಾರೆ.

'ಪತ್ರಿಕಾ ವಿತರಕರ' ದಿನ ಇಂದು


ಓದುಗರು ಹಾಗೂ ಸುದ್ದಿಮನೆಯ ಕೊಂಡಿಯಂತೆ ಕೆಲಸ ಮಾಡುವ ಪತ್ರಿಕಾ ವಿತರಕರ ಕೈಂಕರ್ಯವನ್ನು ಸ್ಮರಿಸುವ ದಿನ ಇಂದು. ಮುಂಜಾನೆಯ ಚಹಾದೊಂದಿಗೆ ಪತ್ರಿಕೆ ಓದುವಂತೆ ಮಾಡುವ ಇವರು ಎದುರಿಸುವ ಸಂಕಷ್ಟಗಳು ಹಲವು. ಮಳೆ, ಚಳಿ ಎನ್ನದೆಯೇ ಎಂತಹ ಪರಿಸ್ಥಿತಿಗೂ ಎದೆಗುಂದದೆ ಪ್ರತಿನಿತ್ಯವೂ ಕಾಯಕ ನಿಷ್ಠೆ ತೋರುವ ಪತ್ರಿಕಾ ವಿತರಕರಿಗೆ ಶರಣು.



ಸಿದ್ದಲಿಂಗಪ್ಪ ಪತ್ರಿಕಾ ವಿತರಕರು ತನ್ನ ಕೆಲಸದಲ್ಲಿ ಭುವನೇಶ್ವರ ನಗರದ ಬಳಿ ತೊಡಗಿಕೊಂಡಿರುವುದು



ರಾಜಣ್ಣ ಪತ್ರಿಕಾ ವಿತರಕರು ಬ್ಯಾಟರಾಯನಪುರ



ಪ್ಯಾಲೇಸ್ ಗುಟ್ಟಹಳ್ಳಿ ಬಳಿ ಪತ್ರಿಕಾ ವಿತರಕ ತನ್ನ ಕೆಲಸದಲ್ಲಿ ತೊಡಗಿಕೊಂಡಿರುವುದು – ಪ್ರಜಾವಾಣಿ ಚಿತ್ರ

ಪತ್ರಿಕಾ ವಿತರಕರ ಮಾತು-ಕತೆ...

'ಬದುಕು ಕೊಟ್ಟ ಪತ್ರಿಕೆ'



38 ವರ್ಷಗಳಿಂದ ಏಜೆಂಟ್ ವೃತ್ತಿ ಮಾಡುತ್ತಿದ್ದೇನೆ. 'ಪ್ರಜಾವಾಣಿ' ಹಾಗೂ 'ಡೆಕ್ಕನ್‌ಹೆರಾಲ್ಡ್' ಪತ್ರಿಕೆಯಿಂದ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಮಕ್ಕಳ ಶಿಕ್ಷಣ ಹಾಗೂ ಕುಟುಂಬದ ನಿರ್ವಹಣೆಗೆ ಪತ್ರಿಕೆ ನೆರವಾಗಿದೆ. ಇದೇ ನನಗೆ ಮುಖ್ಯವೃತ್ತಿ. ಇದನ್ನು ಹೊರತು ಪಡಿಸಿ ಬೇರೆ ಯಾವ ಕೆಲಸವನ್ನೂ ನಾನು ಮಾಡಲೇ ಇಲ್ಲ. ಈಗಲೂ ಮುಂಜಾನೆ 3.45ಕ್ಕೆ ಎದ್ದು, ಚಾಮರಾಜಪೇಟೆ ವಿಶಾಲ್ ಮಾರ್ಟ್ ಬಳಿಗೆ 4.15ಕ್ಕೆ ತಲುಪಿರುತ್ತೇನೆ. ಇದು ಅಭ್ಯಾಸವಾಗಿ ಹೋಗಿದೆ. ಕೋವಿಡ್ ಬಳಿಕ ಈ ವೃತ್ತಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದರೂ ನೆಮ್ಮದಿ ಇದೆ.

ಬಿ.ರಮೇಶ್, ಚಾಮರಾಜಪೇಟೆ

'ಪತ್ರಿಕೆ ಹಾಕುವ ಕೆಲಸದಿಂದ ಏಜೆಂಟ್ ತನಕ...'



ಬ್ಯಾಟರಾಯಪುರದಲ್ಲಿ ಅಕ್ಕನ ಮನೆಗೆ ವಿದ್ಯಾಭ್ಯಾಸಕ್ಕೆಂದು ಬಂದವನು ನಾನು. 1986ರಲ್ಲಿ ಸೈಕಲ್‌ನಲ್ಲಿ ತೆರಳಿ, ಮನೆ ಮನೆಗೆ ಪತ್ರಿಕೆ ಹಂಚುವ ಕೆಲಸ ಆರಂಭಿಸಿದ್ದೆ. ಅದಾದ ಮೇಲೆ ಆಸಕ್ತಿ ಬೆಳೆದು 2000ನೇ ಇಸವಿಯಲ್ಲಿ ಸ್ವಂತ ಏಜೆನ್ಸಿ ತೆಗೆದುಕೊಂಡೆ. 'ಪ್ರಜಾವಾಣಿ'ಯಿಂದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಇಬ್ಬರು ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದೇನೆ. ಪತ್ರಿಕಾ ವಿತರಕರಿಗೆ ವಿಮಾ ಸೌಲಭ್ಯ ನೀಡಬೇಕು.

ಎಂ.ರಾಜಣ್ಣ, ಬ್ಯಾಟರಾಯನಪುರ

'ಸರ್ಕಾರ ನಮ್ಮತ್ತ ಗಮನ ಹರಿಸಲಿ...'



ಮನೆ ಮನೆಗೆ ಪತ್ರಿಕೆ ಹಾಕುವ ಹುಡುಗರು ಸಿಗುತ್ತಿಲ್ಲ. ಹಿಂದೆ ಸ್ವಯಂ ಪ್ರೇರಣೆಯಿಂದ ಹುಡುಗರೆ ಕೆಲಸಕ್ಕೆ ಬರುತ್ತಿದ್ದರು. ಇದು ಸಮಸ್ಯೆಯಿದೆ. ಅದನ್ನು ಹೊರತುಪಡಿಸಿದರೆ ಬಹಳ ಉತ್ತಮ ವೃತ್ತಿ ಇದಾಗಿದೆ. 25 ವರ್ಷದಿಂದ ಏಜೆಂಟ್ ಕೆಲಸ ಮಾಡುತ್ತಿದ್ದೇನೆ. ಸರ್ಕಾರ ಯಾವ ಸೌಲಭ್ಯವನ್ನೂ ಕಲ್ಪಿಸಿಲ್ಲ.

ಪಿ.ದಾಮೋಧರ್, ಕಾಕ್ಸ್‌ಟೌನ್

ಆರೋಗ್ಯ ಸೌಲಭ್ಯ ಕಲ್ಪಿಸಲಿ



1988ರಲ್ಲಿ ಚಿಪ್ರಿ ಎಂಬುವರು ನಡೆಸುತ್ತಿದ್ದ ಏಜೆನ್ಸಿಯಲ್ಲಿ ಪತ್ರಿಕಾ ವಿತರಣಾ ಕೆಲಸಕ್ಕೆ ಸೇರಿಕೊಂಡಿದ್ದೆ. ಅಂದು ತಿಂಗಳಿಗೆ ₹ 100 ಸಿಗುತ್ತಿತ್ತು. ಅದಾದ ಮೇಲೆ ನಾನೇ ಪ್ರತ್ಯೇಕವಾಗಿ ಏಜೆನ್ಸಿ ತೆಗೆದುಕೊಂಡೆ. ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಇಂದು ತಿಂಗಳಿಗೆ ₹ 4ರಿಂದ ₹ 5 ಸಾವಿರ ನೀಡಿದರೂ ಪತ್ರಿಕೆ ವಿತರಿಸಲು ಹುಡುಗರು ಸಿಗುವುದಿಲ್ಲ. ಪತ್ರಿಕೆ ವಿತರಣೆ ಮಾಡುವುದರಿಂದ ವಿದ್ಯಾಭ್ಯಾಸಕ್ಕೆ ಸ್ವಲ್ಪ ಹಣ ಸಿಗುತ್ತದೆ. ಆದರೆ, ಹುಡುಗರಲ್ಲಿ ಆಸಕ್ತಿ ಇಲ್ಲ. ಸರ್ಕಾರವು ಏಜೆಂಟರ ಆರೋಗ್ಯಕ್ಕೆ ಸೌಲಭ್ಯ ಕಲ್ಪಿಸುವ ಅಗತ್ಯವಿದೆ.

ಬಿ.ರಾಘವಪ್ಪ, ಕೆಆರ್ ಪುರಂ

ವಿತರಕರ ಕಷ್ಟಕ್ಕೆ ಸ್ಪಂದಿಸಲಿ



ದಿನಪತ್ರಿಕೆಗಳ ವಿತರಣೆಯಿಂದಲೇ ಜೀವನವನ್ನು ಕಟ್ಟಿಕೊಂಡಿದ್ದೇನೆ. ನನ್ನ ಮಕ್ಕಳಿಬ್ಬರನ್ನು ಎಂಜಿನಿಯರಿಂಗ್ ಓದಿಸುತ್ತಿದ್ದೇನೆ. ಕಳೆದ 38 ವರ್ಷಗಳಿಂದ ಇದೇ ವೃತ್ತಿ ನಂಬಿಕೊಂಡು ಜೀವನ ನಡೆಸುತ್ತಿದ್ದೇನೆ. ವೃತ್ತಿ ಉತ್ತಮವಾಗಿದೆ. ಸರ್ಕಾರ ಪತ್ರಿಕಾ ವಿತರಕರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವ ಕೆಲಸ ಮಾಡಬೇಕು.

ಸಿದ್ದಲಿಂಗಪ್ಪ ಆರ್., ಪತ್ರಿಕಾ ವಿತರಕ ಬಸವೇಶ್ವರನಗರ

ಸರ್ಕಾರಿ ನೌಕರಿಯ ಜತೆಗೆ ಪತ್ರಿಕೆಗಳ ವಿತರಣೆ



1976ರಿಂದಲೇ ಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದೇನೆ. 'ಪ್ರಜಾವಾಣಿ'ಯ ಒಂದು ತಿಂಗಳ ಬಿಲ್ ₹ 8.50 ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಒಂದು ತಿಂಗಳ ಬಿಲ್ ₹ 10.80 ಬರುತ್ತಿತ್ತು. 1996ರಲ್ಲಿ ನಾನು ಬಿಎಸ್‌ಎನ್‌ಎಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ಆದರೂ, ಪತ್ರಿಕೆಗಳ ವಿತರಣೆ ಕೆಲಸ ಬಿಡಲಿಲ್ಲ. ಕೋವಿಡ್ ಸಂದರ್ಭದಲ್ಲೂ ನಿರ್ಭೀತಿಯಿಂದ ಪತ್ರಿಕೆಗಳನ್ನು ವಿತರಿಸಿದ್ದೇವೆ. ಪತ್ರಿಕಾ ವಿತರಿಕರಿಗೆ ಸರ್ಕಾರ ವಿಮಾ ಸೌಲಭ್ಯ ಕಲ್ಪಿಸಬೇಕು.

ವೆಂಕಟೇಶ್, ಪತ್ರಿಕಾ ವಿತರಕ, ಜೆ.ಪಿ. ನಗರ

ಜೀವನ ಕೊಟ್ಟ ಪೇಪರ್ ಏಜೆನ್ಸಿ



ಕಳೆದ 50 ವರ್ಷಗಳಿಂದ ಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದೇನೆ. ಪೇಪರ್ ಏಜೆನ್ಸಿ ಮೂಲಕವೇ ಜೀವನ ಕಟ್ಟಿಕೊಂಡಿದ್ದೇನೆ. ಜತೆಗೆ ಇಎಸ್‌ಐ ಆಸ್ಪತ್ರೆಯಲ್ಲಿ ವಾರ್ಡ್ ಬಾಯ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದೇನೆ. ಪತ್ರಿಕಾ ವಿತರಕರಿಗೆ ಅಪಘಾತ ಸಂಭವಿಸಿದಾಗ ಪತ್ರಿಕಾ ವಿತರಕರ ಸಂಘದಿಂದ ಪರಿಹಾರ ನೀಡಲಾಗುತ್ತಿದೆ. ಸರ್ಕಾರವೂ ಹೆಚ್ಚಿನ ಸೌಲಭ್ಯ ಕಲ್ಪಿಸಲಿ.

ನಿಂಗಪ್ಪ, ಪತ್ರಿಕಾ ವಿತರಕ ಮಹಾಲಕ್ಷ್ಮಿ ಲೇಔಟ್



ವಿಜೃಂಭಣೆಯ ಓಣಂ ಆಚರಣೆ

ಪೀಣ್ಯ ದಾಸರಹಳ್ಳಿ ಬಳಿಯ ಕಾನ್ ಕಾರ್ಡ್ ವಸತಿ ಸಮುಚ್ಚಯದಲ್ಲಿ ಓಣಂ ಹಬ್ಬವನ್ನು 'ಕಾನ್ ಕಾರ್ಡ್ ಸ್ಪ್ರಿಂಗ್ ಮಿಡೋಸ್ ಓನರ್ಸ್ ಅಸೋಸಿಯೇಷನ್' ವತಿಯಿಂದ ಆಯೋಜಿಸಲಾಗಿತ್ತು.

ಪ್ರಜಾವಾಣಿ ಚಿತ್ರ

ನಗರದ ಉತ್ತರ ಭಾಗದ ಕೊಳವೆಬಾವಿಗಳಲ್ಲಿ ಅಂತರ್ಜಲಮಟ್ಟ ಕುಸಿತ

ಮಳೆಗಾಲದಲ್ಲೂ ಕುಡಿಯಲು ನೀರಿಲ್ಲ

• ಆದಿತ್ಯ ಕೆ.ಎ.

ಬೆಂಗಳೂರು: ಮುಂಗಾರು ಅವಧಿಯಲ್ಲಿ ವಾಡಿಕೆಯಷ್ಟು ಮಳೆ ಸುರಿಯದ ಪರಿಣಾಮ ಅದರ ಬಿಸಿ ರಾಜಧಾನಿಯ ಉತ್ತರ ಭಾಗದ ಹಲವು ಬಡಾವಣೆಗಳಿಗೂ ತಟ್ಟಲು ಆರಂಭಿಸಿದೆ.

ಮಳೆಗಾಲದ ಅವಧಿಯಲ್ಲೇ ಕೆಲವು ಬಡಾವಣೆಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು ವಾರದಿಂದ ಈಚೆಗೆ ನಾಗರಿಕರು ಸಮಸ್ಯೆಗೆ ಸಿಲುಕಿದ್ದಾರೆ.

ನಿತ್ಯದ ಬಳಕೆಗೂ ಜನರು ಟ್ಯಾಂಕರ್ ನೀರಿನ ಮೊರೆ ಹೋಗುವ ಸ್ಥಿತಿ ಸೆಪ್ಟೆಂಬರ್ ಆರಂಭದಲ್ಲಿಯೇ ಎದುರಾಗಿದೆ. ದಾಸರಹಳ್ಳಿ, ಯಶವಂತಪುರದ ಸುತ್ತಮುತ್ತ, ರಾಜರಾಜೇಶ್ವರಿ ನಗರದ ಕೆಲವು ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ.

ಜಲಮಂಡಳಿಯು ಹಿಂದೆ ವಾರದಲ್ಲಿ 2ರಿಂದ 3 ಬಾರಿ ಕಾವೇರಿ ನೀರು ಪೂರೈಸುತ್ತಿತ್ತು. ಆದರೀಗ ಒಂದು ವಾರ ಕಳೆದರೂ 'ಕಾವೇರಿ' ನೀರು ಬರುತ್ತಿಲ್ಲ. ಜಲಮಂಡಳಿ ಎಂಜಿನಿಯರ್‌ಗಳು ಸಮಸ್ಯೆಯನ್ನೂ ಆಲಿಸುತ್ತಿಲ್ಲ ಎಂದು ನಾಗರಿಕರು ಅಳಲು ತೋಡಿಕೊಳ್ಳುತ್ತಾರೆ.

ದಾಸರಹಳ್ಳಿಯ ಮಂಜುನಾಥ್ ನಗರ, ಅಬ್ಬಿಗೆರೆ, ಚಿಕ್ಕಸಂದ್ರ, ಗಣಪತಿ ನಗರ, ಚೊಕ್ಕಸಂದ್ರ, ಸುಂಕದಕಟ್ಟೆ, ಎಸ್.ಎಂ.ರಸ್ತೆ, ಉಡುಪ ಗಾರ್ಡನ್, ಜಾಲಹಳ್ಳಿ ಕ್ರಾಸ್, ಕಮ್ಮಗೊಂಡನಹಳ್ಳಿಯ ಕೆಲವು ಭಾಗಕ್ಕೆ ಕಾವೇರಿ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ಶಾಸಕ ಎಂ.ಮುನಿರಾಜು ಅವರು ಜಲಮಂಡಳಿಯ ಎಂಜಿನಿಯರ್‌ಗಳ ಜತೆಗೆ ಸಭೆ ನಡೆಸಿ ಸಮಸ್ಯೆ ಇತ್ಯರ್ಥಪಡಿಸುವಂತೆ ಸೂಚಿಸಿದ್ದಾರೆ. ಆದರೂ, ನಲ್ಲಿಯಲ್ಲಿ ನೀರು ಬರುತ್ತಿಲ್ಲ.

ದೊಡ್ಡಬಿದಿರು ಕಲ್ಲು, ಚಿಕ್ಕಬಿದಿರು ಕಲ್ಲು ಭಾಗದಲ್ಲೂ ಸಮಸ್ಯೆ ಉಲ್ಬಣಿಸಿದೆ. ಚಿಕ್ಕಸಂದ್ರ, ಲಕ್ಷ್ಮೀಪುರ, ಶೆಟ್ಟಿಹಳ್ಳಿಗೆ ಕಾವೇರಿ ನೀರು ಸರಬರಾಜು ವ್ಯವಸ್ಥೆಯನ್ನೇ ಜಲಮಂಡಳಿ ಮಾಡಿಲ್ಲ. ಪೈಪ್‌ಲೈನ್ ಮಾತ್ರ ಹಾಕಲಾಗಿದೆ. ಇತ್ತ ಕೊಳವೆಬಾವಿಗಳಲ್ಲೂ ನೀರಿನಮಟ್ಟ ಕುಸಿದಿದೆ. ಶುದ್ಧೀಕರಣ ಘಟಕಗಳಲ್ಲೂ ನೀರಿನ ದರವನ್ನು ₹ 5ರಿಂದ ₹ 10ಕ್ಕೆ ಏರಿಕೆ ಮಾಡಲಾಗಿದೆ ಎಂದು ಸ್ಥಳೀಯರಾದ ರಾಜು ನೋವು ತೋಡಿಕೊಂಡರು.

ಟ್ಯಾಂಕರ್ ಮೊರೆ: ಈ ಭಾಗದಲ್ಲಿ ಹೋಟೆಲ್ ಮಾಲೀಕರು ಟ್ಯಾಂಕರ್ ನೀರಿನ ಮೊರೆ ಹೋಗಿದ್ದಾರೆ. ಅಲ್ಲದೇ ಕೆಲವು ಮನೆ ಮಾಲೀಕರು ಬಾಡಿಗೆದಾರರಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದಾರೆ. ದುಬಾರಿ ದರ ನೀಡಿ ಟ್ಯಾಂಕರ್ ನೀರು ಖರೀದಿಸಬೇಕಾದ ಸ್ಥಿತಿ ಎದುರಾಗಿದೆ. ಈ ಭಾಗದಲ್ಲಿ ಕೆಲವು ಸಣ್ಣಪುಟ್ಟ ಕೈಗಾರಿಕೆಗಳಿದ್ದು, ನೀರಿನ ಕೊರತೆ ಎದುರಿಸುತ್ತಿವೆ.

ದಾಸರಹಳ್ಳಿ ಭಾಗದಲ್ಲಿ ಹೊರ ಜಿಲ್ಲೆಗಳಿಂದ ಬಂದು ನೆಲೆಸುವವರ ಸಂಖ್ಯೆ ಹೆಚ್ಚಾಗಿದೆ. ಬಹುಮಹಡಿ ಕಟ್ಟಡ ನಿರ್ಮಿಸಿ ಬಾಡಿಗೆ ಕೊಡಲಾಗುತ್ತಿದೆ. ಅಷ್ಟೇ ವೇಗದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಗೊಳ್ಳುತ್ತಿವೆ. ಪ್ರತ್ಯೇಕ ನೀರಿನ ವ್ಯವಸ್ಥೆ ಮಾಡಿಕೊಳ್ಳದ ಅಪಾರ್ಟ್‌ಮೆಂಟ್ ನಿವಾಸಿಗಳೂ ಮಳೆಗಾಲದಲ್ಲೇ ತೊಂದರೆಗೆ ಸಿಲುಕುವ ಸ್ಥಿತಿಯಿದೆ.

'ದಾಸರಹಳ್ಳಿ ಸೇರಿದಂತೆ ಸುತ್ತಮುತ್ತ ಭಾಗಕ್ಕೆ ಹಿಂದಿನಷ್ಟೇ 730 ಎಂಎಲ್‌ಡಿ ನೀರು ಪೂರೈಸಲಾಗುತ್ತಿದೆ. ಆದರೆ, ಜನಸಂಖ್ಯೆ ಹೆಚ್ಚಿರುವ ಕಾರಣಕ್ಕೆ ನೀರಿನ ಬೇಡಿಕೆ ಹೆಚ್ಚಾಗಿದೆ' ಎಂದು ಜಲಮಂಡಳಿ ಮುಖ್ಯ ಎಂಜಿನಿಯರ್‌ವೊಬ್ಬರು ತಿಳಿಸಿದ್ದಾರೆ.

> **ವಾರಕ್ಕೊಮ್ಮೆ ಮಾತ್ರ ಕಾವೇರಿ ನೀರು ಬರುತ್ತಿದೆ. ಅದು ಅರ್ಧ ಟ್ಯಾಂಕ್ ಭರ್ತಿ ಆಗುವಷ್ಟರಲ್ಲಿಯೇ ಪೂರೈಕೆ ಸ್ಥಗಿತ ಮಾಡಲಾಗುತ್ತಿದೆ**
> **ಲೋಕೇಶ್ ಗೌಡ,** ಸುಂಕದಕಟ್ಟೆ ನಿವಾಸಿ

> **ನಮ್ಮ ಭಾಗಕ್ಕೆ ಕಾವೇರಿ ನೀರು ಬರುತ್ತಲೇ ಇಲ್ಲ. ಬಿಬಿಎಂಪಿಯ ಕೊಳವೆಬಾವಿ ಸಹ ಕೆಟ್ಟಿದ್ದು ಆ ನೀರು ಸಹ ಇಲ್ಲ**
> **ಪ್ರೇಮಾ,** ತೆಂಗಿನತೋಟದ ಬಡಾವಣೆ ನಿವಾಸಿ



ಟ್ಯಾಂಕರ್ ನೀರಿಗೆ ಮೊರೆ ಹೋದ ನಿವಾಸಿಗಳು

ವಾಡಿಕೆಯಂತೆ ಆಗದ ಮಳೆ: ನೀರಿನ ಮಟ್ಟ ಕುಸಿತ

ನಗರದಲ್ಲಿ ಮುಂಗಾರು ಅವಧಿಯಲ್ಲಿ (ಜೂನ್ 1ರಿಂದ ಸೆ.3ರ ತನಕ) 243 ಮಿ.ಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ, 201 ಮಿ.ಮೀ ಆಗಿದೆ. ಶೇ 17ರಷ್ಟು ಕೊರತೆಯಾಗಿದೆ. ಬೆಂಗಳೂರು ಉತ್ತರ ಭಾಗದಲ್ಲಿ ಮಳೆ ಕೊರತೆ ಪ್ರಮಾಣ ದುಪ್ಪಟ್ಟಾಗಿದೆ. ಹೀಗಾಗಿ ಉತ್ತರ ಭಾಗದ ಕೊಳವೆಬಾವಿಗಳಲ್ಲಿ ನೀರಿನಮಟ್ಟ ಕುಸಿದಿದೆ. ಇದೂ ಸಹ ಸಮಸ್ಯೆಗೆ ಕಾರಣವಾಗಿದೆ.

ಚೊಕ್ಕಸಂದ್ರ ಕೆರೆ ಮೀನುಗಳ ಸಾವು

ಪೀಣ್ಯ ದಾಸರಹಳ್ಳಿ: ಚೊಕ್ಕಸಂದ್ರ ಕೆರೆಗೆ ಚರಂಡಿಯ ಕಲುಷಿತ ನೀರು ಸೇರಿ ಮೀನುಗಳು ಸಾವಿಗೀಡಾಗಿವೆ.

ಪೀಣ್ಯ ಕೈಗಾರಿಕಾ ಪ್ರದೇಶ ಕಡೆಯಿಂದ ಬರುವ ಕಲುಷಿತ ಚರಂಡಿ ನೀರು, ಕೆರೆಯ ಕೋಡಿ ಬಳಿ ಮೋರಿಯ ಕೆಳಗೆ ಹರಿದು ಬೇರೆಡೆ ಹೋಗುತ್ತದೆ. ಚರಂಡಿ ನೀರು ಕೆರೆಗೆ ಬಾರದಂತೆ ಆರು ಅಡಿ ಎತ್ತರ ಸೇತುವೆ ನಿರ್ಮಿಸಲಾಗಿದೆ. ದಿನ ನಿತ್ಯ ಒಂದು ಅಡಿಯಷ್ಟು ನೀರು ಸರಾಗವಾಗಿ ಹರಿಯುತ್ತದೆ. ಆದರೆ, ಎರಡು ದಿನಗಳ ಹಿಂದೆ ರಾತ್ರಿಯಿಡೀ ಸುರಿದ ಮಳೆಗೆ ಆರು ಅಡಿಗೂ ಎತ್ತರಕ್ಕೆ ನುಗ್ಗಿದ ನೀರು ಕೆರೆಯ ಒಡಲಿಗೆ ನುಗ್ಗಿದೆ. ಇದರ ಪರಿಣಾಮ ಮೀನುಗಳು ಸಾವಿಗೀಡಾಗಿವೆ ಎಂದು ಸ್ಥಳೀಯರು ದೂರಿದ್ದಾರೆ.



ಚೊಕ್ಕಸಂದ್ರದ ಕೆರೆಯಲ್ಲಿ ಸಾವಿಗೀಡಾಗಿರುವ ಮೀನುಗಳು

ಪ್ರತಿದಿನ ಚರಂಡಿ ನೀರು ಬೇರೆ ಕಡೆಗೆ ಹೋಗಲು ಸೇತುವೆಯ ಕೆಳಗೆ ವ್ಯವಸ್ಥೆ ಮಾಡಲಾಗಿದೆ. ಆದರೆ, ಮೊನ್ನೆ ಧಾರಾಕಾರವಾಗಿ ಸುರಿದ ಮಳೆಯಿಂದ ಚರಂಡಿ ನೀರು ಕೆರೆಗೆ ನುಗ್ಗಿದ ಪರಿಣಾಮ 50 ಕೆ.ಜಿ.ಗೂ ಹೆಚ್ಚು ಮೀನುಗಳು ಸಾವಿಗೀಡಾಗಿದ್ದು, ಅವುಗಳನ್ನು ಬೇರೆಡೆ ಮಣ್ಣಲ್ಲಿ ಹೂತು ಹಾಕಿದ್ದೇವೆ' ಎಂದು ಕಾರ್ಮಿಕ ಬಸವರಾಜು ತಿಳಿಸಿದರು.

ಕೆರೆಯ ಮೀನು ಸಾಕಾಣಿಕೆಯ ಟೆಂಡರ್ ಪಡೆದ ಅಭಿ ಕರೆ ಸ್ವೀಕರಿಸಲಿಲ್ಲ. 'ಪ್ರತಿದಿನ ಸಾವಿರಾರು ಜನರು ಕೆರೆ ಏರಿ ಮೇಲೆ ವಾಯುವಿಹಾರ ಮಾಡುತ್ತಾರೆ. ಚೊಕ್ಕಸಂದ್ರದಿಂದ ರುಕ್ಮಿಣಿ ನಗರ, ಮಾರುತಿನಗರ, ನೆಲಗದರನಹಳ್ಳಿ ಮುಂತಾದ ಕಡೆಗೆ ಹೋಗಲು ನೇರ ಸಂಪರ್ಕವಿದೆ. ಸಂಜೆ ಏಳು ಗಂಟೆಯ ವರೆಗೆ ಮಾತ್ರ ಅವಕಾಶ' ಎಂದು ಕಾವಲುಗಾರರೊಬ್ಬರು ತಿಳಿಸಿದರು.

ವಿದ್ಯಾರ್ಥಿಗಳಿಂದ ರೂಸ್ಟರ್ ಸ್ಕೂಟರ್ ಅಭಿವೃದ್ಧಿ



ಪ್ರೆಸಿಡೆನ್ಸಿ ವಿ.ವಿ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿರುವ ರೂಸ್ಟರ್ ಸ್ಕೂಟರ್

ಬೆಂಗಳೂರು: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ತಂಡ ಎಲೆಕ್ಟ್ರಿಕ್ ರೂಸ್ಟರ್ ಸ್ಕೂಟರ್ ಅಭಿವೃದ್ಧಿಪಡಿಸಿದ್ದಾರೆ. ಇದು ನಗರದ ಸಂಚಾರ ದಟ್ಟಣೆ ನಿವಾರಿಸಲು ಸಹಕಾರಿಯಾಗಲಿದೆ ಎಂದು ವಿದ್ಯಾರ್ಥಿಗಳು ಪ್ರತಿಪಾದಿಸಿದ್ದಾರೆ.

ತಂಡದ ಸದಸ್ಯ ಸಮೃದ್ಧ್ ಡಿ ಯಶ್ ಮಾತನಾಡಿ, 'ಈ ಸ್ಕೂಟರ್ ಸಂಚಾರ ದಟ್ಟಣೆಯನ್ನು ನಿವಾರಿಸುತ್ತದೆ. ಪರಿಸರ ಸ್ನೇಹಿಯಾಗಿದ್ದು, ಟೆಕ್ ಪಾರ್ಕ್‌ಗಳು, ವಿವಿಗಳಲ್ಲಿ ಸಂಚರಿಸಲು ಅನುಕೂಲವಾಗಲಿದೆ. ಇದು ವಿಶಿಷ್ಟ ವಿನ್ಯಾಸ ಮತ್ತು ಬ್ರೇಕಿಂಗ್ ವ್ಯವಸ್ಥೆ ಹೊಂದಿದ್ದು, ಸವಾರರು ಸುಗಮ, ಸುರಕ್ಷಿತವಾಗಿ ಪ್ರಯಾಣ ಮಾಡಬಹುದು' ಎಂದರು.

ಸಮೃದ್ಧ ಡಿ. ಯಶ್, ಕುನಾಲ್ ಜಿ. ಅತಿಕಾರಿ, ಮೊಹಮ್ಮದ್ ಝೈನ್ ಆದಿತ್ಯ ಆರ್., ಸುಕರ್ಣ ಈ ಸ್ಕೂಟರ್ ಅಭಿವೃದ್ಧಿಪಡಿಸಿದ್ದಾರೆ.

ಅಘೋಷಿತ ತುರ್ತು ಪರಿಸ್ಥಿತಿ: ಹಿರೇಮಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಇಂದು ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಕಳವಳ ವ್ಯಕ್ತಪಡಿಸಿದರು.

ಸಮಾಜಮುಖಿ ಪ್ರಕಾಶನ ಭಾನುವಾರ ಆಯೋಜಿಸಿದ್ದ ಚಂದ್ರಕಾಂತ ವಡ್ಡು ಅವರ 'ಸಮಕಾಲೀನ' ಅಂಕಣ ಬರಹಗಳ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಬಿಜೆಪಿ ಸರ್ಕಾರ ಧರ್ಮಗಳ ಮಧ್ಯೆ ವಿಷದ ಬೀಜವನ್ನು ಬಿತ್ತುವ ಅಪಾಯಕಾರಿ ಕೆಲಸ ಮಾಡುತ್ತಿದೆ. 2023ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿದಂತೆಯೇ 2024ರ ಲೋಕಸಭೆ ಚುನಾವಣೆಯಲ್ಲೂ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಯನ್ನು ಸೋಲಿಸಬೇಕು. ಇದಕ್ಕೆ ಸುಧೀರ್ಘವಾದ ಸಾಂಸ್ಕೃತಿಕ ಹೋರಾಟವನ್ನು ಮಾಡಬೇಕು' ಎಂದು ಅವರು ಹೇಳಿದರು.

'ಸಮಕಾಲೀನ ರಾಜಕಾರಣದ' ಬಗ್ಗೆ ಮಾತನಾಡಿದ ಅಜೀಂ ಪ್ರೇಮ್ ಜೀ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎ. ನಾರಾಯಣ್, 'ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಧರ್ಮ ಆಧಾರಿತ ರಾಷ್ಟ್ರ ನಿರ್ಮಿಸುವ ಕೆಲವರ ಪ್ರಯತ್ನಕ್ಕೆ ಇಂದು ಫಲ ಸಿಗುತ್ತಿದೆ. 1950ರಲ್ಲಿ ಧರ್ಮ ಆಧಾರಿತ ರಾಷ್ಟ್ರೀಯತೆಯನ್ನು ತಿರಸ್ಕರಿಸಿದ್ದ ಇಲ್ಲಿನ ಶೇ 99ರಷ್ಟು ಜನ ಇಂದು ಅದನ್ನು ಸ್ವೀಕರಿಸುತ್ತಿದ್ದಾರೆ. ವಿವಿಧತೆಯಿಂದ ಕೂಡಿರುವ ನಮ್ಮ ದೇಶದಲ್ಲಿ ಒಂದು ಸಿದ್ಧಾಂತದ ಕೆಳಗೆ, ಒಂದು ವರ್ಗ ಅಥವಾ ಸಂಪ್ರದಾಯ, ನಂಬಿಕೆಗಳ ಅನುಗುಣವಾಗಿ ದೇಶ ನಿರ್ಮಿಸುವುದಕ್ಕೆ ಸಾಧ್ಯವಿಲ್ಲ' ಎಂದು ತಿಳಿಸಿದರು.

'ಒಂದು ದೇಶ ಒಂದು ಚುನಾವಣೆ ಹೆಸರಿನಲ್ಲಿ ರಾಜ್ಯಗಳ ಅಸ್ತಿತ್ವ ಮತ್ತು ಪ್ರಾತಿನಿಧ್ಯವನ್ನು ದಮನಗೊಳಿಸಲಾಗುತ್ತಿದೆ' ಎಂದರು

ಪತ್ರಕರ್ತ ಬಿ.ಎಂ. ಹನೀಫ್ ಅವರು 'ಸಮಕಾಲೀನ ಮಾಧ್ಯಮ'ದ ಕುರಿತು ಮಾತನಾಡಿದರು. ತುಮಕೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಗೀತಾ ವಸಂತ ಪುಸ್ತಕ ಪರಿಚಯಿಸಿದರು. ಪತ್ರಕರ್ತ ಯತಿರಾಜ್ ಬ್ಯಾಲಹಳ್ಳಿ ಅಧ್ಯಕ್ಷತೆ ವಹಿಸಿದ್ದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕರಾದ ರವೀಂದ್ರ ಭಟ್ಟ ಇದ್ದರು.



ಚಂದ್ರಕಾಂತ ವಡ್ಡು ಅವರ 'ಸಮಕಾಲೀನ' ಪುಸ್ತಕವನ್ನು ಸಾಮಾಜಿಕ ಹೋರಾಟಗಾರ ಎಸ್‌.ಆರ್‌. ಹಿರೇಮಠ ಭಾನುವಾರ ಬಿಡುಗಡೆಗೊಳಿಸಿದರು. (ಎಡದಿಂದ) ತುಮಕೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಗೀತಾ ವಸಂತ್, ಪತ್ರಕರ್ತರಾದ ಯತಿರಾಜ್ ಬ್ಯಾಲಹಳ್ಳಿ, ಬಿ.ಎಂ. ಹನೀಫ್, ಪ್ರಾಧ್ಯಾಪಕ ಎ. ನಾರಾಯಣ್ ಲೇಖಕ ಚಂದ್ರಕಾಂತ್ ವಡ್ಡು ಇದ್ದಾರೆ —ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ:	'ಸಮಕಾಲೀನ' ಅಂಕಣ ಬರಹಗಳ ಸಂಕಲನ
ಲೇಖಕರು:	ಚಂದ್ರಕಾಂತ ವಡ್ಡು
ಪ್ರಕಾಶನ:	ಸಮಾಜಮುಖಿ ಪ್ರಕಾಶನ
ಬೆಲೆ:	₹120
ಪುಟ ಸಂಖ್ಯೆ:	119

ಮಕ್ಕಳ ಮೇಲೆ ಹಲ್ಲೆ ಮಾಡಿದ ತಾಯಿ–ಪ್ರಿಯಕರನಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ಮಕ್ಕಳಿಗೆ ಕಿರುಕುಳ ನೀಡಿ ಹಲ್ಲೆ ಮಾಡಿದ್ದ ತಾಯಿ ಹಾಗೂ ಆಕೆಯ ಪ್ರಿಯಕರನಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ರಾಜರಾಜೇಶ್ವರಿನಗರ ಠಾಣೆಯಲ್ಲಿ 2021ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'ಆಸ್ಪತ್ರೆಯೊಂದರಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದ ಮಹಿಳೆ, ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಅವರ ಪತಿ ಅಪರಾಧ ಪ್ರಕರಣವೊಂದರಲ್ಲಿ ಹಾಸನ ಜೈಲಿನಲ್ಲಿದ್ದರು. ಪರ ಪುರುಷನ ಜೊತೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದ ಮಹಿಳೆ, ಆತನ ಜೊತೆ ಸಹಜೀವನ ನಡೆಸುತ್ತಿದ್ದರು. ಈ ಸಂಗತಿ ಜೈಲಿನಲ್ಲಿದ್ದ ಪತಿಗೆ ಗೊತ್ತಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಾಯಿ ಹಾಗೂ ಪ್ರಿಯಕರ ವಾಸವಿದ್ದ ಮನೆಯಲ್ಲೇ ಮಕ್ಕಳಿಬ್ಬರು ನೆಲೆಸಿದ್ದರು. ಹಾಸನದ ಜೈಲಿನಲ್ಲಿದ್ದ ತಂದೆಯನ್ನು ನೋಡಲು ಮಕ್ಕಳು ಆಗಾಗ ತಾಯಿ ಜೊತೆ ಹೋಗಿ ಬರುತ್ತಿದ್ದರು. ತಾಯಿ ಹಾಗೂ ಪ್ರಿಯಕರನ ನಡುವಿನ ಸಂಗತಿಯನ್ನು ಮಕ್ಕಳು ತಂದೆಗೆ ಹೇಳುತ್ತಿದ್ದರು. ಇದರಿಂದ ತಾಯಿಗೆ ಕೋಪ ಬಂದಿತ್ತು.' ಎಂದು ಮೂಲಗಳು ತಿಳಿಸಿವೆ.

'ಮಕ್ಕಳು ಮನೆಗೆ ವಾಪಸು ಬರುತ್ತಿದ್ದಂತೆ ಅವರ ಮೇಲೆ ತಾಯಿ ಹಾಗೂ ಪ್ರಿಯಕರ ಹಲ್ಲೆ ಮಾಡಿದ್ದರು. ಮನೆಯ ವಿಷಯಗಳನ್ನು ತಂದೆ ಬಳಿ ಹೇಳದಂತೆ ತಾಕೀತು ಮಾಡಿ, ಮಕ್ಕಳ ಮೈ ಸುಟ್ಟಿದ್ದರು. ಮಕ್ಕಳ ಮೇಲಿನ ಹಲ್ಲೆಯನ್ನು ಗಮನಿಸಿದ್ದ ನೆರೆಮನೆಯವರು ಠಾಣೆಗೆ ಮಾಹಿತಿ ನೀಡಿದ್ದರು.'

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಹಾಗೂ ಬಾಲ ನ್ಯಾಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತಾಯಿ ಹಾಗೂ ಆಕೆಯ ಪ್ರಿಯಕರನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

ಲೋಕಸಭಾ ಚುನಾವಣೆಗೆ ತಯಾರಿ ಆರಂಭಿಸಿದ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ

‘ನಿಗಮ, ಮಂಡಳಿಗೆ ಶಾಸಕರು ಬೇಡ’

ಪ್ರಜಾವಾಣಿ ವಾರ್ತೆ



ಕಾಂಗ್ರೆಸ್ ಪ್ರಚಾರ ಸಮಿತಿಗಳ ಪದಾಧಿಕಾರಿಗಳ ಸಭೆಯಲ್ಲಿ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್, ಅಧ್ಯಕ್ಷ ಎಂ.ಬಿ. ಪಾಟೀಲ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಮಾಜಿ ಸಚಿವ ಕಿಮ್ಮನೆ ರತ್ನಾಕರ್, ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್ ಇದ್ದರು

ಬೆಂಗಳೂರು: ‘ಶಾಸಕರನ್ನು ನಿಗಮ-ಮಂಡಳಿಗೆ ನೇಮಕ ಮಾಡಬಾರದು’ ಎಂದು ರಾಜ್ಯ ಮತ್ತು ಜಿಲ್ಲಾಮಟ್ಟದ ಕಾಂಗ್ರೆಸ್ ಪ್ರಚಾರ ಸಮಿತಿಗಳ ಪದಾಧಿಕಾರಿಗಳ ಸಭೆಯಲ್ಲಿ ಒಕ್ಕೊರಲಿನ ಆಗ್ರಹ ವ್ಯಕ್ತವಾಗಿದೆ.

ಕೆಪಿಸಿಸಿ ಕಚೇರಿಯ ‘ಭಾರತ್ ಜೋಡೊ’ ಸಭಾಂಗಣದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ನೇತೃತ್ವದಲ್ಲಿ ಭಾನುವಾರ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್, ‘ಎಲ್ಲರಿಗೂ ಅವಕಾಶ ಕಲ್ಪಿಸಲು ನಿಗಮ ಮಂಡಳಿ, ಸಮಿತಿಗಳಿಗೆ ಎರಡೂವರೆ ವರ್ಷದಂತೆ ನೇಮಕ ಮಾಡಬೇಕು. ಕಾರ್ಯಕರ್ತರಿಗೆ, ಮುಖಂಡರಿಗೆ ಅವಕಾಶ ನೀಡಬೇಕು. ಅಲ್ಪಸಂಖ್ಯಾತ-ರಿಗೆ, ಮಹಿಳೆಯರಿಗೆ, ಹಿಂದುಳಿದವರಿಗೆ ಹೆಚ್ಚಿನ ಅವಕಾಶ ನೀಡಬೇಕು. ಒಮ್ಮೆ ಸಚಿವ ಸ್ಥಾನ ಪಡೆದವರು ಅದಕ್ಕಿಂತ ಕೆಳಗಿನ ಸ್ಥಾನ ಪಡೆಯಬಾರದು. ಮಾಜಿ ಸಚಿವರು ನಿಗಮ ಮಂಡಳಿಗಳ ಸ್ಥಾನ ತೆಗೆದುಕೊಳ್ಳಬಾರದು. ಸಚಿವರನ್ನು ಶಾಸಕರು ದೂರಿದಂತೆ, ಶಾಸಕರನ್ನು ಕಾರ್ಯಕರ್ತರು ದೂರುತ್ತಿದ್ದಾರೆ. ರಾಜ್ಯಮಟ್ಟದಲ್ಲಿ ಸಣ್ಣ ಸಮಿತಿ ಮಾಡಿದರೆ ಒಳಿತು’ ಎಂದು ಸಲಹೆ ನೀಡಿದರು.

‘ಮಹಾ ಮೈತ್ರಿಕೂಟ ‘ಇಂಡಿಯಾ’ದ ತೀರ್ಮಾನ ಏನೇ ಇದ್ದರೂ ರಾಜ್ಯದ ಎಲ್ಲ 28 ಲೋಕಸಭೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಬೇಕು. ಶಾಸಕರಿಗೆ ಪದಾಧಿಕಾರಿಗಳ ಹುದ್ದೆ ಬೇಡ. ಅವರನ್ನು ಮಾರ್ಗದರ್ಶಕರನ್ನಾಗಿ ಮಾಡಬೇಕು. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಜನಸಂಪರ್ಕ ಪಾದಯಾತ್ರೆ ಹಮ್ಮಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಐದು ಗ್ಯಾರಂಟಿಗಳ ಫಲಾನುಭವಿಗಳ ಸಮಾವೇಶ ಮಾಡಬೇಕು. ಫಲಾನುಭವಿ-ಗಳಿಗೆ ಮುಖ್ಯಮಂತ್ರಿ ಪತ್ರ ಬರೆಯಬೇಕು. ಗ್ರಾಮ ಪಂಚಾಯಿತಿಗಳು, ತಾಲ್ಲೂಕು-ಮಟ್ಟದಲ್ಲಿ ಗ್ಯಾರಂಟಿಗಳ ಬಗ್ಗೆ ಪ್ರಚಾರ ನಡೆಸಬೇಕು’ ಎಂದೂ ಹೇಳಿದರು.

ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಕೆಲವು ಜಿಲ್ಲಾ ಪದಾಧಿಕಾರಿಗಳು ಹಾಗೂ ಮುಖಂಡರು, ‘25 ವರ್ಷಗಳಿಂದ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇವೆ. ಕಳೆದ ಅಧಿಕಾರಾವಧಿಯಲ್ಲಿ ಎರಡು ವರ್ಷ ನೇಮಕಾತಿ ತಡವಾಗಿದೆ. ಈ ಬಾರಿ ತಕ್ಷಣ ನೇಮಕಾತಿ ಮಾಡಿ, ಕಾರ್ಯಕರ್ತರಿಗೆ ಅವಕಾಶ ನೀಡಬೇಕು’ ಎಂದರು.

‘ಹೊರಗಿನಿಂದ ಬಂದ ಕೆಲವರು ಟಿಕೆಟ್ ಪಡೆದು ಬಳಿಕ ಅಧಿಕಾರವನ್ನೂ ಪಡೆಯುತ್ತಾರೆ. ಮತ್ತೆ ಮುಂದಿನ ಚುನಾವಣೆಗೆ ಮತ್ತೊಂದು ಪಕ್ಷಕ್ಕೆ ಹೋಗುತ್ತಾರೆ. ಪಕ್ಷದ ಕಾರ್ಯಕರ್ತರಿಗೆ ಇದರಿಂದ ನೋವಿದೆ. ಮುಂಬರುವ ಲೋಕಸಭೆ ಚುನಾವಣೆ ಘೋಷಣೆಗೆ ಮೊದಲೇ ಅಭ್ಯರ್ಥಿ ಘೋಷಣೆ ಮಾಡಿದರೆ ಉತ್ತಮ’ ಎಂದು ಅವರು ಸಲಹೆ ನೀಡಿದರು.

ಹಳೆ ಮೈಸೂರು ಭಾಗದ ಮುಖಂಡರೊಬ್ಬರು, ‘ಶಾಸಕ ಪುಟ್ಟರಂಗಶೆಟ್ಟಿ ಮಂತ್ರಿಯೂ ಆಗುತ್ತೇನೆ. ನಿಗಮ ಮಂಡಳಿ ಅಧ್ಯಕ್ಷನೂ ಆಗುತ್ತೇನೆ ಎನ್ನುತ್ತಿದ್ದಾರೆ. ಆ ರೀತಿ ಆಗಬಾರದು’ ಎಂದು ಅಸಮಾಧಾನ ಹೊರಹಾಕಿದರು.

‘ಯುವಕರು ಯುವನಿಧಿ ಗ್ಯಾರಂಟಿ ನೋಡಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಹೀಗಾಗಿ, 2022-23ರ ಬದಲಿಗೆ 2019-20ಗೆ ಅನ್ವಯ ಆಗುವಂತೆ ಯುವನಿಧಿ ಜಾರಿಗೊಳಿಸಬೇಕು’ ಎಂದು ಮಧ್ಯ ಕರ್ನಾಟಕದ ಕಾರ್ಯಕರ್ತರೊಬ್ಬರು ಮನವಿ ಮಾಡಿದರು.

ಹಾಸನ ಭಾಗದ ಮುಖಂಡರು, ‘ಕಾರ್ಯಕರ್ತರನ್ನು ಗುರುತಿಸಿದರೆ ಪಕ್ಷ ಬಲವಾಗಿರುತ್ತದೆ. ಸೋತವರಿಗೆ ನಿಗಮ ಮಂಡಳಿಗಳಲ್ಲಿ ಅವಕಾಶ ಕೊಡಬೇಡಿ’ ಎಂದರು. ‘ಅರಸೀಕೆರೆ ಶಾಸಕ ಶಿವಲಿಂಗೇಗೌಡರು ಯಾರ ಮಾತನ್ನೂ ಕೇಳುತ್ತಿಲ್ಲ. ಕಾರ್ಯಕರ್ತರ ಸಂಪರ್ಕಕ್ಕೂ ಸಿಗುತ್ತಿಲ್ಲ. ಇದರಿಂದ ಪಕ್ಷದಿಂದ ಕಾರ್ಯಕರ್ತರು ವಿಮುಖವಾಗುವ ಸಾಧ್ಯತೆಯಿದೆ’ ಎಂದು ಅಸಮಾಧಾನ ಹೊರಹಾಕಿದರು.

‘ಪ್ರಚಾರ ಸಮಿತಿ ಚಟುವಟಿಕೆ ವಿಸ್ತರಣೆ’

‘ಕೆಪಿಸಿಸಿ ಪ್ರಚಾರ ಸಮಿತಿಯ ಸದ್ಯದ ಕಾರ್ಯಚಟುವಟಿಕೆ ಸಮಾಧಾನಕರವಾ-ಗಿಲ್ಲ. ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಇದನ್ನು ವಿಸ್ತರಿಸಿ ಸಕ್ರಿ-ಯಗೊಳಿಸಲಾಗುವುದು. ಎಐಸಿಸಿ ಮತ್ತು ಕೆಪಿಸಿಸಿ ಅಧ್ಯಕ್ಷರ ಜೊತೆ ಈ ಕುರಿತು ಚರ್ಚಿಸಲಾಗುವುದು’ ಎಂದು ಎಂ.ಬಿ. ಪಾಟೀಲ ತಿಳಿಸಿದರು.

‘ಕಳೆದ 75 ವರ್ಷಗಳಲ್ಲಿ ಭಾರತವನ್ನು ಕಟ್ಟಿದ್ದು ಕಾಂಗ್ರೆಸ್ ಪಕ್ಷವೇ ಹೊರತು ಒಂಬತ್ತು ವರ್ಷಗಳಿಂದ ಪ್ರಧಾನಿಯಾಗಿರುವ ನರೇಂದ್ರ ಮೋದಿ ಅಲ್ಲ’ ಎಂದ ಅವರು, ‘ಬುದ್ಧ, ಬಸವಣ್ಣ, ಅಂಬೇಡ್ಕರ್, ನಾರಾಯಣ ಗುರು, ಕುವೆಂಪು ಸಿದ್ಧಾಂತಗಳೇ ಕಾಂಗ್ರೆಸ್ಸಿನ ಸಿದ್ಧಾಂತ. ನಮ್ಮ ಸಾಧನೆ ಮತ್ತು ಮೋದಿಯವರ ವೈಫಲ್ಯಗಳನ್ನು ಜನರಿಗೆ ಸರಳವಾಗಿ ವಿವರಿಸುವ ಕರಪತ್ರಗಳನ್ನು ಶೀಘ್ರ ಹೊರತರಲಾಗುವುದು’ ಎಂದರು.


‘ಪ್ರತಿಯೊಬ್ಬರ ಮನೆ ಬಾಗಿಲಿಗೂ ‘ಗ್ಯಾರಂಟಿ’ ಯೋಜನೆಗಳನ್ನು ತಲುಪಿಸಬೇಕು. ಇವುಗಳ ಬಲದ ಮೇಲೆ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಬೇಕು’ ಎಂದರು.

ಸುದ್ದಿ 2 ನಿಮಿಷ

‘ಇಂಡಿಯಾ’ದ ನಾಯಕ ಯಾರು: ಎಚ್‌.ಡಿ. ದೇವೇಗೌಡ ಪ್ರಶ್ನೆ

ಹಾಸನ: ‘ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ‘ಇಂಡಿಯಾ’ ಒಕ್ಕೂಟವನ್ನು ಮಾಡಿದ್ದಾರೆ. ಅದರ ನಾಯಕ ಯಾರು? ಪ್ರಧಾನಿ ಅಭ್ಯರ್ಥಿ ಹೆಸರು ಪ್ರಕಟಿಸಿದ್ದಾರಾ? ಒಕ್ಕೂಟದ ಸಂಚಾಲಕರು ಯಾರು ಎಂದು ಹೇಳಿದ್ದಾರಾ? ‘ಇಂಡಿಯಾ’ ಒಕ್ಕೂಟಕ್ಕೆ ಸಾಮಾನ್ಯ ಕಾರ್ಯಕ್ರಮಗಳು ಬೇಕು’ ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಆಗ್ರಹಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಂಬೈನಲ್ಲಿ ಎರಡು ದಿನ ಸಭೆ ನಡೆಸಲಾಗಿದೆ. ಇನ್ನೂ ಚುನಾವಣೆಗೆ ಏಳೆಂಟು ತಿಂಗಳಿದೆ. ನೋಡೋಣ ಬನ್ನಿ ನಾನು ಬದುಕಿದ್ದೀನಿ’ ಎಂದು ಹೇಳಿ ಅಸಮಾಧಾನ ಹೊರ ಹಾಕಿದರು.



‘ಲೋಕಸಭೆಗೆ ಅವಧಿಪೂರ್ವ ಚುನಾವಣೆ ನಡೆಸಲು ಬಿಜೆಪಿ ಯೋಜನೆ ರೂಪಿಸುತ್ತಿದೆ’ ಎಂಬ ಮಮತಾ ಬ್ಯಾನರ್ಜಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಮುಂಬೈನಲ್ಲಿ 28 ಸದಸ್ಯರ ಗುಂಪಿನ ದೊಡ್ಡ ಮಹಾಸಭೆ ನಡೆಯಿತು. ಸೆಪ್ಟೆಂಬರ್ 30ರೊಳಗೆ ಎಲ್ಲ ಸ್ಥಾನಗಳ ಹಂಚಿಕೆ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ. ಏನಾಗುತ್ತದೆಯೋ ನೋಡೋಣ’ ಎಂದರು.

‘ದೇಶದಲ್ಲಿ ಇವತ್ತಿನ ಅಸ್ಥಿರತೆಗೆ ‘ಇಂಡಿಯಾ’ ಒಕ್ಕೂಟ ಹೊಸ ಪರ್ಯಾಯ ವ್ಯವಸ್ಥೆ ಮಾಡಲಿದೆ ಎಂದು ಹೇಳುತ್ತಿದ್ದಾರೆ. ಸ್ಥಿರ ಸರ್ಕಾರ ಕೊಡಲು ಐಕ್ಯತೆಯಿಂದ ಹೋರಾಡುತ್ತೇವೆ ಎಂದಿದ್ದು, ಇದು ಯಶಸ್ವಿಯಾದರೆ ಸಂತೋಷ’ ಎಂದು ಅವರು ಹೇಳಿದರು.

ಸಂತ್ರಸ್ತರ ನೆರವಿಗೆ ವಕೀಲರ ತಂಡ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುವವರ ವಿರುದ್ಧ ಸರ್ಕಾರ ಮೊಕದ್ದಮೆ ದಾಖಲಿಸುತ್ತಿ-ರುವ ಕಾರಣ, ಸಂತ್ರಸ್ತರಿಗೆ ಪರಿಹಾರ ಒದಗಿಸಲು ರಾಜ್ಯ ಮಟ್ಟದ ವಕೀಲರ ತಂಡವನ್ನು ಬಿಜೆಪಿ ರಚಿಸಿದೆ.

ಬಿಜೆಪಿ ರಾಜ್ಯ ಕಾರ್ಯದರ್ಶಿ ಕೇಶವ್ ಪ್ರಸಾದ್ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆ. ಕಳೆದ 100 ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರವನ್ನು ಟೀಕಿಸುವವರು ಮತ್ತು ಮಾಧ್ಯಮಗಳ ಪ್ರತಿನಿಧಿಗಳ ವಿರುದ್ಧ ಪ್ರಕರಣ ದಾಖಲಿಸುವ ಮೂಲಕ ಬೆದರಿಸುವ ಕೆಲಸ ಮಾಡುತ್ತಿದೆ. ಇದು ಖಂಡನೀಯ ಎಂದು ಅವರು ಹೇಳಿದ್ದಾರೆ.

ರಾಜ್ಯ ಮಟ್ಟದ ವಕೀಲರ ತಂಡ ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂಬುದರ ಬಗ್ಗೆ ಭಾನುವಾರ ನಡೆದ ಸಭೆಯಲ್ಲಿ ಚರ್ಚಿಸಲಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	99.46	4,214	6,231
ಹಾರಂಗಿ	2,859	2,855.29	404	1,700
ಕಬಿನಿ	2284.00	2,273.74	855	1,000
ಹೇಮಾವತಿ	2,922	2,905.68	774	5,800
ಲಿಂಗನಮಕ್ಕಿ	1,819	1,784.60	1,149	5,465
ಸೂಪಾ (ಮೀ)	564	545.50	1,224	3,981
ಮಾಣಿ	595	579.30	311	817
ತುಂಗಭದ್ರಾ	1,633	1,624.39	1,450	10,158
ಮಲಪ್ರಭಾ	2079.50	2,066.15	00	1,194
ಘಟಪ್ರಭಾ	2175	2,162.58	750	186
ಭದ್ರಾ	186	163.6	388	3,224
ಆಲಮಟ್ಟ (ಮೀ)	519.60	519.56	5,725	3,689
ನಾರಾಯಣಪುರ (ಮೀ)	492.25	489.02	2,759	10,098

* ನೆಲಮಟ್ಟದಿಂದ

‘ಆಪರೇಷನ್ ಕಮಲದಿಂದ ಬಿಜೆಪಿ ಬೀದಿಗೆ’

ಹುಬ್ಬಳ್ಳಿ: ‘ಜನ ವಿರೋಧಿ ನೀತಿ ಅನುಸರಿಸಿದ ಕಾರಣ ರಾಜ್ಯದಲ್ಲಿ ಬಿಜೆಪಿ ಒಂದು ಬಾರಿಯೂ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ. ಆಪರೇಷನ್ ಕಮಲ ಮಾಡಿಯೇ ಬಿಜೆಪಿ ಬೀದಿಗೆ ಬಂದಿದೆ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಟೀಕಿಸಿದರು.

‘2008 ಮತ್ತು 2019ರಲ್ಲಿ ಬಿಜೆಪಿ ಹಿಂಬಾಗಿಲಿನಿಂದ ಅಧಿಕಾರ ಹಿಡಿಯಿತು. ಈಗ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗದ ಸ್ಥಿತಿಗೆ ಬಂದಿದೆ. ಹೀಗಾಗಿ ಬಿಜೆಪಿಗೆ ಕಾಂಗ್ರೆಸ್‌ನ ಯಾವ ನಾಯಕರೂ ಹೋಗುವುದಿಲ್ಲ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆ ಅಡಿ ₹34 ಸಾವಿರ ಕೋಟಿ ನೀಡಲಾಗಿದ್ದು, ಇದನ್ನು ಗ್ಯಾರಂಟಿ ಸೇರಿದಂತೆ ಬೇರೆ ಯಾವುದೇ ಯೋಜನೆಗಳಿಗೆ ಬಳಕೆ ಮಾಡಲು ಸಾಧ್ಯವಿಲ್ಲ’ ಎಂದರು.

ಆಪರೇಷನ್ ಕನಸು: ‘ರಾಜ್ಯದಲ್ಲಿ ಹಲವು ಬಿಜೆಪಿ ನಾಯಕರು ಕಾಂಗ್ರೆಸ್ ಸೇರಲು ಮುಂದಾಗಿರುವುದು ಜಗಜ್ಜಾಹೀರಾಗಿದ್ದರೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯ ದರ್ಶಿ ಬಿ.ಎಲ್.ಸಂತೋಷ್ ‘ಆಪರೇಷನ್’ ಮಾಡುವ ಕನಸು ಕಾಣುತ್ತಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ವ್ಯಂಗ್ಯವಾಡಿದರು.

ಬಿಜೆಪಿ ಮೇಲಿನ ಅತೃಪ್ತಿ ಹೊರಹಾಕಿದ ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್

‘ಲಿಂಗಾಯತ ನಾಯಕರ ತುಳಿಯಲಾಗುತ್ತಿದೆ’

ಪ್ರಜಾವಾಣಿ ವಾರ್ತೆ



ಪ್ರದೀಪ ಶೆಟ್ಟರ್

ಹುಬ್ಬಳ್ಳಿ: ‘ಬಿಜೆಪಿಯಲ್ಲಿ ಲಿಂಗಾಯತ ಸಮುದಾಯದ ಮುಂಚೂಣಿ ನಾಯಕರ ಸಂಖ್ಯೆ ಕ್ಷೀಣಿಸಿದೆ. ಪಕ್ಷದಲ್ಲಿ ಸದ್ಯಕ್ಕೆ ಉಳಿದಿರುವ ಲಿಂಗಾಯತ ಸಮುದಾಯದ ನಾಯಕರನ್ನು ತುಳಿಯಲಾಗುತ್ತಿದೆ. ಇದೇ ಕಾರಣಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯದವರು ಪಕ್ಷಕ್ಕೆ ಪಾಠ ಕಲಿಸಿದ್ದಾರೆ. ಇಂತಹುದೇ ಪರಿಸ್ಥಿತಿ ಮುಂದುವರಿದರೆ ಪರಿಸ್ಥಿತಿ ಹದಗೆಡುತ್ತದೆ’ ಎಂದು ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಹೇಳಿದರು.

ನಗರದಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ ಸನ್ಮಾನ ಕಾರ್ಯಕ್ರಮಕ್ಕೆ ಉದ್ದೇಶಪೂರ್ವಕ-ವಾಗಿ ನನ್ನನ್ನು ಆಹ್ವಾನಿಸಿಲ್ಲ. ಇನ್ನೂ ಹಲವು ಕಾರ್ಯಕ್ರಮಗಳಿಗೆ ನನ್ನನ್ನು ಕರೆದಿಲ್ಲ. ಪಕ್ಷದಲ್ಲಿ ಹೇಳುವವರು, ಕೇಳುವವರು ಇಲ್ಲದಂತಾಗಿದೆ. ನಾಯಕತ್ವದ ಕೊರತೆಯಿಂದ ಹೀಗಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲು ವೀರಶೈವ ಲಿಂಗಾಯತರಿಗೆ ಮಹತ್ವ, ನಾಯಕತ್ವ ನೀಡಬೇಕು. ಉಸ್ತುವಾರಿಗಳನ್ನು ಬದಲಿಸಿ, ಅತೃಪ್ತರ ಮನವೊಲಿಸಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯದ ಕೆಲವರಿಗೆ ಟಿಕೆಟ್ ಕೊಡಲಿಲ್ಲ. ಕೆಲವರಿಗೆ ಕಾಡಿಸಿದರು. ಈ ವಿಚಾರದಲ್ಲಿ ಅಪಮಾನವಾಗಿದ್ದರಿಂದಲೇ ಜಗದೀಶ ಶೆಟ್ಟರ್ ಸೆಡ್ಡು ಹೊಡೆದು ನಿಂತರು. ಅದರ ಪರಿಣಾಮವನ್ನೂ ಪಕ್ಷ ಅನುಭ-ವಿಸಬೇಕಾಯಿತು’ ಎಂದು ಅವರು ಹೇಳಿದರು.

‘ಬಿಜೆಪಿ ಕೆಲವರ ಕಪಿಮುಷ್ಠಿಯ-ಲ್ಲಿದೆ ಎಂದು ಈಗೀಗ ಅನ್ನಿಸುತ್ತಿದೆ. ನಮ್ಮ ನಾಯಕರು ಎಚ್ಚೆತ್ತುಕೊಳ್ಳಬೇ-ಕು. ಬಕೆಟ್ ಹಿಡಿಯುವವರಿಗೆ, ಮನೆ ಕಾಯುವವರಿಗೆ ಟಿಕೆಟ್ ನೀಡುವುದು ಆಗಬಾರದು. ಪಕ್ಷನಿಷ್ಠರಿಗೆ ಮನ್ನಣೆ ನೀಡಬೇಕು’ ಎಂದ ಅವರು,‘ನಾನು ಬಿಜೆಪಿ ಬಿಟ್ಟುಹೋಗುವುದಿಲ್ಲ. ಪಕ್ಷದ ಸುಧಾರಣೆಗೆ ಶ್ರಮಿಸುತ್ತೇನೆ. ಮನ್ನಣೆ ನೀಡದಿದ್ದರೆ ರಾಷ್ಟ್ರೀಯ ನಾಯಕರ ಮೊರೆ ಹೋಗುತ್ತೇನೆ. ಮೋದಿ ಮೂರನೇ ಬಾರಿ ಪ್ರಧಾನಿಯಾಗಲು ದುಡಿಯುತ್ತೇನೆ’ ಎಂದು ಅವರು ಹೇಳಿದರು.

> **ಕಾಂಗ್ರೆಸ್‌ನ 40 ಶಾಸಕರು ಸಂಪರ್ಕದಲ್ಲಿದ್ದಾರೆ ಎನ್ನುವ ಬಿಜೆಪಿಯ ಬಿ.ಎಲ್. ಸಂತೋಷ್, 40 ಬೇಡ, ಕಡೆಪಕ್ಷ ನಾಲ್ವರು ಕಾಂಗ್ರೆಸ್ ಶಾಸಕರನ್ನು ಸೆಳೆದು ತೋರಿಸಲಿ**
> **ಶಿವರಾಜ್ ಎಸ್.ತಂಗಡಗಿ**
> ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಪ್ರದೀಪ ಶೆಟ್ಟರ್ ಹೇಳಿಕೆ: ಬಿಜೆಪಿ ತೀವ್ರ ಖಂಡನೆ

ಹುಬ್ಬಳ್ಳಿ: ಬಿಜೆಪಿಯಲ್ಲಿ ಲಿಂಗಾಯತ ಸಮುದಾಯದ ನಾಯಕರನ್ನು ಕಡೆಗಣಿಸಲಾಗುತ್ತಿದೆ ಎಂಬ ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಹೇಳಿಕೆಗೆ ಪಕ್ಷದ ಮುಖಂಡರಿಂದ ತೀವ್ರ ಖಂಡನೆ ವ್ಯಕ್ತವಾಗಿದೆ.

ಬಿಜೆಪಿ ಧಾರವಾಡ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಎಸ್. ಕುಂದಗೋಳಮಠ, ‘ಬಿಜೆಪಿಯಿಂದ ಎರಡು ಬಾರಿ ವಿಧಾನ ಪರಿಷತ್ ಸದಸ್ಯ-ರಾಗಿರುವ ನಿಮ್ಮಿಂದ ಇಂತಹ ಹೇಳಿಕೆ ನಿರೀಕ್ಷಿಸಿರಲಿಲ್ಲ. ಪಕ್ಷ ಯಾವತ್ತೂ, ಯಾರನ್ನೂ ಕಡೆಗಣಿಸಿಲ್ಲ. ಕಾರ್ಯಕರ್ತರಿಂದ ಹಿಡಿದು ಕೇಂದ್ರ ನಾಯಕರೆಲ್ಲರೂ ಪಕ್ಷಕ್ಕೆ ಗಣ್ಯರೇ ಆಗಿದ್ದಾರೆ’ ಎಂದು ತಿರುಗೇಟು ನೀಡಿದ್ದಾರೆ.

‘ಧಾರವಾಡ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ 6 ಲಿಂಗಾಯತ ಅಭ್ಯರ್ಥಿಗಳಿಗೆ ಬಿಜೆಪಿ ಟಿಕೆಟ್ ನೀಡಿದ್ದು, ಚುನಾಯಿತರಾದ ಮೂವರು ಶಾಸಕರು ಲಿಂಗಾಯತರೇ ಆಗಿದ್ದಾರೆ. ಜಗದೀಶ ಶೆಟ್ಟರ್ ಅವರು 6 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು ಪಕ್ಷದ ಚಿಹ್ನೆಯಿಂದಲೇ ಹೊರತು, ವ್ಯಕ್ತಿಗತವಾಗಿ ಅಲ್ಲ’ ಎಂದು ತಿಳಿಸಿದ್ದಾರೆ.

‘ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಕೈತಪ್ಪಿದ್ದರಿಂದ ನಿಮ್ಮ ಕುಟುಂಬದವರು (ಜಗದೀಶ ಶೆಟ್ಟರ್) ಬೇರೆ ಪಕ್ಷಕ್ಕೆ ಹೋಗಿದ್ದಾರೆ. ಡಿ.ವಿ. ಸದಾನಂದಗೌಡ ಅವರನ್ನು ಹೊರತುಪಡಿಸಿ, ಪಕ್ಷದಿಂದ ಮುಖ್ಯಮಂತ್ರಿ ಆದವರೆಲ್ಲರೂ ಲಿಂಗಾಯತ ಸಮುದಾಯದವರು’ ಎಂದು ಸ್ಪಷ್ಟಪಡಿಸಿದ್ದಾರೆ.

‘ಈಚೆಗೆ ನಡೆದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸನ್ಮಾನ ಸಮಾರಂಭಕ್ಕೆ ತಮಗೆ ಆಹ್ವಾನ ನೀಡುವುದನ್ನು ನಾನು ಮರೆತಿರಬಹುದು. ಇದಕ್ಕೆ ಕಾರ್ಯದೊತ್ತಡ ಕಾರಣವೇ ಹೊರತು, ಬೇರಾವ ದುರುದ್ದೇಶವಿಲ್ಲ. ಈ ವಿಷಯವಾಗಿ ಕ್ಷಮೆ ಕೇಳಿದ್ದೇನೆ. ಬಹಿರಂಗವಾಗಿ ಕ್ಷಮೆ ಕೇಳಲೂ ಸಿದ್ಧನಿದ್ದೇನೆ’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್‌ನಲ್ಲಿ ಲಿಂಗಾಯತರು ದ್ವಿತೀಯ ದರ್ಜೆ ನಾಯಕರು’



ಗೋವಿಂದ ಕಾರಜೋಳ

ವಿಜಯಪುರ: ‘ಕಾಂಗ್ರೆಸ್‌ನಲ್ಲಿ ಲಿಂಗಾಯತರಿಗೆ ಮತ್ತು ದಲಿತರಿಗೆ ಯಾವುದೇ ಸ್ಥಾನ ಇಲ್ಲ. ಕಾಂಗ್ರೆಸ್‌ನಲ್ಲಿ ಲಿಂಗಾಯತರು ಎಂದಿಗೂ ದ್ವಿತೀಯ ದರ್ಜೆ ನಾಯಕರೇ’ ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಆರೋಪಿಸಿದರು.

‘ಇಂದಿರಾ ಗಾಂಧಿ ಕಾಲದಿಂದಲೂ ಲಿಂಗಾಯತರು ಕಾಂಗ್ರೆಸ್‌ನಲ್ಲಿ ಎರಡನೇ ದರ್ಜೆ ನಾಗರಿಕರಾಗಿದ್ದಾರೆ. ಮುಂದಿನ ಕುರ್ಚಿಗೆ ಎಂದಿಗೂ ಕರೆದಿಲ್ಲ. ಲಿಂಗಾಯತರಿಗೆ ಕಾಂಗ್ರೆಸ್‌ನಲ್ಲಿ ಗೌರವ ಸಾಧ್ಯವೇ ಇಲ್ಲ. ಬೇಕಿದ್ದರೆ ಬಸವರಾಜ ರಾಯರಡ್ಡಿ, ಬಿ.ಆರ್.ಪಾಟೀಲ, ಶಾಮನೂರು ಶಿವಶಂಕರಪ್ಪ ಅವರನ್ನೇ ಕೇಳಿ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಜಗದೀಶ ಶೆಟ್ಟರ್ ಸೇರಿದಂತೆ ಕೆಲ ಕಾಂಗ್ರೆಸ್ ಮುಖಂಡರು ‘ಬಿಜೆಪಿಯಲ್ಲಿ ಲಿಂಗಾಯತರನ್ನು ಕಡೆಗಣಿಸಲಾಗಿದೆ’ ಎಂದು ಸುಮ್ಮನೆ ಹೇಳಿಕೊಂಡು ಓಡಾಡುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ (ಯುಕೆಪಿ) ಬಜೆಟ್‌ನಲ್ಲಿ ಅನುದಾನ ನೀಡದೇ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಜಯಪುರ, ಬಾಗಲಕೋಟೆ ಅವಳಿ ಜಿಲ್ಲೆಯ ಜನತೆಗೆ ಮೋಸ ಮಾಡಿದ್ದಾರೆ. ರಾಜಕೀಯವಾಗಿ ಪುನರ್ ಜನ್ಮ ನೀಡಿದ ಜನರ ಋಣ ತೀರಿಸುವ ಕಾರ್ಯ ಅವರು ಮಾಡಬೇಕಿತ್ತು. ಆದರೆ, ದಾರಿ ತಪ್ಪಿಸುವ, ಮೋಸ ಮಾಡುವ ಕೆಲಸ ಮುಖ್ಯಮಂತ್ರಿ ಮಾಡಿದ್ದಾರೆ’ ಎಂದು ದೂರಿದ ಅವರು, ‘ಯುಕೆಪಿ ಮೂರನೇ ಹಂತಕ್ಕೆ ಈ ವರ್ಷ ₹10 ಸಾವಿರ ಕೋಟಿ ಅನುದಾನ ನೀಡಬೇಕು’ ಎಂದರು.

ಬರಪೀಡಿತ ತಾಲ್ಲೂಕು ಇಂದು ಘೋಷಣೆ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಕೋಲಾರ: ಬರ ಘೋಷಣೆ ಸಂಬಂಧ ಬೆಂಗಳೂರಿನಲ್ಲಿ ಸೋಮವಾರ ಸಚಿವ ಸಂಪುಟ ಉಪಸಮಿತಿ ಸಭೆ ನಡೆಯಲಿದ್ದು, ಬರಪೀಡಿತ ತಾಲ್ಲೂಕುಗಳ ಮೊದಲ ಪಟ್ಟಿ ಘೋಷಣೆ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಕನಿಷ್ಠ ಮೂರು ವಾರ ಶೇ 60ಕ್ಕಿಂತ ಹೆಚ್ಚಿನ ಪ್ರಮಾಣದ ಮಳೆ ಕೊರತೆ ಎದುರಿಸುತ್ತಿರುವ ರಾಜ್ಯದ 113 ತಾಲ್ಲೂಕುಗಳ ತಾತ್ಕಾಲಿಕ ಪಟ್ಟಿಯನ್ನು ಆಗಸ್ಟ್ 18ರಂದು ಸಿದ್ಧಪಡಿಸಲಾಗಿದೆ ಎಂದು ನಗರದಲ್ಲಿ ಭಾನುವಾರ ಅವರು ಸುದ್ದಿಗಾರರಿಗೆ ತಿಳಿಸಿದರು.

ಜಿಲ್ಲಾವಾರು ಬೆಳೆ ಸಮೀಕ್ಷೆ ವರದಿ ತರಿಸಿಕೊಂಡು ಬರಪೀಡಿತ ತಾಲ್ಲೂಕು ಪಟ್ಟಿಯನ್ನು ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಅಂತಿಮ-ಗೊಳಿಸಲಾಗುವುದು. ಅಗತ್ಯಬಿದ್ದರೆ ಸಚಿವ ಸಂಪುಟದ ಗಮನಕ್ಕೆ ತಂದು ಪಟ್ಟಿ ಘೋಷಣೆ ಮಾಡಲಾಗುವುದು ಎಂದರು.

ಆಗಸ್ಟ್ 31ಕ್ಕೆ 75 ತಾಲ್ಲೂಕುಗಳ ಪಟ್ಟಿ ಸಿದ್ಧಪಡಿಸಿದ್ದೇವೆ. ತಾಲ್ಲೂಕುವಾರು ಬೆಳೆ ಸಮೀಕ್ಷೆ ನಡೆಸಿ ಅದರ ಆಧಾರದ ಮೇಲೆ ವಾರ ಅಥವಾ ಹತ್ತು ದಿನಗಳಲ್ಲಿ ಬರಪೀಡಿತ ತಾಲ್ಲೂಕುಗಳ ಎರಡನೇ ಪಟ್ಟಿ ಘೋಷಣೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಬರ ಘೋಷಣೆ ಸಂಬಂಧ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಮಾನದಂಡ ನಿಗದಿ ಮಾಡಿದೆ. ಅದರ ಅನ್ವಯವೇ ಬರಪೀಡಿತ ತಾಲ್ಲೂಕುಗಳನ್ನು ಘೋಷಿಸಲಾಗುವುದು ಎಂದು ತಿಳಿಸಿದರು.

‘ಮಳೆ ಪರಿಸ್ಥಿತಿ ಆಧಾರದ ಮೇಲೆ ಮೂರನೇ ಪಟ್ಟಿ ಸಿದ್ಧಪಡಿಸಲೂ ಸರ್ಕಾರ ಚಿಂತನೆ ನಡೆಸಿದೆ. ಮೊದಲ ಪಟ್ಟಿಯಲ್ಲಿ ಬಿಟ್ಟು ಹೋದ ತಾಲ್ಲೂಕು-ಗಳನ್ನು ಎರಡನೇ ಪಟ್ಟಿಯಲ್ಲಿ ಪರಿಗಣಿ-ಸುತ್ತೇವೆ, ಎರಡನೇ ಪಟ್ಟಿಯಲ್ಲಿ ಬಿಟ್ಟು ಹೋದ ತಾಲ್ಲೂಕುಗಳನ್ನು ಮೂರನೇ ಪಟ್ಟಿಯಲ್ಲಿ ಪರಿಗಣಿಸುತ್ತೇವೆ’ ಎಂದು ಮಾಹಿತಿ ನೀಡಿದರು.

ಘೋಷಣೆ ನಂತರ ಮುಂದೇನು?

- ತುರ್ತಾಗಿ ಕುಡಿಯುವ ನೀರು ಪೂರೈಕೆ ವ್ಯವಸ್ಥೆ
- ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ತುರ್ತು ಕ್ರಮ
- ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲು ಅನುದಾನ ಬಿಡುಗಡೆ
- ಬೆಳೆ ಹಾನಿ ಪರಿಹಾರ ವಿತರಣೆಗೆ ಚಾಲನೆ
- ಎನ್‌ಡಿಆರ್‌ಎಫ್ ಮಾನದಂಡ ಪ್ರಕಾರ ರಾಜ್ಯಕ್ಕೆ ದೊರೆಯಬೇಕಾದ ಪರಿಹಾರ ಪಡೆಯಲು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಕೆ

ಆಪರೇಷನ್ ಆಗಲು ನನಗೆ ಕ್ಯಾನ್ಸರ್ ಇಲ್ಲ :ರಾಜೂಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ನಾನು ಆಪರೇಷನ್‌ಗೆ ಒಳಗಾಗಲು ನನಗೆ ಕ್ಯಾನ್ಸರ್ ಇಲ್ಲ. ಯಾವುದೇ ಗಡ್ಡೆಯೂ ಇಲ್ಲ. ಹೀಗಾಗಿ ಕಾಂಗ್ರೆಸ್‌ನ ಆಪರೇಷನ್‌ಗೆ ಒಳಗಾ-ಗುವುದಿಲ್ಲ. ಬಿಜೆಪಿ ಬಿಡುವ ಪ್ರಶ್ನೆಯೂ ಇಲ್ಲ’ ಎಂದು ಬಿಜೆಪಿಯ ಮಾಜಿ ಶಾಸಕ ರಾಜೂಗೌಡ ಹೇಳಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಚಿತ್ರನಟ ಸುದೀಪ್ ಅವರ ಜನ್ಮದಿನದ ಪಾರ್ಟಿಯಲ್ಲಿ ಡಿ.ಕೆ.ಶಿವಕುಮಾರ್ ಜತೆ ಸಹಜವಾಗಿ ಮಾತುಕತೆ ನಡೆದಿದೆ. ರಾಜಕಾರಣದ ಬಗ್ಗೆ ಚರ್ಚೆ ಆಗಿಲ್ಲ. ನನ್ನ ಜತೆ ಬಿ.ಸಿ.ಪಾಟೀಲ ಇದ್ದರು. ಕಾಂಗ್ರೆಸ್ ಸೇರುವಂತೆ ಆಹ್ವಾನ ಬಂದಿಲ್ಲ. ಯಾರೂ ನನ್ನನ್ನು ಸಂಪರ್ಕಿಸಿಲ್ಲ. ಬಿಜೆಪಿ ನನಗೆ ಎಲ್ಲವನ್ನೂ ಕೊಟ್ಟಿದೆ. ಪಕ್ಷ ಅಧಿಕಾರದಲ್ಲಿ ಇದ್ದಾಗ ಮಾತ್ರವಲ್ಲ, ಅಧಿಕಾರದಲ್ಲಿ ಇಲ್ಲದ ಸಂದರ್ಭದಲ್ಲೂ ಪಕ್ಷದ ಜತೆ ಇರುವುದು ಮುಖ್ಯ’ ಎಂದು ಅವರು ಹೇಳಿದರು.

‘ಡಿ.ಕೆ.ಶಿವಕುಮಾರ್ ಅವರು ನನ್ನ ಜತೆ ಮಾತನಾಡುವಾಗ, ಚೆನ್ನಾಗಿ ಕೆಲಸ ಮಾಡಿದ್ದರೂ ಚುನಾವಣೆಯಲ್ಲಿ ಹೇಗೆ ಸೋತಿರಿ ಎಂದು ಕೇಳಿದರು. ನಿಮ್ಮ ಮತ್ತು ಸಿದ್ದರಾಮಯ್ಯ ಅವರ ಪ್ರಭಾವ ಅಂತ ಹೇಳಿದೆ. ಸುದೀಪ್ ಹುಟ್ಟು ಹಬ್ಬಕ್ಕಿಂತ ನಮ್ಮ ವಿಚಾರವೇ ಸುದ್ದಿಯಾಗಿದೆ. ನಮ್ಮ ಪಕ್ಷದ ಕೆಲವು ನಾಯಕರಲ್ಲಿ ಅಸಮಾಧಾನ ಇರುವುದು ನಿಜ. ಅದನ್ನು ಸರಿಪಡಿಸಬೇಕು. ನನಗೆ ಯಾವುದೇ ಸಮಸ್ಯೆ ಇಲ್ಲ. ಆದಷ್ಟು ಬೇಗ ಅಧ್ಯಕ್ಷ ಸ್ಥಾನ ಮತ್ತು ವಿಪಕ್ಷ ನಾಯಕನ ಸ್ಥಾನಗಳಿಗೆ ಆಯ್ಕೆ ಮಾಡಿ ಎಂದಿದ್ದೇವೆ. ನಾನು ಹೇಳಬೇಕಾಗಿ-ರುವುದನ್ನು ಪಕ್ಷದ ವೇದಿಕೆಯಲ್ಲೇ ಹೇಳಿದ್ದೇನೆ. ಪಕ್ಷಕ್ಕೆ ಬಂದ 17 ಜನರನ್ನು ಬಾಂಬೆ ಬಾಯ್ಸ್ ಎಂದು ಕರೆಯುವುದು ಸರಿಯಲ್ಲ. ಅವರು ಬಂದಿದ್ದರಿಂದಲೇ ನಾವು ಸರ್ಕಾರ ರಚಿಸಲು ಸಾಧ್ಯವಾಯಿತು’ ಎಂದರು.

‘ಕಲ್ಯಾಣ’ದಲ್ಲಿ ಮಳೆ: ಜಲಾಶಯ ಭರ್ತಿ

ಪ್ರಜಾವಾಣಿ ವಾರ್ತೆ



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯದಿಂದ ನದಿಗೆ ನೀರು ಹರಿಸಿದ್ದರಿಂದ ಸಮೀಪದ ಸೇತುವೆ ಕೆಳಭಾಗದಲ್ಲಿ ಧುಮ್ಮಿಕ್ಕಿ ಹರಿದ ನೀರು

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಭಾನುವಾರ ಉತ್ತಮ ಮಳೆಯಾಗಿದ್ದು, ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿವೆ.

ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿಯಲ್ಲಿರುವ ಜಲಾಶಯ ಭರ್ತಿಯಾಗಿದ್ದರಿಂದ ಮೂರು ಗೇಟುಗಳ ಮೂಲಕ ನೀರು ಹರಿಸಲಾಗುತ್ತಿದೆ. ಕಲಬುರಗಿ ನಗರದಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಬೆಳಿಗ್ಗೆ ಬಿರುಸಿನ ಮಳೆ ಸುರಿಯಿತು. ಕಾಳಗಿ-ಕಲಬುರಗಿ ರಸ್ತೆ ಸಂಪರ್ಕಿಸುವ ಕೋರವಾರ-ವಚ್ಚಾ ನಡುವಿನ ಮುಖ್ಯರಸ್ತೆ ಮೇಲೆ ಮಳೆ ನೀರು ಹರಿದು ಸಣ್ಣವಾಹನಗಳ ಸಂಚಾರ ಸ್ಥಗಿತಗೊಂಡಿತು. ಸರ್ಕಾರಿ ಬಸ್ಸೊಂದು ರಸ್ತೆ ಕೆಳಗೆ ಇಳಿದಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ.

ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನಲ್ಲಿ ಅತ್ಯಧಿಕ 113.79 ಮಿ.ಮೀ. ಮಳೆಯಾಗಿದ್ದರಿಂದ ಮಂಗಲಗಿ– ಹರಿಜನವಾಡ ನಡುವಣ ಕಿರು ಸೇತುವೆ ಮುಳುಗಿತ್ತು. ಉಳಿದಂತೆ ಚಿಂಚೋಳಿ, ಚಿತ್ತಾಪುರ, ಸೇಡಂ, ಕಲಬುರಗಿ ತಾಲ್ಲೂಕಿನಲ್ಲಿ ಸಾಧಾರಣ ಹಾಗೂ ಜೇವರ್ಗಿ, ಕಮಲಾಪುರ, ಶಹಬಾದ್, ಯಡ್ರಾಮಿ, ಜೇವರ್ಗಿಯಲ್ಲಿ ಹಗುರ ಮಳೆಯಾಯಿತು.

ಬೀದರ್, ಹುಮನಾಬಾದ್, ಚಿಟಗುಪ್ಪ, ಬಸವಕಲ್ಯಾಣ, ಹುಲಸೂರ, ಕಮಲನಗರ, ಔರಾದ್, ಭಾಲ್ಕಿ ತಾಲ್ಲೂ-ಕುಗಳಲ್ಲೂ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಉತ್ತಮ ಮಳೆ ಸುರಿಯಿತು.

ವಿಜಯಪುರ ವರದಿ: ಒಂದು ತಿಂಗಳ ಬಳಿಕ ವಿಜಯಪುರ ನಗರದಲ್ಲಿ ಭಾನುವಾರ ಸಂಜೆ ಅರ್ಧ ತಾಸು ಗುಡುಗು ಸಹಿತ ಧಾರಾಕಾರ ಮಳೆ ಸುರಿಯಿತು. ಎರಡು ವಾರಗಳಿಂದ ಜಿಲ್ಲೆಯಾದ್ಯಂತ 35 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇತ್ತು. ಬಿಸಿಲ ಬೇಗೆ ತಾಳದೆ ಜಿಲ್ಲೆಯ ಜನ ಹೈರಾಣಾಗಿದ್ದರು.

ವಿಜಯಪುರ ತಾಲ್ಲೂಕಿನ ಕನ್ನೂರ, ತಿಡಗುಂದಿ, ಭೂತನಾಳ ಭಾಗಗಳಲ್ಲಿ ಉತ್ತಮ ಮಳೆಯಾಗಿದೆ. ಸಿಂದಗಿ, ಇಂಡಿ ವ್ಯಾಪ್ತಿಯಲ್ಲಿ ಕೆಲ ಹೊತ್ತು ಜಿಟಿಜಿಟಿ ಮಳೆ ಸುರಿದಿದೆ.

ಆದಿತ್ಯ ಕಕ್ಷೆ ಎತ್ತರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಅಧ್ಯಯನ-ಕ್ಕಾಗಿ ಶನಿವಾರ ಉಡಾವಣೆಗೊಂಡು ಭೂಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿರುವ ‘ಆದಿತ್ಯ ಎಲ್–1’ ಅನ್ನು ಭಾನುವಾರ ಯಶಸ್ವಿಯಾಗಿ ಎತ್ತರದ ಕಕ್ಷೆಗೆ ಸೇರಿಸಲಾಗಿದೆ.

ಆದಿತ್ಯ ಎಲ್–1 ಉಪಗ್ರಹವು ಆರೋಗ್ಯ ಪೂರ್ಣವಾಗಿದ್ದು, ಸಾಮಾನ್ಯ ಸ್ಥಿತಿಯಲ್ಲೇ ಕಾರ್ಯ ನಿರ್ವಹಿಸುತ್ತಿದೆ. ಸೋಮವಾರ ಇನ್ನೂ ಎತ್ತರದ ಕಕ್ಷೆಗೆ ಸೇರಿಸುವ ಕಾರ್ಯ ನಡೆಯಲಿದೆ ಎಂದು ಇಸ್ರೊ ತಿಳಿಸಿದೆ.

ಬೆಂಗಳೂರಿನ ಇಸ್ರೊ ಟೆಲಿಮೆಟ್ರಿ, ಟ್ರ್ಯಾಕಿಂಗ್ ಆ್ಯಂಡ್ ಕಮಾಂಡ್ ಸೆಂಟರ್ (ಐಎಸ್‌ಟಿಆರ್‌ಎಸಿ) ಕಕ್ಷೆ ಬದಲಾವಣೆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಈಗ ಆದಿತ್ಯ 245 ಕಿ.ಮೀx22,459 ಕಿ.ಮೀ ಎತ್ತರದ ಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿದೆ.

ನಿದ್ದೆಗೆ ಜಾರಿದ ‘ಪ್ರಜ್ಞಾನ್’: ಚಂದ್ರಯಾನ–3ರ ರೋವರ್ ‘ಪ್ರಜ್ಞಾನ್’ ಚಂದ್ರನ ಅಂಗಳದಲ್ಲಿ ಒಂದು ದಿನದ (ಭೂಮಿಯ 14 ದಿನಗಳು) ಕಾರ್ಯಾಚರಣೆ ಪೂರ್ಣಗೊಳಿಸಿದ್ದು, ಅಲ್ಲಿ ಕತ್ತಲು ಆವರಿಸಿರುವುದರಿಂದ, ಅದರ ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ ಎಂದು ಇಸ್ರೊ ತಿಳಿಸಿದೆ.

ರೋವರ್‌ನಲ್ಲಿರುವ ಎಪಿಎಕ್ಸ್‌ಎಸ್ ಮತ್ತು ಲಿಬ್ಸ್ ಉಪಕರಣಗಳ ಕಾರ್ಯಾಚರಣೆ ನಿಲ್ಲಿಸಲಾಗಿದೆ. ಹೀಗಾಗಿ ಇವುಗಳಿಂದ ಲ್ಯಾಂಡರ್ ಮೂಲಕ ಭೂಮಿಗೆ ರವಾನೆಯಾಗುತ್ತಿದ್ದ ಮಾಹಿತಿ ನಿಂತು ಹೋಗಿದೆ. ಇವುಗಳಿಗೆ ಅಳವಡಿಸಿರುವ ಬ್ಯಾಟರಿಗಳು ಪೂರ್ಣ ಚಾರ್ಜ್ ಆಗಿವೆ. ಸೆ.22ರಂದು ಚಂದ್ರನಲ್ಲಿ ಸೂರ್ಯೋದಯ ಆಗುವುದರಿಂದ ಅಂದು ಸೌರಫಲಕಗಳಿಗೆ ಬೆಳಕು ಸಿಗುತ್ತದೆ. ಆಗ ಮತ್ತೆ ಲ್ಯಾಂಡರ್, ರೋವರ್ ಎಚ್ಚರಗೊಳ್ಳಬಹುದು ಎಂದಿದೆ.

ಹಂಪಿ ವಿಶ್ವವಿದ್ಯಾಲಯ: ₹82 ಲಕ್ಷ ವಿದ್ಯುತ್ ಬಿಲ್ ಪಾವತಿ ವಿಚಾರ

ವಿದ್ಯುತ್ ಬಿಲ್ ಮನ್ನಾ ಕೋರಿಕೆ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿದ್ಯುತ್ ಬಿಲ್ ಮೊತ್ತ ₹82.10 ಲಕ್ಷವನ್ನು ಮನ್ನಾ ಮಾಡಲಾಗದು, ಈ ಮೊತ್ತವನ್ನು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಗೆ (ಜೆಸ್ಕಾಂ) ಪಾವತಿಸಬೇಕು’ ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಸೂಚನೆ ನೀಡಿದ್ದಾರೆ.



‘ಇತರ ವಿಶ್ವವಿದ್ಯಾಲಯಗಳಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಹಣಕಾಸಿನ ಆದಾಯ ಮೂಲಗಳು ಇಲ್ಲದ ಕಾರಣ ಹಾಗೂ ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆ ಆಗದ ಕಾರಣ ವಿದ್ಯುತ್ ಬಿಲ್ ಅನ್ನು ಮನ್ನಾ ಮಾಡಬೇಕು’ ಎಂದು ಕುಲಪತಿ ಪ್ರೊ. ಡಿ.ವಿ.ಪರಮಶಿವಮೂರ್ತಿ ಅವರು ಜೂನ್ 15ರಂದು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು. ಇದಕ್ಕೆ ಪೂರಕವಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಸಹ ಜೂನ್ 19ರಂದು ಪತ್ರ ಬರೆದಿದ್ದರು. ಈ ಎರಡೂ ಪತ್ರಗಳಿಗೆ ಆಗಸ್ಟ್ 21ರಂದು ಉತ್ತರ ನೀಡಿರುವ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಪತ್ರ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ವಿದ್ಯುತ್ ಸರಬರಾಜು ನಿಯಮಗಳ ಅನ್ವಯ ವಿದ್ಯುತ್ ಬಿಲ್ ಬಾಕಿ ಮೊತ್ತವನ್ನು ಮನ್ನಾ ಮಾಡಲು ಅವಕಾಶ ಇಲ್ಲ’ ಎಂದು ಪತ್ರದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.


> **ಬಿಲ್ ವಸೂಲಿಗೆ ಜೆಸ್ಕಾಂನವರು ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಸ್ವಲ್ಪ ಸಮಯಾವಕಾಶ ಕೇಳಿದ್ದೇವೆ. ಅಷ್ಟರೊಳಗೆ ಸರ್ಕಾರ ಸ್ಪಂದಿಸುವ ವಿಶ್ವಾಸ ಇದೆ**
> **ಪ್ರೊ.ಡಿ.ವಿ.ಪರಮಶಿವಮೂರ್ತಿ**
> ಕುಲಪತಿ

ಬಾಡಿಗೆ ಕೊಡಿಸಲು ಕೋರಿ ಪತ್ರ: ಸರ್ಕಾರದ ಈ ಉತ್ತರದಿಂದ ತೀವ್ರ ಅಸಮಾಧಾನಗೊಂಡಿರುವ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಅವರು ಸೆ.2ರಂದು ಮುಖ್ಯಮಂತ್ರಿ ಅವರಿಗೆ ಮತ್ತೊಂದು ಪತ್ರ ಬರೆದಿದ್ದು, ವಿಶ್ವವಿದ್ಯಾಲಯದ ಕ್ಯಾಂಪಸ್‌ನೊಳಗೆ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲು 4.5 ಎಕರೆ ಜಾಗವನ್ನು ಜೆಸ್ಕಾಂಗೆ ಉಚಿತವಾಗಿ ನೀಡಲಾಗಿದ್ದು, ವಿದ್ಯುತ್ ಬಿಲ್ ಮನ್ನಾ ಮಾಡದಿದ್ದರೆ ಜೆಸ್ಕಾಂನವರು ತಾವು ಬಳಸಿಕೊಂಡಿರುವ ಜಾಗಕ್ಕೆ ಮಾಸಿಕ ಬಾಡಿಗೆ ಪಾವತಿಸಲು ಸೂಚನೆ ನೀಡಬೇಕು ಎಂದು ಕೋರಿಕೊಂಡಿದ್ದಾರೆ.

‘2019ರಿಂದ 2022ರ ಸೆಪ್ಟೆಂಬರ್ ತಿಂಗಳವರೆಗೆ ಇದ್ದ ಕೋವಿಡ್ ಸಾಂಕ್ರಾಮಿಕ ಹಾಗೂ ಸರ್ಕಾರದಿಂದ ಅನುದಾನ ಬಾರದೆ ಇರುವ ಕಾರಣ ಜೂನ್ ಅಂತ್ಯದವರೆಗಿನ ವಿದ್ಯುತ್ ಬಿಲ್ ಮೊತ್ತ ₹82,10,402 ಬಾಕಿ ಆಗಿದೆ. ಸದ್ಯ ಈ ಮೊತ್ತವನ್ನು ಪಾವತಿಸುವ ಶಕ್ತಿ ವಿಶ್ವವಿದ್ಯಾಲಯಕ್ಕೆ ಇಲ್ಲ. ಸರ್ಕಾರ ವಿದ್ಯುತ್ ಬಿಲ್ ಮನ್ನಾ ಮಾಡಬೇಕು ಇಲ್ಲವೇ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ನಿಧನ ವಾರ್ತೆ

ಮಾಜಿ ಶಾಸಕ ಆಲಮೇಲಕರ್



ವಿಜಯಪುರ: ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಮಾಜಿ ಶಾಸಕ ವಿಲಾಸಬಾಬು ಆಲಮೇಲಕರ್ (64) ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ವಿಜಯಪುರದ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಬಳ್ಳೊಳ್ಳಿ ವಿಧಾನಸಭಾ ಕ್ಷೇತ್ರಕ್ಕೆ (ಈಗಿನ ನಾಗಠಾಣ ಮೀಸಲು ಕ್ಷೇತ್ರ) 1998ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಸಂಯುಕ್ತ ಜನತಾ ದಳದಿಂದ ಶಾಸಕರಾಗಿ ಆಯ್ಕೆಯಾ-ಗಿದ್ದರು. ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಬೆಳ್ತಂಗಡಿ: ಅತ್ಯಾಚಾರ– ಕೊಲೆ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಪ್ರತಿಭಟನಾ ಸಮಾವೇಶ

ಸೌಜನ್ಯಾ ಪರ ಹೋರಾಟಕ್ಕೆ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ‘ಅತ್ಯಾಚಾರಿಗಳಿಗೆ ಶಿಕ್ಷೆ ಕೊಡಿಸಿ... ಸೌಜನ್ಯಾಗೆ ನ್ಯಾಯ ಒದಗಿಸಿ...’ ಪಟ್ಟಣದ ಗಲ್ಲಿ ಗಲ್ಲಿಗಳಲ್ಲಿ ಭಾನುವಾರ ಮೊಳಗಿದ ಘೋಷಣೆಗಳಿವು.

ಧರ್ಮಸ್ಥಳದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗೆ ಆಗ್ರಹಿಸಿ ಪ್ರಜಾಪ್ರಭುತ್ವ ವೇದಿಕೆ ಹಾಗೂ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಗಳ ಆಶ್ರಯದಲ್ಲಿ ಇಲ್ಲಿನ ತಾಲ್ಲೂಕು ಕಚೇರಿ ಮೈದಾನದಲ್ಲಿ ನಡೆದ ಭಾರಿ ಪ್ರತಿಭಟನಾ ಸಮಾವೇಶವು ಈ ಪ್ರಕರಣದ ನಿರ್ವಹಣೆ ಕುರಿತು ಜನರಲ್ಲಿ ಮಡುಗಟ್ಟಿರುವ ಆಕ್ರೋಶದ ತೀವ್ರತೆಗೆ ಕನ್ನಡಿ ಹಿಡಿಯಿತು. ‘ಆರೋಪಿಗಳನ್ನು ರಕ್ಷಿಸುತ್ತಿರುವವರು ಕಾಮಾಂಧರು’ ಎಂದು ಘೋಷಣೆಗಳನ್ನು ಕೂಗಿದರು.

ನಾಡಿನ ನಾನಾ ಕಡೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದ ಪ್ರತಿಭಟನಕಾರರಿಂದ ಇಲ್ಲಿನ ಮಿನಿ ವಿಧಾನಸೌಧದ ಆವರಣ ತುಂಬಿ ಹೋಗಿತ್ತು. ಇಲ್ಲಿನ ಬಸ್ ನಿಲ್ದಾಣ ಹಾಗೂ ಮೂರು ಮಾರ್ಗದವರೆಗೂ ಜನ ಕಿಕ್ಕಿರಿದು ಸೇರಿದ್ದರು. ಪ್ರತಿಭಟನಕಾರರ ಆಕ್ರೋಶದ ನುಡಿಗಳನ್ನು ಜನ ಪಟ್ಟಣದ ಗಲ್ಲಿ ಗಲ್ಲಿಗಳಲ್ಲಿ ತಾಸುಗಟ್ಟಲೆ ನಿಂತುಕೊಂಡೇ ಆಲಿಸಿದರು. ಸಂತೆ ಕಟ್ಟೆಯ ಬಳಿ, ಮೂರು ಮಾರ್ಗದ ಬಳಿ, ಬಸ್‌ನಿಲ್ದಾಣದ ಬಳಿ ಅಳವಡಿಸಿದ್ದ ಎಲ್‌ಇಡಿ ಪರದೆಗಳ ಮೂಲಕವು ಪ್ರಮುಖರ ಭಾಷಣಗಳನ್ನು ವೀಕ್ಷಿಸಿದರು. ಮಂಗಳೂರು ಕಡೆಗಿನ ರಸ್ತೆಯಲ್ಲಿ ಸಂತೆಕಟ್ಟೆವರೆಗೆ ಹಾಗೂ ಉಜಿರೆ ಕಡೆಯ ರಸ್ತೆಯಲ್ಲಿದ ಲಾಯಿಲವರೆಗೆ ಧ್ವನಿವರ್ಧಕದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಆದಿಚುಂಚನಗಿರಿಯ ಮಂಗಳೂರು ಶಾಖಾ ಮಠದ ಧರ್ಮಪಾಲನಾಥ ಸ್ವಾಮೀಜಿ, ‘ಸೌಜನ್ಯಾ ಅತ್ಯಾಚಾರ ಕೊಲೆ ಪ್ರಕರಣದಲ್ಲಿ ಎಲ್ಲಾ ತನಿಖೆಗಳು ವಿಫಲವಾಗಿರುವುದು ದುರಂತ. ಸತ್ಯ, ನ್ಯಾಯಕ್ಕಾಗಿ ನಡೆಯುವ ಹೋರಾಟಕ್ಕೆ ಮಠದಿಂದ ಬೆಂಬಲವಿದೆ’ ಎಂದರು.

‘ಸಂತೋಷ್ ರಾವ್ ನಿರಪರಾಧಿ ಎಂದು ಸಾಬೀತಾಗಿದ್ದು, ಕೊಲೆಯ ಹಿಂದೆ ಬೇರೆ ಯಾರೋ ಇರುವುದು ಸ್ಪಷ್ಟ. ಪ್ರಕರಣದ ತನಿಖಾಧಿಕಾರಿ ಮತ್ತು ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರನ್ನು ವಿಚಾರಣೆಗೆ ಒಳಪಡಿಸಿದರೆ ಸತ್ಯಾಂಶ ಹೊರ ಬೀಳಲಿದೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಹೆಚ್ಚಿನ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸೌಜನ್ಯಾ ಮನೆಗೂ ಭೇಟಿ ನೀಡಲಿದ್ದಾರೆ’ ಎಂದು ತಿಳಿಸಿದರು.

ಸೌಜನ್ಯಾ ಕುಟುಂಬದ ಹೋರಾಟಕ್ಕೆ ಬೆಂಬಲವಾಗಿ ನಿಂತಿರುವ ಮಹೇಶ ಶೆಟ್ಟಿ ತಿಮರೋಡಿ, ‘ಸೌಜನ್ಯಾಗೆ ನ್ಯಾಯ ಕೊಡಿಸಲು ಶುರುವಾದ ಹೋರಾಟ ಸಂಗ್ರಾಮದ ರೂಪವನ್ನು ಪಡೆದಿದೆ. ಈ ಹೋರಾಟವನ್ನು ಹತ್ತಿಕ್ಕಲು ಮುಂದಾದರೆ ಸರ್ಕಾರಕ್ಕೆ ಶಾಪ ತಟ್ಟುತ್ತದೆ. ಜನರು ದಂಗೆ ಎದ್ದರೆ ಅದಕ್ಕೆ ಆಡಳಿತ ಮತ್ತು ರಾಜಕೀಯ ವ್ಯಕ್ತಿಗಳೇ ನೇರ ಹೊಣೆ. ಮರು ತನಿಖೆ ಆಗದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ವಿಧಾನಸೌಧಕ್ಕೂ ಮುತ್ತಿಗೆ ಹಾಕುತ್ತೇವೆ’ ಎಂದು ಎಚ್ಚರಿಸಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ಪ್ರತಿಭಟನೆಗೆ ಅವಕಾಶ ನೀಡದ ಜಿಲ್ಲಾಡಳಿತದ ವಿರುದ್ಧ ಹಾಗೂ ಈ ಕುರಿತು ಒತ್ತಡ ಹಾಕಿದ ರಾಜಕೀಯ ಮುಖಂಡರ ವಿರುದ್ಧ ಪ್ರತಿಭಟನಕಾರರು ಕಿಡಿಕಾರಿದರು.

ಮುಖ್ಯಾಂಶಗಳು

- ತಾಸುಗಟ್ಟಲೆ ನಿಂತುಕೊಂಡೇ ಪ್ರಮುಖರ ಭಾಷಣ ಆಲಿಸಿದ ಪ್ರತಿಭಟನಕಾರರು
- ನ್ಯಾಯ ಸಿಗದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ
- ತನಿಖಾಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಒತ್ತಾಯ



ಸೌಜನ್ಯಾಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಬೆಳ್ತಂಗಡಿಯಲ್ಲಿ ಭಾನುವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಸೇರಿದ್ದ ಜನಸ್ತೋಮ

ಮರು ತನಿಖೆ ಜೊತೆಗೆ ಸರ್ಕಾರವು ಸೌಜನ್ಯಾ ಮತ್ತು ನಿರಪರಾಧಿ ಸಂತೋಷ್ ರಾವ್ ಕುಟುಂಬಕ್ಕೆ ₹25 ಲಕ್ಷ, ದಕ್ಷಿಣ ಕನ್ನಡ, ಉಡುಪಿ ಶಾಸಕರು, ಸಂಸದರು ತಲಾ ₹5 ಲಕ್ಷ ಪರಿಹಾರ ನೀಡಬೇಕು
ಪ್ರಮೋದ್ ಮುತಾಲಿಕ್
ಶ್ರೀರಾಮ ಸೇನೆ ಮುಖ್ಯಸ್ಥ

ಸೌಜನ್ಯಾ ಕುಟುಂಬಕ್ಕೆ ಸರ್ಕಾರ ರಕ್ಷಣೆ ನೀಡಬೇಕು. ಹೆಣ್ಣು ಮಕ್ಕಳ ಮೇಲೆ ಮುಂದೆಂದೂ ಇಂತಹ ಅನ್ಯಾಯ ನಡೆಯದಂತೆ ತಡೆಯಬೇಕು
ಧರ್ಮಪಾಲನಾಥ ಸ್ವಾಮೀಜಿ,
ಆದಿಚುಂಚನಗಿರಿ ಮಂಗಳೂರು ಶಾಖಾ ಮಠದ ಸ್ವಾಮೀಜಿ

ಮಗಳ ಮೊರೆ ಈಗಲೂ ಕೇಳುತ್ತಿದೆ: ಕುಸುಮಾವತಿ

‘ಅಮ್ಮಾ ನನ್ನನ್ನು ಬದುಕಿಸು... ಎಂಬ ಮೊರೆ ಇಂದಿಗೂ ನನ್ನ ಕಿವಿಯಲ್ಲಿ ಕೇಳಿಸಿದಂತಾಗುತ್ತದೆ. ಮಗಳಿಗೆ ಈ ಗತಿಯನ್ನು ತಂದವರಿಗೆ ತಕ್ಕ ಶಿಕ್ಷೆ ಕೊಡಿಸಿ’ ಎಂದು ಸೌಜನ್ಯಾ ತಾಯಿ ಕುಸುಮಾವತಿ ಅವರು ಕೋರಿದರು. ವೇದಿಕೆಯಿಂದ ಕೆಳಗಿಳಿದು ಜನಸ್ತೋಮಕ್ಕೆ ನಮಸ್ಕರಿಸಿದ ಅವರು, ‘ಮಗಳಿಗೆ ನ್ಯಾಯ ಕೊಡಿಸಿ’ ಎಂದು ಸೆರಗು ಒಡ್ಡಿ ಅಂಗಲಾಚಿದರು. ಈ ವೇಳೆ ಅಲ್ಲಿ ಸೇರಿದ್ದ ಬಹುತೇಕರ ಕಣ್ಣುಗಳು ತುಂಬಿ ಬಂದವು. ಸಭೆಯಲ್ಲಿ ಮೌನ ಆವರಿಸಿತು.

ಸೌಜನ್ಯಾ ಕುರಿತಾದ ‘ಪುಣ್ಯಕೋಟಿ’ ಹಾಡಿನ ಧಾಟಿಯಲ್ಲಿ ಹೋರಾಟಗಾರರು ಗೀತೆಯೊಂದನ್ನು ಹಾಡಿದಾಗ ಪ್ರತಿಭಟನಕಾರರ ಕಣ್ಣಲ್ಲಿ ಮತ್ತೆ ನೀರು ಜಿನುಗಿತು.

ಆಸ್ಪತ್ರೆಯಿಂದ ಮನೆಗೆ ಮರಳಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಪಾರ್ಶ್ವವಾಯುವಿಗೆ ಒಳಗಾಗಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಗುಣಮುಖರಾಗಿದ್ದು, ಇಲ್ಲಿನ ಜಯನಗರದ ಅಪೋಲೊ ಆಸ್ಪತ್ರೆಯಿಂದ ಭಾನುವಾರ ಮನೆಗೆ ಮರಳಿದರು.

ತೀವ್ರ ಜ್ವರದಿಂದ ಬಳಲುತ್ತಿದ್ದ ಕುಮಾರಸ್ವಾಮಿ ಅವರನ್ನು ಆಗಸ್ಟ್ 30ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಲಘು ಪಾರ್ಶ್ವವಾಯು ಆಗಿರುವುದು ವೈದ್ಯಕೀಯ ಪರೀಕ್ಷೆಗಳ ಬಳಿಕ ಗೊತ್ತಾಗಿತ್ತು. ತೀವ್ರನಿಗಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು.

ಆಸ್ಪತ್ರೆಯಿಂದ ಮನೆಗೆ ಮರಳುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆ ದಿನ ಬಿಡದಿಯ ತೋಟದ ಮನೆಯಲ್ಲಿದ್ದೆ. ತಡ ರಾತ್ರಿ ಆರೋಗ್ಯದಲ್ಲಿ ವ್ಯತ್ಯಾಸ ಕಾಣಿಸಿತು. ತಕ್ಷಣ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಕರೆಮಾಡಿ ಮಾತನಾಡಿದೆ. ಅವರ ಸಲಹೆಯಂತೆ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದೆ. 20 ನಿಮಿಷಗಳಲ್ಲೇ ಆಸ್ಪತ್ರೆ ತಲುಪಿದ್ದೆ. ಆ ದಿನ ಸ್ವಲ್ಪ ನಿರ್ಲಕ್ಷ್ಯ ಮಾಡಿದ್ದರೆ ನಾನು ಚೇತರಿಸಿಕೊಳ್ಳಲು ತಿಂಗಳುಗಳೇ ಬೇಕಾಗುತ್ತಿತ್ತು’ ಎಂದರು.

‘ಎಲ್ಲರ ಕುಟುಂಬದಲ್ಲೂ ಈ ರೀತಿಯ ಅನಾರೋಗ್ಯದ ಸಮಸ್ಯೆಗಳಿರುತ್ತವೆ. ಅದು ಗಮನಕ್ಕೆ ಬರುತ್ತಿದ್ದಂತೆ ಆಸ್ಪತ್ರೆಗೆ ತೆರಳಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬೇಡಿ. ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆ ಆಗಿತ್ತು. ಇದು ನನಗೆ ಮೂರನೇ ಜನ್ಮ’ ಎಂದು ಕುಮಾರಸ್ವಾಮಿ ಅವರು ಹೇಳಿದರು.

ಅಪೋಲೊ ಆಸ್ಪತ್ರೆಯ ನರರೋಗ ತಜ್ಞ ಡಾ. ಸತೀಶ್ ಚಂದ್ರ, ಉಪಾಧ್ಯಕ್ಷ ಡಾ. ಗೋವಿಂದಯ್ಯ ಯತೀಶ್ ಚಿಕಿತ್ಸೆ ಕುರಿತು ಮಾಹಿತಿ ನೀಡಿದರು. ಕುಮಾರಸ್ವಾಮಿ ಅವರ ಮಗ ನಿಖಿಲ್ ಆಸ್ಪತ್ರೆಯಿಂದ ತಂದೆಯನ್ನು ಮನೆಗೆ ಕರೆದೊಯ್ದರು.

7ರಂದು ಕಾಂಗ್ರೆಸ್ ಜಿಲ್ಲಾ ಮಟ್ಟದ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಳೆದ ವರ್ಷ ನಡೆದಿದ್ದ ‘ಭಾರತ್ ಜೋಡೊ ಯಾತ್ರೆ’ಯ ಮೊದಲ ವರ್ಷಾಚರಣೆಯ ಅಂಗವಾಗಿ ಪಕ್ಷವು ಇದೇ 7ರಂದು ದೇಶದಾದ್ಯಂತ ಜಿಲ್ಲಾ ಮಟ್ಟದಲ್ಲಿ ಪಾದಯಾತ್ರೆಗಳನ್ನು ಹಮ್ಮಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿರ್ದೇಶನದಂತೆ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಕೆ.ಸಿ. ವೇಣುಗೋಪಾಲ್ ಅವರು ಪಕ್ಷದ ಮುಖಂಡರಿಗೆ ಪಾದಯಾತ್ರೆ ಹಮ್ಮಿಕೊಳ್ಳಲು ಸೂಚನೆ ನೀಡಿದ್ದಾರೆ ಎಂದಿವೆ.

ಎಲ್ಲಾ ಜಿಲ್ಲೆಗಳಲ್ಲೂ ಸಂಜೆ 5 ಗಂಟೆಯಿಂದ 6 ಗಂಟೆಯ ವರೆಗೆ ಪಾದಯಾತ್ರೆ ನಡೆಯಲಿದೆ.

2022 ಸೆಪ್ಟೆಂಬರ್ 7ರಂದು ರಾಹುಲ್ ಅವರು ಕನ್ಯಾಕುಮಾರಿಯಿಂದ ಆರಂಭಿಸಿದ್ದ ಭಾರತ್ ಜೋಡೊ ಯಾತ್ರೆಯು ಜನವರಿ 30ರಂದು ಶ್ರೀನಗರದಲ್ಲಿ ಕೊನೆಗೊಂಡಿತ್ತು. ಯಾತ್ರೆಯುದ್ದಕ್ಕೂ ಅವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ್ದರು ಮತ್ತು ಪತ್ರಿಕಾಗೋಷ್ಠಿಗಳನ್ನು ನಡೆಸಿದ್ದರು.

ಜನರೊಂದಿಗೆ ಸಂವಾದ ನಡೆಸಿದ್ದ ರಾಹುಲ್ ಅವರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದ್ದರು.

ಇಲಾಖಾ ವಿಚಾರಣೆ: ಕಾಲಮಿತಿ ಕಡ್ಡಾಯ ಪಾಲನೆಗೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ), ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಸಿಬ್ಬಂದಿ ವಿರುದ್ಧದ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ಕಡ್ಡಾಯವಾಗಿ ಕಾಲಮಿತಿ ಪಾಲಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸುತ್ತೋಲೆ ಹೊರಡಿಸಿದೆ.

ಇಲಾಖಾ ವಿಚಾರಣೆಗಳು ವಿಳಂಬವಾಗುತ್ತಿರುವುದರಿಂದ ಮುಂಬಡ್ತಿ, ಕಾಲಮಿತಿ ವೇತನ ಬಡ್ತಿ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ತೊಂದರೆಯಾಗುತ್ತಿದ್ದು, ಈ ವಿಚಾರದಲ್ಲಿ ಒಂಬತ್ತು ತಿಂಗಳ ಕಾಲಮಿತಿ ಪಾಲಿಸಬೇಕು ಎಂದು ರಾಜ್ಯ ಪಿಡಿಒ ಕ್ಷೇಮಾಭಿವೃದ್ಧಿ ಸಂಘವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಮನವಿಗೆ ಸ್ಪಂದಿಸಿ ಶುಕ್ರವಾರ ಸುತ್ತೋಲೆ ಹೊರಡಿಸಿದ್ದು, ‘ಲೋಕಾಯುಕ್ತರು ಅಥವಾ ಉಪ ಲೋಕಾಯುಕ್ತರಿಂದ ಇಲಾಖಾ ವಿಚಾರಣೆಗೆ ಮೊದಲು ಸಕ್ಷಮ ಪ್ರಾಧಿಕಾರದಿಂದ ವಿಚಾರಣೆ ಆರಂಭಿಸಿರುವ ಕುರಿತು ಸ್ಪಷ್ಟಪಡಿಸಿಕೊಳ್ಳಬೇಕು. ಸಕ್ಷಮ ಪ್ರಾಧಿಕಾರದಲ್ಲಿ ವಿಚಾರಣೆ ನಡೆಯುತ್ತಿದ್ದು, ಸರ್ಕಾರವು ಪ್ರಕರಣವನ್ನು ವರ್ಗಾಯಿಸಲು ನಿರ್ಧರಿಸಿದರೆ ಆ ಹಂತದವರೆಗಿನ ಕಡತದೊಂದಿಗೆ ಲೋಕಾಯುಕ್ತರು ಅಥವಾ ಉಪ ಲೋಕಾಯುಕ್ತರಿಗೆ ಪ್ರಕರಣ ವರ್ಗಾವಣೆ ಮಾಡಬೇಕು’ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

ಪಿಡಿಒ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಹಾಗ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಜರುಗಿಸಲು ನಿಗದಿಪಡಿಸಿದ ಕಾಲಮಿತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಲೋಕಾಯುಕ್ತ ಸಂಸ್ಥೆಯು ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಿದ ಪ್ರಕರಣಗಳಲ್ಲಿ ಪ್ರಕರಣ ವರ್ಗಾವಣೆ ಸಂದರ್ಭದಲ್ಲಿ ನೀಡಿದ್ದ ಸೂಚನೆಗಳಂತೆ ಕ್ರಮ ಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಜ್ವರ: ಆಸ್ಪತ್ರೆಗೆ ಸೋನಿಯಾ ದಾಖಲು

ನವದೆಹಲಿ (ಪಿಟಿಐ): ಜ್ವರದಿಂದ ಬಳಲುತ್ತಿರುವ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರನ್ನು ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ಭಾನುವಾರ ತಿಳಿಸಿವೆ.



ಸೋನಿಯಾ ಗಾಂಧಿ

ಶನಿವಾರ ಸಂಜೆ ಕೇಂದ್ರ ದೆಹಲಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಣ್ಣ ಪ್ರಮಾಣದ ಜ್ವರವಿದೆ. ವೈದ್ಯರ ತಂಡ ಮೇಲ್ವಿಚಾರಣೆ ಮಾಡುತ್ತಿದೆ ಎಂದು ಹಿರಿಯ ವೈದ್ಯರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಶ್ಲೀಲ ವಿಡಿಯೊ: ಆತ್ಮಹತ್ಯೆಗೆ ಯತ್ನಿಸಿದ್ದ ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಜಗಳೂರು: ಅಶ್ಲೀಲ ವಿಡಿಯೊ ಹರಿಬಿಡುವುದಾಗಿ ಯುವಕರಿಬ್ಬರು ಬೆದರಿಕೆ ಹಾಕಿದ್ದರಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ್ದ ವಿದ್ಯಾರ್ಥಿನಿಯೊಬ್ಬಳು (17), ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರ ಮೃತಪಟ್ಟಿದ್ದಾರೆ.

ಕೆಲ ದಿನಗಳ ಹಿಂದೆ ಆತ್ಮಹತ್ಯೆಗೆ ಯತ್ನಿಸಿ ಗಂಭೀರವಾಗಿ ಗಾಯ ಗೊಂಡಿದ್ದ ವಿದ್ಯಾರ್ಥಿನಿಯನ್ನು ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವಿದ್ಯಾರ್ಥಿನಿಯ ವಿಡಿಯೊ ಹರಿಬಿಡುವುದಾಗಿ ಬೆದರಿಸಿದ್ದ ತಾಲ್ಲೂಕಿನ ಮಧು ಮತ್ತು ನಾಗೇಂದ್ರಸ್ವಾಮಿ ವಿರುದ್ಧ ಜಗಳೂರು ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮಗಳು ಪ್ರತಿದಿನ ಗ್ರಾಮದಿಂದ ಕಾಲೇಜಿಗೆ ಹೋಗುತ್ತಿದ್ದಾಗ ಇಬ್ಬರು ಯುವಕರ ಪರಿಚಯವಾಗಿತ್ತು. ಅವರು ವಾರದ ಹಿಂದೆ ಬೇಕರಿ ತಿನಿಸಿನಲ್ಲಿ ಮತ್ತು ಬರಿಸುವ ವಸ್ತುವನ್ನು ಸೇರಿಸಿ ತಿನ್ನಲು ಕೊಟ್ಟಿದ್ದಾರೆ. ಆಕೆ ಪ್ರಜ್ಞೆ ತಪ್ಪಿದಾಗ ಮೊಬೈಲ್‌ನಿಂದ ಅಶ್ಲೀಲ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. ಬಳಿಕ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿಬಿಬಿಡುವುದಾಗಿ ಹೆದರಿಸಿದ್ದರು ಎಂದು ಮೃತ ಬಾಲಕಿಯ ಪಾಲಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ಮಧು ಎಂಬ ಯುವಕ ನಮ್ಮ ಮನೆ ಎದುರು ಬಂದು ತನ್ನ ಜೊತೆಯಲ್ಲಿ ಬರುವಂತೆ ಪೀಡಿಸುತ್ತಿದ್ದ. ಇದರಿಂದ ಬೇಸತ್ತ ಪುತ್ರಿ, ಆಗಸ್ಟ್ 28ರಂದು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಳು’ ಎಂದಿದ್ದಾರೆ.

‘ನನಗೆ ಆದ ಅನ್ಯಾಯ ಬೇರೆ ಯಾವುದೇ ಹೆಣ್ಣುಮಕ್ಕಳಿಗೆ ಆಗಬಾರದು. ದಯವಿಟ್ಟು ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಎಲ್ಲ ದುಷ್ಟರಿಗೂ ಇದು ಪಾಠವಾಗಬೇಕು’ ಎಂದು ಆಸ್ಪತ್ರೆಯಲ್ಲಿದ್ದ ವಿದ್ಯಾರ್ಥಿನಿ ಹೇಳಿರುವ ವಿಡಿಯೊ ಹರಿದಾಡಿದೆ.

ಪೋಕ್ಸೊ ಸಂತ್ರಸ್ತೆ ಮೇಲೆ ಲೈಂಗಿಕ ದೌರ್ಜನ್ಯ

ಗದಗ: ಪೋಕ್ಸೊ ಸಂತ್ರಸ್ತೆಯಾಗಿ ನಗರದ ಬಾಲಕಿಯರ ಸರ್ಕಾರಿ ಬಾಲ ಮಂದಿರದಲ್ಲಿ ರಕ್ಷಣೆಯಲ್ಲಿದ್ದ 16 ವರ್ಷದ ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದು, ಈ ಸಂಬಂಧ ಗದಗ ಮಹಿಳಾ ಪೊಲೀಸ್ ಠಾಣೆಯಲ್ಲಿ ಆ.26ರಂದು ಪ್ರಕರಣ ದಾಖಲಾಗಿದೆ.

‘ಐದು ವರ್ಷಗಳಿಂದ ಸರ್ಕಾರಿ ಬಾಲ ಮಂದಿರದಲ್ಲಿದ್ದ ಬಾಲಕಿಯನ್ನು ಆಕೆಯ ತಂದೆ ಆಗಾಗ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಅದೇ ರೀತಿಯಾಗಿ, ಆ.17ರಂದು ಬಂದಿದ್ದ ತಂದೆ ಆಕೆಯನ್ನು ಮನೆಗೆ ಕರೆದುಕೊಂಡು ಹೋಗಿದ್ದರು. ಮರಳಿ ಬಂದ ಮೇಲೆ ಬಾಲಮಂದಿರದ ಅಧೀಕ್ಷಕಿ ಬಾಲಕಿಯನ್ನು ವಿಚಾರಿಸಿ, ಸಮಾಲೋಚನೆ ನಡೆಸಿದ ನಂತರ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ತಿಳಿದು ಬಂದಿದೆ’ ಎಂದು ಜಿಲ್ಲಾ ಮಕ್ಕಳಾ ರಕ್ಷಣಾಧಿಕಾರಿ ರಾಧಾ ಮಣ್ಣೂರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಖಿನ್ನತೆಗೆ ಒಳಗಾಗಿದ್ದ ಆಕೆಗೆ ನಿಯಮಿತವಾಗಿ ಮನೋವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಬಾಲಕಿಯನ್ನು ಆಕೆಯ ತಂದೆಯೊಂದಿಗೆ ಆಗಾಗ ಕಳಿಸಿಕೊಡಲಾಗುತ್ತಿತ್ತು. ನಾಲ್ಕು ತಿಂಗಳಲ್ಲಿ ನಾಲ್ಕು ಬಾರಿ ಮಗಳನ್ನು ತಂದೆ ತನ್ನ ಜತೆಗೆ ಕರೆದುಕೊಂಡು ಹೋಗಿದ್ದಾರೆ’ ಎಂದು ತಿಳಿಸಿದರು.

‘ತಂದೆಗೆ ಪರಿಚಯವಿರುವ ವ್ಯಕ್ತಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಈ ಹಿಂದೆ ತಂದೆ ಜತೆಗೆ ಮನೆಗೆ ಹೋಗಿದ್ದ ಸಂದರ್ಭದಲ್ಲೂ ಆ ವ್ಯಕ್ತಿಯೇ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ ಸಂತ್ರಸ್ತ ಬಾಲಕಿ ತಿಳಿಸಿದ್ದಾಳೆ. ಅದರಂತೆ, ಹಾಸ್ಟೆಲ್‌ನ ಅಧೀಕ್ಷಕಿ ತಕ್ಷಣವೇ ಮೇಲಧಿಕಾರಿಗಳಿಗೆ ವಿಷಯ ತಿಳಿಸಿ, ಪ್ರಕರಣ ದಾಖಲಿಸಿದ್ದಾರೆ’ ಎಂದು ಅವರು ತಿಳಿಸಿದರು. ಈ ಸಂಬಂಧ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೇಂದ್ರ ಅನುದಾನ ಶೂನ್ಯ

ಒಂದನೇ ಪುಟದಿಂದ...

ಈಗಾಗಲೇ ಕೆಲವು ಇಲಾಖೆಗಳು ಅನುದಾನ ಬಿಡುಗಡೆಗೆ ಪ್ರಸ್ತಾವನೆಗಳನ್ನು ಕಳುಹಿಸಿವೆ. ಜೊತೆಗೆ, ಈ ಹಿಂದಿನ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಬಳಕೆಯ ಪ್ರಮಾಣಪತ್ರಗಳನ್ನೂ ನೀಡಿವೆ. ಅದನ್ನು ಸಂಬಂಧಿಸಿದ ಸಚಿವಾಲಯಗಳಿಗೆ ಸಲ್ಲಿಸಲಾಗಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು, ಕೇಂದ್ರದಿಂದ ಅನುದಾನ ಬಿಡುಗಡೆಗೆ ಅಗತ್ಯವಾದ ಎಲ್ಲ ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ.

‘ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ಬಿಡುಗಡೆಗೆ ಸಾಮಾನ್ಯವಾಗಿ ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ (ಏಪ್ರಿಲ್, ಮೇ) ಮನವಿ ಸಲ್ಲಿಸಲಾಗುತ್ತದೆ. ಮುಂದುವರಿದ ಕೆಲವು ಯೋಜನೆಗಳಿಗೆ ಕೇಂದ್ರ ಸರ್ಕಾರವೇ ಅನುದಾನ ನೀಡುತ್ತಿದೆ. ಆದರೆ, ರಾಜ್ಯದಲ್ಲಿ ಹೊಸ ಸರ್ಕಾರ (ಕಾಂಗ್ರೆಸ್) ಅಧಿಕಾರಕ್ಕೆ ಬಂದಿದೆ. ಕೆಲವು ಸಚಿವರು ಕೇಂದ್ರದ ಸಚಿವರನ್ನು, ಅಧಿಕಾರಿಗಳನ್ನು ಭೇಟಿ ಮಾಡಿ ಅನುದಾನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

370ನೇ ವಿಧಿ: ಎನ್‌ಸಿ ನಾಯಕ ಲೋನ್ ಅರ್ಹತೆ ಪ್ರಶ್ನಿಸಿ ಅರ್ಜಿ

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮೊಹಮ್ಮದ್ ಅಕ್ಬರ್ ಲೋನ್ ಪ್ರತ್ಯೇಕತಾವಾದಿಗಳ ಬೆಂಬಲಿಗರಾಗಿದ್ದು, ಸಂವಿಧಾನದ 370ನೇ ವಿಧಿಯಡಿ ರಾಜ್ಯಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕೇಂದ್ರದ ನಿರ್ಧಾರವನ್ನು ಪ್ರಶ್ನಿಸಲು ಅವರಿಗಿರುವ ಅರ್ಹತೆ ಏನು ಎಂದು ಕಾಶ್ಮೀರಿ ಪಂಡಿತರ ಗುಂಪೊಂದು ಕೇಳಿದೆ.

ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್‌ನ ಐವರು ಸದಸ್ಯರ ನ್ಯಾಯಪೀಠದಲ್ಲಿ ಈ ಕುರಿತು ‘ರೂಟ್ಸ್ ಇನ್ ಕಾಶ್ಮೀರ್’ ಎಂಬ ಕಾಶ್ಮೀರಿ ಪಂಡಿತ ಯುವಕರ ಗುಂಪು ಅರ್ಜಿ ಸಲ್ಲಿಸಿದೆ.



‘ಕೆಲ ಪ್ರತ್ಯೇಕತಾವಾದಿ ಗುಂಪುಗಳನ್ನು ಲೋನ್ ಬೆಂಬಲಿಸುತ್ತಿದ್ದಾರೆ. ಈ ಗುಂಪು ಜಮ್ಮು–ಕಾಶ್ಮೀರದಲ್ಲಿ ಪಾಕಿಸ್ತಾನವನ್ನು ಬೆಂಬಲಿಸುತ್ತಿದೆ’ ಎಂದು ಗುಂಪು ಆರೋಪಿಸಿದೆ.

‘2002ರಿಂದ 2018ರ ವರೆಗೆ ಶಾಸಕರಾಗಿದ್ದ ಲೋನ್, ವಿಧಾನಸಭೆ ಕಲಾಪದ ವೇಳೆ ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಕೂಗಿದ್ದರು’ ಎಂದೂ ಆರೋಪಿಸಿರುವ ಗುಂಪು, ಹಲವು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಿದೆ.

‘ಪಾಕಿಸ್ತಾನ ಪರ ಘೋಷಣೆ ಕೂಗಿದ್ದನ್ನು ಪತ್ರಕರ್ತರ ಎದುರು ಒಪ್ಪಿಕೊಂಡಿದ್ದ ಲೋನ್, ಆ ಬಗ್ಗೆ ಕ್ಷಮೆ ಕೇಳುವುದಿಲ್ಲ ಎಂದಿದ್ದರು. ತಾವೊಬ್ಬ ಭಾರತೀಯ ಎಂದು ಗುರುತಿಸಿಕೊಳ್ಳಲು ಹಿಂದುಮುಂದು ನೋಡುತ್ತಾರೆ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸೋಮವಾರ ವಿಚಾರಣೆ ಮತ್ತೆ ಶುರುವಾಗಲಿದ್ದು, ಲೋನ್ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಜರಾಗುವರು.

ಮಹೇಶ ಜೋಶಿ ವಿರುದ್ಧ ಅಸಮಾಧಾನ

ಕಸಾಪ ಬೈಲಾ ತಿದ್ದುಪಡಿಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕಗಳ ನಾಮನಿರ್ದೇಶನ ಸದಸ್ಯರ ನೇಮಕಕ್ಕೆ ಸಂಬಂಧಿಸಿ ಬೈಲಾ ತಿದ್ದುಪಡಿಗೆ ಬೆಂಗಳೂರು ನಗರ ಜಿಲ್ಲಾ ಘಟಕದ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಬೇಲೂರು ತಾಲ್ಲೂಕಿನ ಪುಷ್ಪಗಿರಿ ಮಠದಲ್ಲಿ ಭಾನುವಾರ ನಡೆದ ಪರಿಷತ್ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಕೇಂದ್ರ ಸಮಿತಿ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಪದಾಧಿಕಾರಿಗಳು, ಸಭೆಯಿಂದ ಹೊರನಡೆದರು.


‘ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿ ನಾಮನಿರ್ದೇಶನ ಸದಸ್ಯರ ಪಟ್ಟಿ ಕೇಂದ್ರ ಸಮಿತಿಗೆ ಕಳುಹಿಸುವಲ್ಲಿ ಜಿಲ್ಲಾ ಘಟಕಗಳ ಅಧ್ಯಕ್ಷರು ವಿಫಲರಾದರೆ, ಕೇಂದ್ರ ಸಮಿತಿ ಅಧ್ಯಕ್ಷರೇ ಸ್ವಯಂ ನಿರ್ಣಯ ಕೈಗೊಂಡು ನಾಮನಿರ್ದೇಶನ ಮಾಡಲು ನಿಯಮಾವಳಿ ತಿದ್ದುಪಡಿ ತರಲಾಗುತ್ತಿದೆ. ಇದು ಜಿಲ್ಲಾ ಘಟಕಗಳ ಅಧಿಕಾರ ಮೊಟಕುಗೊಳಿಸುವ ಹುನ್ನಾರ’ ಎಂದು ಆರೋಪಿಸಿದರು.

ಬೆಂಗಳೂರು ಘಟಕದ ಗೌರವ ಕಾರ್ಯದರ್ಶಿ ಹಂ.ಗು. ರಾಜೇಶ್ ಮಾತನಾಡಿ, ‘ಪರಿಷತ್ತಿನ 108 ವರ್ಷಗಳ ಇತಿಹಾಸದಲ್ಲಿ 2021ರವರೆಗೆ 6 ಬಾರಿ ಬೈಲಾ ತಿದ್ದುಪಡಿ ಮಾಡಲಾಗಿದೆ. ಆದರೆ, ಈ ಅವಧಿ ಪೂರ್ಣಗೊಳ್ಳುವ ಎರಡು ವರ್ಷಕ್ಕೂ ಮೊದಲೇ 2ನೇ ಬಾರಿ ಬೈಲಾ ತಿದ್ದುಪಡಿ ಮಾಡಲು ಜೋಶಿ ಹೊರಟಿದ್ದಾರೆ. ಮೊದಲ ತಿದ್ದುಪಡಿಯೇ ಕ್ರಮಬದ್ಧವಾಗಿಲ್ಲ. ಅದು ಕೋರ್ಟ್‌ನಲ್ಲಿರುವಾಗ ಜಿಲ್ಲಾ ಘಟಕಗಳ ಅಧ್ಯಕ್ಷರು ನಾಮ ನಿರ್ದೇಶನ ಸದಸ್ಯರನ್ನು ಯಾವ ಬೈಲಾದ ಆಧಾರದಲ್ಲಿ ನೇಮಿಸಬೇಕೆಂಬ ಗೊಂದಲವಿದೆ. ಹೀಗಿರುವಾಗ, 2ನೇ ತಿದ್ದುಪಡಿ ಮಾಡುವ ಅಗತ್ಯವೇನಿತ್ತು’ ಎಂದು ಪ್ರಶ್ನಿಸಿದರು.

‘ಕಾರ್ಯಕಾರಿ ಸಮಿತಿಯಲ್ಲಿ ತಿದ್ದು ಪಡಿ ವಿಷಯ ಸ್ಥಿರೀಕರಣಗೊಳ್ಳುವ ಮುನ್ನವೇ ವಿಶೇಷ ಸಾಮಾನ್ಯ ಸಭೆಯ ಮುಂದೆ ತಂದು ಕ್ರಿಯಾಲೋಪ ಎಸಗಿದ್ದಾರೆ. ಈ ಸಭೆಯಲ್ಲಿ ಚರ್ಚೆಗೆ ಅವಕಾಶ ನೀಡದೇ ಅನುಮೋದನೆಯಾಗಿದೆ ಎಂದು ಘೋಷಿಸಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ಜೋಶಿಯವರ ಸರ್ವಾಧಿಕಾರಿ ಧೋರಣೆಯ ವಿರುದ್ಧ ಹಾಗೂ ಪರಿಷತ್ತಿನ ಉಳಿವಿಗೆ ಹೋರಾಟದ ಅಗತ್ಯವಿದೆ’ ಎಂದರು.

ಮತ್ತೊಬ್ಬ ಗೌರವ ಕಾರ್ಯದರ್ಶಿ ಎಲ್. ಹರ್ಷ ಮಾತನಾಡಿ, ‘ಸದಸ್ಯರು ಬರಲಾಗದಷ್ಟು ದೂರದಲ್ಲಿರುವ ಪುಷ್ಪಗಿರಿಯಲ್ಲಿ ಸಭೆ ನಡೆಸುತ್ತಿದ್ದಾರೆ. 4.5 ಲಕ್ಷ ಸದಸ್ಯರಿರುವ ಸಾಹಿತ್ಯ ಪರಿಷತ್ತಿನ ವಿಶೇಷ ಸಾಮಾನ್ಯ ಸಭೆಗೆ ಬಂದಿರುವವರ ಸಂಖ್ಯೆ 250ರಿಂದ 300 ಮಾತ್ರ. ಸದಸ್ಯರಿಗೆ ಸರಿಯಾದ ಮಾಹಿತಿ ಇಲ್ಲ. ಗುಪ್ತ ಸಭೆಯಲ್ಲಿ ಸದಸ್ಯರನ್ನು ಕತ್ತಲೆಯಲ್ಲಿಟ್ಟು ತಮಗೆ ಬೇಕಾದ ರೀತಿಯಲ್ಲಿ ಜೋಶಿ ಅವರು ಬೈಲಾ ತಿದ್ದುಪಡಿ ಮಾಡಿಕೊಳ್ಳಲು ಹೊರಟಿದ್ದಾರೆ’ ಎಂದು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಮಹೇಶ ಜೋಶಿ, ‘ಪರಿಷತ್ತು ಆರಂಭವಾದಾಗ ಆನ್‌ಲೈನ್ ಇರಲಿಲ್ಲ. ಈ ಬದಲಾವಣೆಗೆ ಹೊಂದಿಕೊಂಡು ಸಾಗಬೇಕು. ತಿದ್ದು ಪಡಿ ಅನಿವಾರ್ಯ. ಏಕ ಧ್ವನಿಯಲ್ಲಿ ನಿರ್ಣಯ ಆಗಿದೆ. 3 ಸದಸ್ಯರು ಮಾತ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ’ ಎಂದರು.




ಸುಭಾಷಿತ

ಯಶಸ್ವಿ ಮನುಷ್ಯನಾಗಬೇಕೆಂಬ ಪ್ರಯತ್ನಕ್ಕಿಂತ, ಮೌಲ್ಯಯುತ ವ್ಯಕ್ತಿಯಾಗಬೇಕೆಂಬ ದಿಸೆಯಲ್ಲಿನ ಹೋರಾಟ ಅರ್ಥಪೂರ್ಣ.

– ಆಲ್ಬರ್ಟ್ ಐನ್‌ಸ್ಟೀನ್

ವಿದ್ಯುತ್ ಕೊರತೆ ನಿವಾರಣೆಗೆ ತುರ್ತು ಕ್ರಮ ಅಗತ್ಯ

ರಾಜ್ಯದಲ್ಲಿ ಮುಂಗಾರು ಬಹುತೇಕ ವಿಫಲವಾಗಿದೆ. ರಾಜ್ಯದ ಬಹುಭಾಗವನ್ನು ಬರ ಆವರಿಸುವ ಲಕ್ಷಣಗಳಿವೆ. ಮಳೆಗಾಲದಲ್ಲೇ ರಾಜ್ಯದಲ್ಲಿ ವಿದ್ಯುತ್ ಅಭಾವ ತಲೆದೋರಿದೆ. ಮಳೆಯ ಕೊರತೆಯಿಂದಾಗಿ ರಾಜ್ಯದಾದ್ಯಂತ ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆ ಎದುರಾಗಿದೆ. ಬೇಸಿಗೆಯ ದಿನಗಳಲ್ಲಿ ಬಳಕೆಯಾಗುತ್ತಿದ್ದಷ್ಟು ವಿದ್ಯುತ್ ಈಗ ಮಳೆಗಾಲದಲ್ಲೇ ಬಳಕೆಯಾಗುತ್ತಿದೆ. ಪರಿಣಾಮವಾಗಿ, ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ಮತ್ತು ಬೇಡಿಕೆಯ ಮಧ್ಯೆ ಭಾರಿ ಅಂತರ ಉಂಟಾಗಿದೆ. ಸಾಮಾನ್ಯವಾಗಿ ಫೆಬ್ರುವರಿಯಿಂದ ವಿದ್ಯುತ್‌ಗೆ ಬೇಡಿಕೆ ಹೆಚ್ಚುತ್ತಿತ್ತು. ಆದರೆ, ಈ ಬಾರಿ ಆಗಸ್ಟ್‌ನಲ್ಲೇ ಫೆಬ್ರುವರಿ ತಿಂಗಳ ಬೇಡಿಕೆಗೆ ಸರಿಸಮನಾದ ಬೇಡಿಕೆ ಸೃಷ್ಟಿಯಾಗಿದೆ. ಆಗಸ್ಟ್ ಕೊನೆಯ ವಾರದಲ್ಲಿ ಬೇಸಿಗೆಯ ದಿನಗಳಲ್ಲಿನ ಬೇಡಿಕೆಗಿಂತಲೂ ಹೆಚ್ಚಿನ ವಿದ್ಯುತ್‌ಗೆ ಬೇಡಿಕೆ ಬಂದಿರುವುದು ದಾಖಲಾಗಿದೆ. ಇಂಧನ ಇಲಾಖೆಯೇ ನೀಡಿರುವ ಮಾಹಿತಿ ಪ್ರಕಾರ, ರಾಜ್ಯದಲ್ಲಿ ದಿನವೊಂದಕ್ಕೆ 9,000 ಮೆಗಾವಾಟ್‌ನಿಂದ 11,000 ಮೆಗಾವಾಟ್‌ಗಳಷ್ಟು ವಿದ್ಯುತ್ ಮಾತ್ರ ಉತ್ಪಾದನೆಯಾಗುತ್ತಿದೆ. ಆದರೆ, ಬೇಡಿಕೆಯ ಪ್ರಮಾಣ ಸರಾಸರಿ ದಿನಕ್ಕೆ 16,000 ಮೆಗಾವಾಟ್‌ಗಿಂತಲೂ ಹೆಚ್ಚಿದೆ. ಆಗಸ್ಟ್ 30ರಂದು 16,932 ಮೆಗಾವಾಟ್ ವಿದ್ಯುತ್ ಬಳಕೆಯಾಗಿದೆ. ಇದು ಪರಿಸ್ಥಿತಿಯು ಇನ್ನಷ್ಟು ಜಟಿಲವಾಗುವ ಮುನ್ಸೂಚನೆ ನೀಡುತ್ತಿದೆ. ಬಿತ್ತಿರುವ ಬೆಳೆಯನ್ನು ಉಳಿಸಿಕೊಳ್ಳಲು ರೈತರು ನೀರಾವರಿ ಪಂಪ್‌ಸೆಟ್‌ಗಳ ಮೊರೆ ಹೋಗಿದ್ದಾರೆ. ಇದರಿಂದಾಗಿ ವಿದ್ಯುತ್ ಬೇಡಿಕೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ‘ಗೃಹ ಜ್ಯೋತಿ’ ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ಒದಗಿಸಿರುವ ಯೋಜನೆಯೂ ಬೇಡಿಕೆ ತುಸು ಹೆಚ್ಚಲು ಕಾರಣ ಆಗಿರಬಹುದು. ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳಿಂದ ಹಿಂದೆಂದಿಗಿಂತಲೂ ಹೆಚ್ಚಿನ ಬೇಡಿಕೆ ಬರುತ್ತಿದೆ. ಮುಂಗಾರು ಮಳೆ ಈ ಪ್ರಮಾಣದಲ್ಲಿ ಕೊರತೆಯಾಗಬಹುದು ಎಂಬ ನಿರೀಕ್ಷೆ ರಾಜ್ಯ ಸರ್ಕಾರಕ್ಕೆ ಇರಲಿಲ್ಲ. ಹೀಗಾಗಿ ವಿದ್ಯುತ್ ಅಭಾವ ಈ ಮಟ್ಟಿಗೆ ಎದುರಾಗುವುದನ್ನು ಇಂಧನ ಇಲಾಖೆಯೂ ಊಹಿಸಿರಲಿಲ್ಲ. ವಿದ್ಯುತ್ ಕೊರತೆಯನ್ನು ಸರಿದೂಗಿಸಲು ಸಿದ್ಧತೆ ಮಾಡಿಕೊಂಡಿರದ ಕಾರಣ ಈಗ ಬಿಕ್ಕಟ್ಟಿನ ಪರಿಸ್ಥಿತಿ ದಿಢೀರ್ ನಿರ್ಮಾಣವಾಗಿದೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಅನಿಯಮಿತ ಲೋಡ್‌ಶೆಡ್ಡಿಂಗ್ ಜಾರಿಯಲ್ಲಿದೆ. ಅದು ಇನ್ನಷ್ಟು ಹೆಚ್ಚುವ ಸಾಧ್ಯತೆಯೂ ಇದೆ.



ಯಾವ ವಲಯಕ್ಕೂ ತೊಂದರೆಯಾಗದಂತಹ ಸಂಕಷ್ಟ ಪರಿಹಾರ ಸೂತ್ರವೊಂದನ್ನು ರೂಪಿಸಿ, ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆ ತರುವ ಹೊಣೆಗಾರಿಕೆ ಇಂಧನ ಇಲಾಖೆಯ ಮೇಲಿದೆ

ಇಂಧನ ಇಲಾಖೆಯ ಅಧಿಕೃತ ಅಂಕಿಅಂಶಗಳ ಪ್ರಕಾರ, ವಿವಿಧ ಮೂಲಗಳಿಂದ ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 31,669 ಮೆಗಾವಾಟ್. ಆದರೆ, ಅದರ ಅರ್ಧದಷ್ಟೂ ಈಗ ಉತ್ಪಾದನೆ ಆಗುತ್ತಿಲ್ಲ. ಮಳೆಯ ಕೊರತೆಯಿಂದಾಗಿ ಹೆಚ್ಚಿನ ಜಲಾಶಯಗಳು ಭರ್ತಿಯಾಗಿಲ್ಲ. ಹೀಗಾಗಿ ಜಲ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಅವಕಾಶಗಳು ತೀರಾ ವಿರಳ. ಕಲ್ಲಿದ್ದಲಿನ ಕೊರತೆಯಿಂದ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲೂ ಉತ್ಪಾದನೆ ಕುಂಠಿತವಾಗಿದೆ. ಕಲ್ಲಿದ್ದಲು ದಾಸ್ತಾನು ಕೂಡ ಕಡಿಮೆ ಇದೆ. ಸೌರಶಕ್ತಿ, ಪವನ ವಿದ್ಯುತ್ ಮೂಲಗಳಿಂದ 13,000 ಮೆಗಾವಾಟ್‌ಗೂ ಹೆಚ್ಚು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯದ ಘಟಕಗಳು ರಾಜ್ಯದಲ್ಲಿವೆ. ಈ ಮೂಲಗಳಿಂದ ಅತ್ಯಂತ ಕಡಿಮೆ ಪ್ರಮಾಣದ ಉತ್ಪಾದನೆ ಆಗುತ್ತಿರುವುದು ಕೂಡ ವಿದ್ಯುತ್ ಕೊರತೆಯ ಸಮಸ್ಯೆ ಬಿಗಡಾಯಿಸಲು ಪ್ರಮುಖ ಕಾರಣ. ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಮಳೆ ಕೊರತೆ ಇರುವುದರಿಂದ ಕೇಂದ್ರೀಯ ವಿದ್ಯುತ್ ವಿತರಣಾ ಜಾಲದಿಂದಲೂ ನಿರೀಕ್ಷೆಯಷ್ಟು ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಅಲ್ಲಿನ ಬಹುತೇಕ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ವಾರ್ಷಿಕ ನಿರ್ವಹಣಾ ಕೆಲಸಗಳಿಗಾಗಿ ಸ್ಥಗಿತಗೊಳಿಸಿರುವುದೂ ಕೇಂದ್ರೀಯ ವಿದ್ಯುತ್ ವಿತರಣಾ ಜಾಲದಿಂದ ಪೂರೈಕೆ ಕುಸಿಯಲು ಕಾರಣ. ನೆರೆರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣದಲ್ಲೂ ವಿದ್ಯುತ್ ಕೊರತೆ ತೀವ್ರವಾಗಿದೆ. ಹೀಗಾಗಿ ತಕ್ಷಣಕ್ಕೆ ಬೇಡಿಕೆಯಷ್ಟು ವಿದ್ಯುತ್ ಪೂರೈಸಲಾಗದಂತಹ ಬಿಕ್ಕಟ್ಟಿನ ಸ್ಥಿತಿ ರಾಜ್ಯದ ಇಂಧನ ಇಲಾಖೆಗೆ ಎದುರಾಗಿದೆ. ಈಗ ಪ್ರತಿದಿನ ಸರಾಸರಿ 5,000 ಮೆಗಾವಾಟ್‌ನಷ್ಟು ವಿದ್ಯುತ್ ಖರೀದಿಸಲಾಗುತ್ತಿದೆ. ಇದಕ್ಕಾಗಿ ರಾಜ್ಯ ಸರ್ಕಾರ ನಿತ್ಯವೂ ₹ 40 ಕೋಟಿಯಿಂದ ₹ 50 ಕೋಟಿಯಷ್ಟು ವೆಚ್ಚ ಮಾಡುತ್ತಿದೆ. ಇನ್ನಾದರೂ ಮುಂಗಾರು ಮಳೆ ಬಿರುಸಾಗಿ, ರಾಜ್ಯದ ಜಲಮೂಲಗಳು ಭರ್ತಿಯಾಗದೇ ಇದ್ದರೆ ಪರಿಸ್ಥಿತಿ ಭೀಕರವಾಗಲಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮಳೆಯ ನಿರೀಕ್ಷೆಯ ಜತೆಯಲ್ಲೇ ವಿದ್ಯುತ್ ಕೊರತೆ ನೀಗಲು ಇಂಧನ ಇಲಾಖೆಯು ಸಮರೋಪಾದಿಯಲ್ಲಿ ಕೆಲಸ ಮಾಡಬೇಕಿದೆ. ಅಸಾಂಪ್ರದಾಯಿಕ ಮೂಲಗಳಿಂದ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶಗಳಿವೆ. ಸೌರ ವಿದ್ಯುತ್, ಪವನ ವಿದ್ಯುತ್ ಸೇರಿದಂತೆ ಎಲ್ಲ ಅಸಾಂಪ್ರದಾಯಿಕ ಮೂಲಗಳನ್ನು ಸಮರ್ಪಕವಾಗಿ ಬಳಕೆ ಮಾಡುವುದಕ್ಕೆ ಕ್ರಿಯಾಯೋಜನೆಯನ್ನು ತುರ್ತಾಗಿ ಸಿದ್ಧಪಡಿಸಿ, ಕಾರ್ಯರೂಪಕ್ಕೆ ತರಬೇಕು. ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹೊರೆಯಾಗದ ರೀತಿಯಲ್ಲಿ ವಿದ್ಯುತ್ ಖರೀದಿಯ ಮೂಲಗಳನ್ನು ಗುರುತಿಸಿ, ಲಭ್ಯತೆಯನ್ನು ಖಾತರಿಪಡಿಸಿಕೊಳ್ಳಬೇಕು. ಸೌರ ವಿದ್ಯುತ್ ಮತ್ತು ಪವನ ವಿದ್ಯುತ್ ಉತ್ಪಾದನೆ ಕುಂಠಿತವಾಗಲು ಕಾರಣವಾದ ಅಂಶಗಳನ್ನು ಗುರುತಿಸಿ, ಲೋಪ ಸರಿಪಡಿಸಬೇಕು. ಆ ಮೂಲಕ ಸ್ವಂತ ಮೂಲದಲ್ಲೇ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಮುಂದಾಗಬೇಕು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಂದಾಜಿನ ಪ್ರಕಾರ, ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಶೇಕಡ 12.95ರಷ್ಟು ವಿದ್ಯುತ್ ಪ್ರಸರಣ ಮತ್ತು ವಿತರಣಾ ಹಂತದಲ್ಲಿ ನಷ್ಟವಾಗುತ್ತಿದೆ. ಈ ಸೋರಿಕೆ ತಡೆಗೆ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ರೈತರು, ಕೈಗಾರಿಕೋದ್ಯಮಿಗಳು, ಗೃಹ ಬಳಕೆದಾರರು ಸೇರಿದಂತೆ ಯಾವ ವಲಯಕ್ಕೂ ತೊಂದರೆಯಾಗದಂತಹ ಸಂಕಷ್ಟ ಪರಿಹಾರ ಸೂತ್ರವೊಂದನ್ನು ರೂಪಿಸಿ, ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆ ತರುವ ಹೊಣೆಗಾರಿಕೆ ಇಂಧನ ಇಲಾಖೆಯ ಮೇಲಿದೆ.

ದಿನದ ಟ್ವೀಟ್

ಎಲ್ಲವೂ ಅಧಿಕಾರಕ್ಕಾಗಿ...



1. ಸನಾತನ ಧರ್ಮವನ್ನು ನಾನು ರಕ್ಷಿಸುತ್ತೇನೆ. 2. ಸನಾತನ ಧರ್ಮವನ್ನು ನಾನು ನಾಶಪಡಿಸುತ್ತೇನೆ. ಈ ಎರಡೂ ಹೇಳಿಕೆಗಳು ಅಧಿಕಾರಕ್ಕೆ ಹಾತೊರೆಯುವುದನ್ನು ತೋರಿಸುತ್ತವೆ.

ದೇವದತ್ತ ಪಟ್ಟನಾಯಕ, ಲೇಖಕ

ಕಿಡಿನುಡಿ



ಕಾಂಗ್ರೆಸ್‌ನವರು ಕೆಲವರಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಅವರ ತಂತ್ರ ವಿಫಲವಾಗುತ್ತದೆ. ರಾಜಕೀಯದಲ್ಲಿ ಪರಸ್ಪರ ಪರಿಚಯ ಇರುತ್ತದೆ, ಸ್ನೇಹವೂ ಇರುತ್ತದೆ. ವಿರೋಧ ಪಕ್ಷದವರು ಮುಖ್ಯಮಂತ್ರಿ, ಡಿಸಿಎಂ ಅವರನ್ನು ಭೇಟಿ ಮಾಡಬೇಕಾಗುತ್ತದೆ. ಇಂತಹ ಭೇಟಿಗಳಿಗೆಲ್ಲ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ.

ಡಾ. ಸಿ.ಎನ್.ಅಶ್ವತ್ಥನಾರಾಯಣ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 4-9-1998

- **ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಮಂಡೇಲಾಗೆ ಅಟಲ್ ಮಾರುತ್ತರ**

ದರ್ಬಾನ್, ಸೆ. 3 (ಪಿಟಿಐ)– ಪಾಕಿಸ್ತಾನದ ಜತೆಗಿನ ಭಿನ್ನಾಭಿಪ್ರಾಯ ಪರಿಹಾರಕ್ಕೆ ಮೂರನೆಯವರ ಮಧ್ಯಸ್ಥಿಕೆ ಸಾಧ್ಯತೆಯನ್ನು ಇಂದು ತಳ್ಳಿಹಾಕಿರುವ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ‘ಗಡಿಯಾಚೆಯಿಂದ ನಡೆಯುತ್ತಿರುವ ಭಯೋತ್ಪಾದನೆ ಜಮ್ಮು ಮತ್ತು ಕಾಶ್ಮೀರದಲ್ಲಿನ ನಿಜವಾದ ಸಮಸ್ಯೆ’ ಎಂದು ಪ್ರತಿಪಾದಿಸಿದರು.

ಅಲಿಪ್ತ ಚಳವಳಿಯ 12ನೇ ಶೃಂಗಸಭೆಯ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರು ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಅಲಿಪ್ತ ಚಳವಳಿಯ ‘ಸಾಮರ್ಥ್ಯ’ ನೀಡುವುದಾಗಿ ಪ್ರಕಟಿಸಿದ 24 ಗಂಟೆಯೊಳಗೆ ವಾಜಪೇಯಿ ಅವರು ಪ್ರತಿಕ್ರಿಯಿಸಿದ್ದಾರೆ.

- **ರಾಜ್ಯದಲ್ಲಿ ಮತ್ತೆ 20 ಹೊಸ ವೈದ್ಯ ಕಾಲೇಜುಗಳಿಗೆ ಅಸ್ತು**

ಬೆಂಗಳೂರು, ಸೆ. 3– ರಾಜ್ಯದಲ್ಲಿ ಹೊಸದಾಗಿ ಇಪ್ಪತ್ತು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಒಪ್ಪಿಗೆ ನೀಡಿ, ಈ ಕಾಲೇಜುಗಳ ಹೆಸರುಗಳನ್ನು ಭಾರತೀಯ ವೈದ್ಯಕೀಯ ಮಂಡಳಿಯ ಅನುಮತಿಗಾಗಿ ಶಿಫಾರಸು ಮಾಡಿದೆ.

ಜಾತಿವಾರು ಹಾಗೂ ಜಿಲ್ಲಾವಾರು ಆಧಾರದ ಮೇಲೆ ಹೊಸ ವೈದ್ಯ ಕಾಲೇಜುಗಳ ಪ್ರಾರಂಭಕ್ಕೆ ಒಪ್ಪಿಗೆ ನೀಡಲಾಗಿದ್ದು, ಅದರಲ್ಲಿ ಎರಡು ಸರ್ಕಾರಿ ಕಾಲೇಜುಗಳು ಸೇರಿವೆ.

50 ವರ್ಷಗಳ ಹಿಂದೆ

ಮಂಗಳವಾರ, 4-9-1973

- **ಪಟ್ಟಭದ್ರ ಹಿತಾಸಕ್ತಿ ಬೆಳವಣಿಗೆಗೆ ಕತ್ತರಿ**

ಬೆಂಗಳೂರು, ಸೆ. 3– ವಿಧಾನಸಭೆ ಇಂದು ಅಂಗೀಕರಿಸಿದ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕವು ಶಾಸನವಾಗಿ ಬಂದ ಮೇಲೆ, ನಡೆಯಬಹುದಾದ ಯಾವುದೇ ಸಹಕಾರ ಸಂಘಗಳ ಚುನಾವಣೆಯಲ್ಲಿ ಈಗಿನ ಅಧಿಕಾರ ವರ್ಗದವರು ಮತ್ತೆ ಅದೇ ಸ್ಥಾನಗಳಿಗೆ ಸ್ಪರ್ಧಿಸುವುದನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ.

ವಿಧೇಯಕವನ್ನು ಮತಕ್ಕೆ ಹಾಕುವ ಘಟ್ಟದಲ್ಲಿ ಸಹಕಾರ ಸಚಿವ ಶ್ರೀ ಶಂಕರ ಆಳ್ವ ಅವರು ಮಂಡಿಸಿದ ಮರು ತಿದ್ದುಪಡಿಯು, ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಮ್ಯಾನೇಜಿಂಗ್ ಡೈರೆಕ್ಟರ್, ಖಜಾಂಚಿ ಅಥವಾ ಕಾರ್ಯದರ್ಶಿಯವರು ಆರು ವರ್ಷಗಳ ವಿರಾಮದ ನಂತರ ಮಾತ್ರವೇ ಅಂಥ ಅಧಿಕಾರ ಸ್ಥಾನಗಳಿಗೆ ಮತ್ತೆ ಸ್ಪರ್ಧಿಸಬಹುದೆಂದು ಸ್ಪಷ್ಟಪಡಿಸಿದೆ.

ಬಳಕೆದಾರರಿಗೆ ಸೇರಬೇಕಾದ ಹಣ ಎಲ್ಲಿಗೆ ಹೋಗುತ್ತಿದೆ?

ಹಣ ಮರೆಯುವ ಗ್ರಾಹಕರು!



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಬೀಗದ ಕೈ, ಚಾಕು, ಕತ್ತರಿ, ಮೊಬೈಲ್ ಫೋನ್, ಕ್ರೆಡಿಟ್–ಡೆಬಿಟ್ ಕಾರ್ಡ್ ಇಂತಹವುಗಳನ್ನೆಲ್ಲ ನೀವು ಎಲ್ಲೋ ಇಟ್ಟು ಮರೆಯುವುದು ಸಾಮಾನ್ಯ. ಆದರೆ ನೀವೋ ಅಥವಾ ನಿಮ್ಮ ಮನೆಯವರೋ ಕಷ್ಟಪಟ್ಟು ದುಡಿದ ಹಣವನ್ನು ಮರೆಯಲು ಸಾಧ್ಯವೇ? ಖಂಡಿತಾ ಇಲ್ಲ ಎಂದು ನೀವು ಹೇಳಬಹುದು. ಆದರೆ ಬ್ಯಾಂಕ್, ವಿಮೆ, ಭವಿಷ್ಯನಿಧಿ ಮತ್ತು ಕಂಪನಿಗಳಲ್ಲಿ ವಾರಸುದಾರರಿಲ್ಲದೆ ಉಳಿದುಕೊಂಡಿರುವ ಮೊತ್ತವನ್ನು ಗಮನಿಸಿದರೆ, ನಿಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕಾಗುತ್ತದೆ.

ಈ ಸಂಸ್ಥೆಗಳಲ್ಲಿ ಕ್ಲೇಮು ಮಾಡದಿರುವ ಮೊತ್ತ ₹ 51,500 ಕೋಟಿ ಎಂದು 2021ರ ಡಿಸೆಂಬರ್‌ನಲ್ಲಿ ಹಣಕಾಸು ಸಚಿವರು ಸಂಸತ್ತಿನಲ್ಲಿ ಬಹಿರಂಗಪಡಿಸಿದ್ದಾರೆ. ಇದರ ಮೇಲಿನ ಬಡ್ಡಿಯೂ ಸೇರಿದರೆ ಈ ಮೊತ್ತ ಸುಮಾರು ₹ 82,000 ಕೋಟಿ ಇರಬಹುದೆಂದು ಅಂದಾಜು ಮಾಡಲಾಗಿದೆ. ಈ ಹಣ ಸುಮಾರು 10.24 ಕೋಟಿ ಖಾತೆದಾರರಿಗೆ ಅಥವಾ ಹೂಡಿಕೆದಾರರಿಗೆ ಸೇರಿದ್ದು. ಇವರಲ್ಲಿ ನೀವೂ ಒಬ್ಬರಾಗಿರಬಹುದು.

ಬಳಕೆದಾರರು ಇಷ್ಟೊಂದು ಹಣವನ್ನು ಮರೆಯಲು ಹೇಗೆ ಸಾಧ್ಯ? ಮನೆಯ ಹಿರಿಯರು ಅಥವಾ ಕುಟುಂಬದ ಸದಸ್ಯರು ತಮ್ಮ ಹಣದ ವ್ಯವಹಾರವನ್ನು ಇತರರಿಗೆ ತಿಳಿಸದೆ ನಿಧನರಾಗುವುದು, ದಾಖಲೆ ಕಾಣೆಯಾಗುವುದು, ಸಾಲ ಪಡೆಯಲು ಬ್ಯಾಂಕ್‌ನಲ್ಲಿ ಖಾತೆ ತೆರೆದು ನಂತರ ಅದನ್ನು ಚಾಲನೆಯಲ್ಲಿ ಇಡದಿರುವುದು, ಸಣ್ಣಪುಟ್ಟ ಮೊತ್ತವನ್ನು ಕಡೆಗಣಿಸುವುದು, ಮನೆ ಮತ್ತು ಉದ್ಯೋಗದಲ್ಲಿ ಬದಲಾವಣೆಯಂತಹ ಕಾರಣದಿಂದ ಬ್ಯಾಂಕ್ ಸಂಪರ್ಕ ಕಳೆದುಕೊಳ್ಳುವುದು ಇದಕ್ಕೆ ಕಾರಣ. ಕೆಲವೊಮ್ಮೆ ಹಳೆ ದಾಖಲೆ ದೊರಕಿದರೂ ಬ್ಯಾಂಕ್‌ಗಳು ಸುಲಭವಾಗಿ ಹಣ ಹಿಂತಿರುಗಿಸುವುದಿಲ್ಲ. ಹತ್ತಾರು ದಾಖಲೆ, ಪ್ರಮಾಣಪತ್ರ ಸಲ್ಲಿಸಬೇಕಾಗುತ್ತದೆ.

ಸರ್ಕಾರಿ ಕಚೇರಿಯಿಂದ ದಾಖಲೆ ಪಡೆಯುವುದಕ್ಕೆ ನೀಡಬೇಕಾದ ಲಂಚದ ಮೊತ್ತವೇ ಕೆಲವೊಮ್ಮೆ ತಮ್ಮ ಠೇವಣಿಗಿಂತ ಹೆಚ್ಚಾಗುವ ಸಂಭವ ಇರುವುದರಿಂದ ಬಹಳಷ್ಟು ಠೇವಣಿದಾರರು ಅದರ ಗೋಜಿಗೆ ಹೋಗುವುದಿಲ್ಲ. ಈ ಮೊತ್ತವು ಬಳಕೆದಾರರಿಗೆ ಸೇರಿದ್ದು. ಅದನ್ನು ಬ್ಯಾಂಕ್, ಎಲ್‌ಐಸಿ, ಭವಿಷ್ಯನಿಧಿ ಅಥವಾ ಕಂಪನಿಗಳು ತಮ್ಮ ಖರ್ಚುವೆಚ್ಚಕ್ಕೆ ಬಳಸಿಕೊಳ್ಳುವಂತಿಲ್ಲ. ಆದರೆ ಅದನ್ನು ಠೇವಣಿದಾರರಿಗೆ ಅಥವಾ ಅವರ ವಾರಸುದಾರರಿಗೆ ತಲುಪಿಸುವುದು ಹೇಗೆ?

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) 2014ರಲ್ಲಿ ‘ಡೆಫ್’ (ಡೆಪಾಸಿಟರ್ ಎಜುಕೇಷನ್ ಆ್ಯಂಡ್ ಅವೇರ್‌ನೆಸ್ ಫಂಡ್) ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಅನ್ವಯ, ಯಾವ ಖಾತೆ ಅಥವಾ ನಿಗದಿತ ಠೇವಣಿಯಂತಹವು 10 ವರ್ಷಕ್ಕಿಂತ ಹೆಚ್ಚು ಕಾಲ ಚಾಲ್ತಿಯಲ್ಲಿ ಇರುವುದಿಲ್ಲವೋ ಅದರ ಮೊತ್ತವನ್ನು ಬಡ್ಡಿ ಸಹಿತ ಡೆಫ್‌ಗೆ ವರ್ಗಾಯಿಸಬೇಕು. ಆರ್‌ಬಿಐನ 2021ನೇ ಸಾಲಿನ ವಾರ್ಷಿಕ ವರದಿಯ ಪ್ರಕಾರ, ಬ್ಯಾಂಕ್‌ಗಳಲ್ಲಿ ಕ್ಲೇಮು ಮಾಡದ ಮೊತ್ತ ₹ 39,264 ಕೋಟಿ ಇತ್ತು. ಮರುವರ್ಷ ಈ ಮೊತ್ತ ₹ 48,262 ಕೋಟಿಗೆ ಏರಿಕೆಯಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಹೋದ ವರ್ಷ ₹ 35,012 ಕೋಟಿ ಹಣವನ್ನು ಆರ್‌ಬಿಐಗೆ ವರ್ಗಾಯಿಸಿವೆ. ಈ ನಿಧಿಗೆ ಹಣವನ್ನು ವರ್ಗಾಯಿಸಿದಾಕ್ಷಣ ಅದನ್ನು ಠೇವಣಿದಾರರಿಗೆ ಹಿಂತಿರುಗಿಸಲಾಗದು ಎಂದರ್ಥವಲ್ಲ. ಅಕಸ್ಮಾತ್ ಠೇವಣಿದಾರರು ತಮ್ಮ ಖಾತೆಯಲ್ಲಿರುವ ಹಣವನ್ನು ವಾಪಸ್ ಪಡೆಯಬೇಕಿದ್ದರೆ ಸಂಬಂಧಪಟ್ಟ ಬ್ಯಾಂಕನ್ನು ಸಂಪರ್ಕಿಸಬಹುದು.

ಬ್ಯಾಂಕ್‌ಗಳಲ್ಲಿರುವ ಕ್ಲೇಮು ಮಾಡದ ಮೊತ್ತವನ್ನು ಸಂಬಂಧಪಟ್ಟ ಬಳಕೆದಾರರಿಗೆ ಹಿಂತಿರುಗಿಸುವ ಸಲುವಾಗಿ ಆರ್‌ಬಿಐ ಕೆಲವು ಕ್ರಮಗಳನ್ನು ಕೈಗೊಂಡಿದೆ. ಕೆಲವು ತಿಂಗಳ ಹಿಂದೆ ‘100 ಡೇಸ್ 100 ಪೇಸ್’ ಎಂಬ ಆಂದೋಲನವನ್ನು ಆರಂಭಿಸಿದೆ. ಈ ಯೋಜನೆಯ ಪ್ರಕಾರ, ದೇಶದ ಪ್ರತಿಯೊಂದು ಬ್ಯಾಂಕ್ ಜಿಲ್ಲಾ ಮಟ್ಟದಲ್ಲಿ ಅತಿ ದೊಡ್ಡ ಮೊತ್ತದ ಕ್ಲೇಮು ಮಾಡದ 100 ಠೇವಣಿಗಳ ವಾರಸುದಾರರನ್ನು ಗುರುತಿಸಿ ಅವನ್ನು 100 ದಿನಗಳೊಳಗೆ ಅವರಿಗೆ ತಲುಪಿಸಬೇಕು. ಹಿಂಡನ್‌ಬರ್ಗ್ ವರದಿಯ ಹಿನ್ನೆಲೆಯಲ್ಲಿ ಅದಾನಿ ಸಂಸ್ಥೆಯ ವ್ಯವಹಾರದ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಸಮಿತಿಯು ಕ್ಲೇಮು ಮಾಡದ ಆಸ್ತಿ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂದು 2023ರ ಮೇ ತಿಂಗಳಲ್ಲಿ ಸರ್ಕಾರಕ್ಕೆ ಸಲಹೆ ನೀಡಿತ್ತು. ಠೇವಣಿದಾರರು ತಮ್ಮ ಹಣವನ್ನು ಹಿಂಪಡೆಯಲು ಸುಲಭ ಮಾರ್ಗ ಜಾರಿಗೊಳಿಸಬೇಕೆಂದು ಸಹ ಸೂಚನೆ ನೀಡಿತ್ತು. ಈ ಕಾರಣದಿಂದ, ಆರ್‌ಬಿಐ ಇತ್ತೀಚೆಗೆ ಯುಡಿಜಿಎಎಮ್ (ಅನ್‌ಕ್ಲೇಮ್ಡ್ ಡೆಪಾಸಿಟ್ಸ್–ಗೇಟ್‌ವೇ ಟು ಆ್ಯಕ್ಸೆಸ್ ಇನ್‌ಫರ್ಮೇಷನ್) ಎಂಬ ವೆಬ್ ಪೋರ್ಟಲ್ ಸ್ಥಾಪಿಸಿದೆ. ಇದರಿಂದ ಸದ್ಯಕ್ಕೆ ಐದು ಬ್ಯಾಂಕ್‌ಗಳ ಠೇವಣಿದಾರರಿಗೆ ಅನುಕೂಲವಾಗಲಿದೆ. ಠೇವಣಿದಾರರು ತಾವು ಮರೆತಿರುವ ಹಣವನ್ನು ಸುಲಭವಾಗಿ ಹಿಂದಕ್ಕೆ ಪಡೆಯಬಹುದು.

ವಾರಸುದಾರರಿಲ್ಲದೆ ಕಂಪನಿಗಳ ಪುಸ್ತಕಗಳಲ್ಲಿ ಷೇರ್, ಮ್ಯೂಚುವಲ್ ಫಂಡ್, ಡಿವಿಡೆಂಡ್‌ನಂತಹ ಹಣ ಸಹ ಉಳಿದುಕೊಂಡಿದೆ. ಹೂಡಿಕೆದಾರರಿಗೆ ಸಲ್ಲಬೇಕಾದ ಈ ಹಣವನ್ನು ಅವರಿಗೆ ತಲುಪಿಸುವ ಸಲುವಾಗಿ ಕಂಪನೀಸ್ ಕಾಯ್ದೆ ಅಡಿಯಲ್ಲಿ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಯನ್ನು (ಐಇಪಿಎಫ್) 1994ರಲ್ಲಿ ಸ್ಥಾಪಿಸಲಾಗಿದೆ. ವಿವಿಧ ಕಂಪನಿಗಳು 2019- 20ರ ಸಾಲಿನಲ್ಲಿ ₹ 1,887 ಕೋಟಿ ಮೊತ್ತವನ್ನು ಈ ನಿಧಿಗೆ ವರ್ಗಾಯಿಸಿವೆ. 2022ರ ಮಾರ್ಚ್ ಅಂತ್ಯದ ವೇಳೆಗೆ ನಿಧಿಯಲ್ಲಿ ಕ್ಲೇಮು ಮಾಡದ ಡಿವಿಡೆಂಡ್ ಮತ್ತು ಷೇರುಗಳ ಮೊತ್ತ ₹ 18,433 ಕೋಟಿ. ವಾರಸುದಾರರಿಲ್ಲದ ಮೊತ್ತ ಎಲ್‌ಐಸಿಯಲ್ಲೂ ಇದೆ. 2020–21ರ ಅಂತ್ಯದಲ್ಲಿ ಎಲ್‌ಐಸಿ ಬಳಿ ಇದ್ದ ಕ್ಲೇಮು ಮಾಡದ ಮೊತ್ತ ₹ 25,000 ಕೋಟಿ.

ಈ ಸಂಸ್ಥೆಗಳಲ್ಲದೆ ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಪ್ರಾಧಿಕಾರ (ಎನ್‌ಪಿಪಿಎ) ಮತ್ತು ಎನ್‌ಎಎ (ನ್ಯಾಷನಲ್ ಆ್ಯಂಟಿ- ಪ್ರಾಫಿಟೀರಿಂಗ್ ಅಥಾರಿಟಿ) ಸಂಸ್ಥೆಗಳು ಸಂಗ್ರಹಿಸುವ ದಂಡದ ಮೊತ್ತವೂ ಬಹಳಷ್ಟಿದೆ. ಔಷಧ ತಯಾರಕರು ನಿಗದಿತ ಬೆಲೆಗಿಂತ ಅಧಿಕ ಬೆಲೆಗೆ ಔಷಧ ಮಾರಾಟ ಮಾಡಿದರೆಂಬ ಅಪರಾಧಕ್ಕೆ ಎನ್‌ಪಿಪಿಎ 2022ರ ಸೆಪ್ಟೆಂಬರ್‌ವರೆಗೆ ₹ 9,782 ಕೋಟಿ ಮೊತ್ತದ ದಂಡವನ್ನು ಸಂಗ್ರಹಿಸಿದೆ. ಡಿಟಿಎಚ್ ಸೇವೆ ನೀಡುತ್ತಿರುವ ಸಂಸ್ಥೆಯೊಂದರ ವಿರುದ್ಧ ಹೋದ ವರ್ಷ ಎನ್‌ಎಎ ದಂಡ ವಿಧಿಸಿತು. ಜಿಎಸ್‌ಟಿ ಪರಿಣಾಮವಾಗಿ ಸೇವೆಯ ಬೆಲೆ ಇಳಿಕೆಯಾಗಿದ್ದು, ಅದನ್ನು ಬಳಕೆದಾರರಿಗೆ ವರ್ಗಾಯಿಸದ ಕಾರಣ ಈ ಸಂಸ್ಥೆ ₹ 450 ಕೋಟಿಯನ್ನು ಕೇಂದ್ರ ಗ್ರಾಹಕ ಕಲ್ಯಾಣ ನಿಧಿಗೆ ಪಾವತಿಸಬೇಕೆಂದು ಆದೇಶ ನೀಡಿತ್ತು. ಅದೇ ರೀತಿ ಸೌಂದರ್ಯ ಸಾಮಗ್ರಿ ತಯಾರಿಕಾ ಸಂಸ್ಥೆಯೊಂದಕ್ಕೆ ₹ 186 ಕೋಟಿ ಪಾವತಿಸಬೇಕೆಂದು ಹೇಳಿತ್ತು.

ಕ್ಲೇಮು ಮಾಡದವರನ್ನು ಗುರುತಿಸುವುದು ಕಷ್ಟವಾಗಿರುವುದರಿಂದ ಒಂದಿಷ್ಟು ಹಣವನ್ನು ಕೇಂದ್ರ ಗ್ರಾಹಕ ಕಲ್ಯಾಣ ನಿಧಿಗೆ ವರ್ಗಾಯಿಸಲಾಗುತ್ತಿದೆ. ಕೇಂದ್ರ ಗ್ರಾಹಕ ಕಲ್ಯಾಣ ನಿಧಿ, ಡೆಪಾಸಿಟರ್ಸ್ ಎಜುಕೇಷನ್ ಆ್ಯಂಡ್ ಅವೇರ್‌ನೆಸ್ ಫಂಡ್, ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಯು ಬಳಕೆದಾರರಿಗೆ ಶಿಕ್ಷಣ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ನೋಂದಾಯಿತ ಸಂಘ ಸಂಸ್ಥೆಗಳಿಗೆ ಹಣ ನೀಡುವ ಉದ್ದೇಶ ಹೊಂದಿವೆ. ಆದರೆ ಕೊರೊನಾ ಬಂದಾಗ ಸ್ಥಗಿತಗೊಂಡ ಕೇಂದ್ರ ಗ್ರಾಹಕ ಕಲ್ಯಾಣ ನಿಧಿಯು ಇದುವರೆಗೆ ಗ್ರಾಹಕ ಸಂಘ ಸಂಸ್ಥೆಗಳಿಗೆ ಯಾವುದೇ ನೆರವು ನೀಡಿಲ್ಲ. ಇದರ ಫಲವಾಗಿ, ಬಳಕೆದಾರರಿಗೆ ಸೇರಬೇಕಾದ ಕೋಟ್ಯಂತರ ರೂಪಾಯಿ ಸರ್ಕಾರದ ಬಳಿ ಇದೆ.



ಚುರುಮುರಿ



ಸೂರ್ಯಂಗೇ ಟಾರ್ಚು!

• ಸುಮಂಗಲಾ

ಆದಿತ್ಯ-1 ಆಕಾಶದತ್ತ ಜಿಗಿದಿದ್ದನ್ನು ಕಣ್ತುಂಬಿಕೊಂಡ ಬೆಕ್ಕಣ್ಣ ಬಲು ಖುಷಿಯಲ್ಲಿತ್ತು.

‘ಚಂದ್ರಯಾನ ಸಕ್ಸಸ್ ಆತು… ಈಗ ಆದಿತ್ಯ ಮ್ಯಾಲೆ ಜಿಗಿದೈತಿ, ಅದು ಕಕ್ಷೆಗೆ ಸೇರಿತಂದರ ಸೂರ್ಯಯಾನನೂ ಸಕ್ಸಸ್ ಆದಂಗೇ ಲೆಕ್ಕ. ಮೋದಿಮಾಮಾ ಪ್ರಧಾನಿಯಾಗಿ ಒಂದು ದಶಕದಾಗೆ ಎಷ್ಟ್ ಎತ್ತರ ಜಿಗಿದೀವಿ ನೋಡು. ಒಂದೂವರೆ ದಶಲಕ್ಷ ಕಿ.ಮೀ. ಮ್ಯಾಗೆ ಹೋಗೂದು ಅಂದ್ರ ಸುಮ್ಮನೇ ಏನು. ನಾವು ಸೂರ್ಯಂಗೇ ಟಾರ್ಚು ಬಿಡತೀವಿ!’ ಎಂದು ಬೀಗಿತು.

‘ಅದೇ ನಾನು ಹೇಳದು… ಅಷ್ಟ್ ಮ್ಯಾಗೆ ಹಾರಿ, ಬಾಹ್ಯಾಕಾಶದಾಗೆ ಅಧ್ಯಯನ ಮಾಡೋ ತಂತ್ರಜ್ಞಾನ ನಮ್ಮ ಬೆರಳ ತುದಿಯಾಗೆ ಐತಿ ಈಗ. ಆದ್ರ ಸೆಪ್ಟಿಕ್ ಟ್ಯಾಂಕ್ ಸ್ವಚ್ಛ ಮಾಡಾಕೆ ಮಾತ್ರ ಈಗ್ಲೂ ಮನುಷ್ಯರನ್ನೇ ಕೆಳಗೆ ಇಳಸ್ತೀವಿ. ಒಂದೂವರೆ ದಶಲಕ್ಷ ಕಿ.ಮೀ. ಮೇಲೇರಿ ಸೂರ್ಯಂಗೇ ಟಾರ್ಚು ಬಿಡೋ ನಮಗೆ ಮಲದ ಗುಂಡಿವಳಗ ಟಾರ್ಚು ಬಿಡಾಕೆ ಎದಕ್ಕ ಆಗಂಗಿಲ್ಲ ಅಂತ’ ಎಂದು ನಾನು ಲೊಚಗುಟ್ಟಿದೆ.

‘ಹಿಂತಾ ಗುಂಡಿ ವಳಗ ಇಳಿಯೂ ಮಂದಿನೇ ಬ್ಯಾರೆ ಇರತಾರ. ಅದಕ್ಯಾಕೆ ತಂತ್ರಜ್ಞಾನ ಅಭಿವೃದ್ಧಿ ಮಾಡಬಕು? ನಿನಗರ ತಲಿನೇ ಇಲ್ಲ’ ಎಂದು ನನ್ನ ಮೂತಿಗೆ ತಿವಿದ ಬೆಕ್ಕಣ್ಣ ‘ಅದ್ಸರಿ, ಪ್ರಗ್ಯಾನ್ ಮತ್ತ ವಿಕ್ರಮ್ ಈಗ ನಿದ್ದಿ ಮಾಡಾಕೆ ಹತ್ಯಾವಲ್ಲ. ಅವು ಹದಿನಾಕು ದಿನ ಆದಮ್ಯಾಲೆ ಏಳಬೌದೇನು?’ ಎಂದು ಕೇಳಿತು.

‘ಚಂದ್ರನ ಮ್ಯಾಗೆ ಸೂರ್ಯೋದಯ ಆಗತಿದ್ದಂತೆ ಅವುಗಳ ಮ್ಯಾಗೆ ಬೆಳಕು ಬೀಳೂ ಹಂಗ ನಿಲ್ಲಿಸ್ಯಾರೆ, ಹಂಗಾಗಿ ಅವೆರಡೂ ಏಳಬೌದು. ಆದರೆ ಇಲ್ಲಿ ಭೂಮಿ ಮ್ಯಾಗೆ ಇಷ್ಟೆಲ್ಲ ಸಮಸ್ಯೆಗಳ ಬಗ್ಗೆ ಎಚ್ಚರನೇ ಇಲ್ಲದೆ, ನಮ್ಮ ರಾಜಕಾರಣಿಗಳು ನಿದ್ದಿ ಮಾಡಾಕೆ ಹತ್ಯಾರಲ್ಲ, ಅವ್ರನ್ನ ಹೆಂಗ ಎಬ್ಬಿಸೂದು?’

‘ಅದೊಂಥರಾ ಜಾಣನಿದ್ದೆ! ಆಪರೇಷನ್ ಕಮಲ, ಆಪರೇಷನ್ ಹಸ್ತ, ಪರ್ಸೆಂಟೇಜು, ಬಿಟ್‌ಕಾಯಿನ್ನು, ವರ್ಗಾವಣೆ ದಂಧೆ, ಹಿಂತಾ ಪದಗುಚ್ಛಗಳಿಗಷ್ಟೇ ಅವರನ್ನು ಎಬ್ಬಿಸೋ ತಾಕತ್ತು ಐತಿ’ ಎಂದು ಬೆಕ್ಕಣ್ಣ ಪದಗಳ ಪಟ್ಟಿ ಮುಂದಿಟ್ಟಿತು.

ಸಂಗತ

ಕಲಿಸಲು ‘ಅವಳೇ’ ಸರಿ!

ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಹಂತದಲ್ಲಿ ಮಗು ಶಾಲೆಗೆ ಖುಷಿಯಿಂದ ಬರುವಂತೆ ಆಗಬೇಕು. ಆಗ ಕಲಿಕೆಯ ಹಾದಿ ಸುಲಭವಾಗುತ್ತದೆ

• ಸದಾಶಿವ್ ಸೊರಟೂರು

ಖಾಸಗಿ ಪ್ರಾಥಮಿಕ ಶಾಲೆಯೊಂದರಲ್ಲಿ ಬೋಧಿಸಲು ಇತ್ತೀಚೆಗೆ ಬರೀ ಮಹಿಳೆಯರನ್ನೇ ನೇಮಕ ಮಾಡಿಕೊಂಡಿದ್ದು ತುಂಬಾ ಟೀಕೆಗೆ ಒಳಗಾಯಿತು. ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಹಂತದಲ್ಲಿ ಶಾಲೆ ಎಂದರೆ ಪಠ್ಯಕ್ರಮ, ಟೈಮ್ ಟೇಬಲ್, ಶಿಸ್ತು, ದೊಡ್ಡ ದೊಡ್ಡ ಪದಗಳು, ಪಾಠಗಳು ಖಂಡಿತ ಅಲ್ಲ. ಅದು ಮನೆಯ ಮುಂದುವರಿದ ಭಾಗವಷ್ಟೇ!

ಮನೆಯಲ್ಲಿ ಅಮ್ಮನ ಸೆರಗು ಹಿಡಿದು ಓಡಾಡಿಕೊಂಡಿದ್ದ ಮಗು ಶಾಲೆಯ ಅಂಗಳಕ್ಕೆ ಕಾಲಿಡುತ್ತಲೇ ಗಾಬರಿಯಾಗುತ್ತದೆ. ಅದು ಸಹಜ ಕೂಡ. ಅದರ ಮುಂದೆ ಮನೆಯಂಥದ್ದೇ ವಾತಾವರಣವನ್ನು ನೀಡಿದರೆ ಮಾತ್ರ ಮಗು ಅಲ್ಲಿ ಉಳಿಯಲು ಸಾಧ್ಯ. ನಾವು ಈ ವಿಚಾರವನ್ನು ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ. ಒಂದು, ಮಗುವಿನ ದೃಷ್ಟಿಯಿಂದ. ಮತ್ತೊಂದು, ಪಾಠ ಹೇಳಬೇಕಾದ ಶಿಕ್ಷಕಿಯ ದೃಷ್ಟಿಯಿಂದ. ಮಗುವಿಗೆ ತಾಯಿಯಂತೆ ಸಲಿಗೆಯಿಂದ, ಕಾಳಜಿಯಿಂದ ವರ್ತಿಸುವ, ಪ್ರೀತಿ ತೋರುವ ಒಂದು ಜೀವ ಬೇಕು. ಅದನ್ನು ಶಿಕ್ಷಕಿ ನಿಭಾಯಿಸುತ್ತಾಳೆ. ಯಾರು ಏನೇ ವಾದ ಮಾಡಿದರೂ ಖಂಡಿತ ಪುರುಷರಿಂದ ಅದನ್ನು ಮಾಡುವುದು ಕಷ್ಟವೇ ಸರಿ. ಹೆಣ್ಣಿನ ಪಾಲಿಗೆ ಪ್ರಕೃತಿ ಕೊಟ್ಟಿರುವ ವಿಶೇಷ ಸಾಮರ್ಥ್ಯವದು.

ನಾವು ನಮ್ಮ ನಮ್ಮ ಮನೆಗಳನ್ನೇ ನೋಡಿಕೊಳ್ಳುವುದಾದರೆ, ಸ್ವತಃ ತಂದೆ ಮಗುವಿನ ವಿಷಯಗಳಲ್ಲಿ ಎಷ್ಟರಮಟ್ಟಿಗೆ ತೊಡಗಿಕೊಳ್ಳುತ್ತಾನೆ ಎಂಬುದನ್ನು ಗಮನಿಸಬಹುದು. ಆತ ಎಷ್ಟೇ ಕಾಳಜಿಯಿಂದ ತೊಡಗಿಕೊಂಡರೂ ಕೆಲವು ಕಾರ್ಯಗಳಷ್ಟೇ ಅವನಿಂದ ಆಗುವಂಥವು. ತದನಂತರದ್ದು ಅವನಿಗೆ ಸಾಧ್ಯವಾಗದು. ಆತನಿಗೆ ಕೊಂಚ ತಾಳ್ಮೆ ಕಡಿಮೆ. ಅದು ಗಂಡಸಿನ ಮೂಲಗುಣ. ಒಂದು ಮಗುವಂತೂ ಆ ಹಂತದಲ್ಲಿ ಹೆಚ್ಚು ಹೊತ್ತು ತಾಯಿಯ ಬಳಿಯೇ ಕಳೆಯುತ್ತದೆ ಮತ್ತು ತಾಯಿಯ ಬಳಿಯೇ ಇರಲು ಬಯಸುತ್ತದೆ. ಅಂತೆಯೇ ಶಾಲೆಯ ಆರಂಭದಲ್ಲಿ ಅಂತಹುದೇ ವ್ಯವಸ್ಥೆ ಮುಂದುವರಿದರೆ ಮಗುವಿನ ಕಲಿಕೆ ಸುಗಮಗೊಳ್ಳುತ್ತದೆ.

ಇನ್ನು ಶಿಕ್ಷಕಿಯ ದೃಷ್ಟಿಯಿಂದ ನೋಡುವುದಾದರೆ, ಪ್ರತಿ ಹೆಣ್ಣು ಮಗಳಲ್ಲಿ ಒಬ್ಬ ಅಮ್ಮ ಇರುತ್ತಾಳೆ. ಮಗು ಯಾರದ್ದೇ ಆದರೂ ತನ್ನ ಮಡಿಲಲ್ಲಿ, ತೋಳುಗಳಲ್ಲಿ ಮಗು ಬಂದು ಸೇರಿಕೊಂಡರೆ ಅವಳೊಳಗಿನ ಅಮ್ಮ ಜಾಗೃತಳಾಗುತ್ತಾಳೆ. ಸ್ವಾಭಾವಿಕ ಎನ್ನುವಂತೆಯೇ ಆ ತಾಯಿತನ ಹೊರಗೆ ಬರುತ್ತದೆ. ಪ್ರಾಥಮಿಕ ಹಂತದ ಶಾಲೆಯಲ್ಲಿ ಇದೇ ಗುಣ ಹೆಚ್ಚು ಬೇಕಾಗುತ್ತದೆ. ಅಮ್ಮನ ಮಡಿಲು ಬಿಟ್ಟು ಬಂದ ಮಗುವಿಗೆ ಶಾಲೆಯಲ್ಲಿ ಅಮ್ಮನಂತಹ ಭಾವನೆ ಸ್ಫುರಿಸುವವರು ಬೇಕಾಗುತ್ತದೆ. ಅದು ಶಿಕ್ಷಕಿಯಿಂದ ಮಾತ್ರ ಸಾಧ್ಯವಾಗುವಂಥದ್ದು.

ಶಾಲೆಯ ಆರಂಭದ ದಿನಗಳಲ್ಲಿ ಮಗುವಿನ ವರ್ತನೆಗಳನ್ನು ನಿಯಂತ್ರಿಸುವುದು ಕಷ್ಟ. ಆದರೆ ಅದನ್ನು ಜಾಣತನದಿಂದ ಸಾಧಿಸಬೇಕು. ಇದು ಬಹಳಷ್ಟು ತಾಳ್ಮೆಯನ್ನು ಬೇಡುವ ಕೆಲಸ. ಅಷ್ಟುಮಾತ್ರದ ತಾಳ್ಮೆ ಸಾಮಾನ್ಯವಾಗಿ ಮಹಿಳೆಗೆ ಮಾತ್ರ ಇರುತ್ತದೆ. ಗಲಾಟೆ, ಮಾತು, ಕಿರಿಕಿರಿ, ನಿದ್ದೆ, ಆಟ, ಊಟ, ಶೌಚಕ್ರಿಯೆ ಎಲ್ಲವನ್ನೂ ತೀರಾ ಶಿಸ್ತಿಗೆ ಒಳಪಡಿಸಲಾಗದು. ಇಲ್ಲಿ ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವಂತೆ ಮಾಡಬೇಕಾಗುತ್ತದೆ ಮತ್ತು ಅದರೊಂದಿಗೇ ಕಲಿಕೆ ಸಾಗುತ್ತದೆ. ಆ ವಯಸ್ಸಿನ ಮಗುವಿಗೆ ಯಾವ ಸಮಯದಲ್ಲಿ ಏನು ಬೇಕು ಎಂಬುದು ಪುರುಷನಿಗಿಂತ ಮಹಿಳೆಗೆ ಬಹುಬೇಗ ಅರ್ಥವಾಗುತ್ತದೆ. ಇದು ಒಂದು ರೀತಿಯಲ್ಲಿ ಮಗುವಿನ ಸಾಮಾಜೀಕರಣದ ಕ್ರಿಯೆ. ಆಕೆಯ ಮಾತು, ನಡೆ-ನುಡಿ, ನೃತ್ಯ, ಹಾಡುಗಾರಿಕೆ, ಕಾಳಜಿ, ಪ್ರೀತಿ ಮಗುವಿಗೆ ಹೆಚ್ಚು ಇಷ್ಟವಾಗುತ್ತವೆ.

ತಾಳ್ಮೆ ಆಕೆಯ ಜೊತೆ ಇರುವುದರಿಂದ ಎಂಥದ್ದೇ ಸೂಕ್ಷ್ಮ ಕೆಲಸವನ್ನಾದರೂ ಅವಳು ನಿಭಾಯಿಸುತ್ತಾಳೆ. ಮಗುವಿಗೆ ಒಂದೇ ಅಕ್ಷರವನ್ನು ನೂರು ಬಾರಿ ಹೇಳಿಕೊಟ್ಟರೂ ನೂರನೇ ಒಂದು ಬಾರಿಗೆ ಮಗು ತಪ್ಪು ಮಾಡಿದರೂ ಆಕೆ ಕೋಪಿಸಿಕೊಳ್ಳುವುದಿಲ್ಲ. ಗಂಡಸಿನ ಆದ್ಯತೆಗಳು, ಜವಾಬ್ದಾರಿಗಳು ಬೇರೆ. ಬಹುತೇಕ ಬಾರಿ ‘ಮಗುವಿಗೆ ಓದಿಸು’ ಎಂದು ಹೆಂಡತಿಗೆ ಹೇಳುತ್ತಾನೆಯೇ ವಿನಾ ಆತನೇ ಆ ಕಾರ್ಯಕ್ಕೆ ಕೂರುವುದಿಲ್ಲ. ಕೂತರೂ ಹೆಚ್ಚು ಹೊತ್ತು ಜೊತೆ ಇರುವುದಿಲ್ಲ. ಇದಕ್ಕೆ ಭಿನ್ನವಾದ ಕೆಲವು ಉದಾಹರಣೆಗಳು ಇರಬಹುದಷ್ಟೆ.



ಹಾಗಿದ್ದರೆ ಮಹಿಳೆಯರಿಗೆ ಜವಾಬ್ದಾರಿಗಳು ಇರುವುದಿಲ್ಲವೇ ಎಂಬ ಪ್ರಶ್ನೆ ಬರಬಹುದು. ಆದರೆ ಸದ್ಯದ ಸಾಮಾಜಿಕ ಪರಿಸರದಲ್ಲಿ, ಮನೆಯಲ್ಲಿ ಹೆಚ್ಚು ಜವಾಬ್ದಾರಿಯುತ ಕಾರ್ಯಭಾರಗಳ ಜೊತೆ ಜೊತೆಗೇ ಅವಳು ಅಮ್ಮನಂತಹ ಶಿಕ್ಷಕಿಯಾಗಬಲ್ಲಳು, ಒಳ್ಳೆಯ ಗುರುವೂ ಆಗಬಲ್ಲಳು. ಇತ್ತೀಚೆಗೆ ಚಿಕ್ಕ ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ಕಿರುಕುಳದ ಕಾರಣದಿಂದ, ಪ್ರಾಥಮಿಕ ಹಂತದಲ್ಲಿ ಸಂಪೂರ್ಣವಾಗಿ ಶಿಕ್ಷಕಿಯರೇ ಇರಬೇಕೆಂಬ ಕೂಗು ಕೇಳಿಬಂದಿತ್ತು. ಹೌದು, ಈ ಹಂತದಲ್ಲಿ ಶಿಕ್ಷಕಿಯರೇ ಸೂಕ್ತ ಎಂಬುದಕ್ಕೆ ಇದು ಕೂಡ ಒಂದು ಕಾರಣವಾಗಿರಬಹುದು.

ಮಹಿಳೆಯೋ ಪುರುಷರೋ ಎಂಬುದು ಮುಖ್ಯವಾಗುವುದಿಲ್ಲ, ಬೋಧನೆಯಷ್ಟೇ ಮುಖ್ಯವಾಗುತ್ತದೆ ಎನ್ನುವ ಮಾತಿದೆ. ಅದು ಮಕ್ಕಳು ಮಾಧ್ಯಮಿಕ ಹಂತ ತಲುಪಿದಾಗ ಸೂಕ್ತವೆನಿಸುತ್ತದೆ. ಅಲ್ಲಿ ಪುರುಷರಷ್ಟೇ ಪ್ರಮಾಣದಲ್ಲಿ ಮಹಿಳಾ ಬೋಧನಾ ವರ್ಗ ಇರುವುದು ಅವಶ್ಯಕ ಎನಿಸುತ್ತದೆ. ಆದರೆ ಪ್ರಾಥಮಿಕ ಹಂತದಲ್ಲಿ ಸಂಪೂರ್ಣವಾಗಿ ಶಿಕ್ಷಕಿಯರೇ ಸೂಕ್ತ. ಭಾರತದಲ್ಲಿ ಸದ್ಯಕ್ಕೆ ಪ್ರಾಥಮಿಕ ಹಂತದಲ್ಲಿ ಶೇ 50.74ರಷ್ಟು ಮಾತ್ರ ಶಿಕ್ಷಕಿಯರಿದ್ದಾರೆ ಎನ್ನುತ್ತದೆ ಒಂದು ವರದಿ. ಶಾಲೆಯು ಮನೆಯಂತೆ ಇರಬೇಕು, ಮನೆಯಂತೆಯೇ ಶಾಲೆಯಲ್ಲಿ ಸಂಭ್ರಮಿಸುವಂತೆ ಆಗಬೇಕು ಎನ್ನುವ ಮಾತು ಸತ್ಯ. ಪಾಠ ಹೇಳುವವರು ಕೂಡ ಅಮ್ಮನಂತೆಯೇ ಇದ್ದರೆ ಶಾಲೆ ಮನೆಯಂತಾಗುತ್ತದೆ, ಸಂಭ್ರಮವೂ ನೆಲೆಸುತ್ತದೆ.

ವಾಚಕರ ವಾಣಿ

ವಿಮಾನಯಾನ ಕಂಪನಿ ಅನಿವಾರ್ಯವೇ?

ರಾಜ್ಯ ಸರ್ಕಾರಿ ಸ್ವಾಮ್ಯದ ವಿಮಾನಯಾನ ಕಂಪನಿ ಆರಂಭಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ (ಪ್ರ.ವಾ., ಆ. 2). ಈ ಬಗೆಯ ಯೋಚನೆಗಳು ಸರ್ಕಾರಕ್ಕೆ ಹೇಗೆ ಬರುತ್ತವೆ ಎಂಬುದೇ ಆಶ್ಚರ್ಯಕರ. ವಿಮಾನಯಾನ, ನಿಲ್ದಾಣಗಳ ನಿರ್ಮಾಣ, ನಿರ್ವಹಣೆ, ಪ್ರಾಧಿಕಾರ, ವಿಮಾನಗಳ ಖರೀದಿ– ಇವೆಲ್ಲ ಯಾರಿಗಾಗಿ ಸ್ವಾಮಿ?! ರಾಜ್ಯವು ಬರದ ಛಾಯೆಯಲ್ಲಿ ಕಂಗಾಲಾಗಿದೆ. ಸಮಾಜದ ಯಾರ ಹಿತಾಸಕ್ತಿಗಳನ್ನು ಇದು ಪೂರೈಸುತ್ತದೆ? ವಿಮಾನಯಾನ ಕಂಪನಿಗಳನ್ನು ನಡೆಸುವುದು ಸರ್ಕಾರದ ಕೆಲಸವಲ್ಲ. ಇದು ಅಭಿವೃದ್ಧಿಯ ಆದ್ಯತೆಯೂ ಅಲ್ಲ. ಸರ್ಕಾರಿ ಅಧಿಕಾರಿಗಳಿಗೆ ಮತ್ತು ಮಂತ್ರಿ ಮಹೋದಯರಿಗೆ ಸರ್ಕಾರಿ ಕೆಲಸವೆಂದು ಹೇಳಿಕೊಂಡು ಉಚಿತವಾಗಿ ಓಡಾಡಲು ಅನುವು ಮಾಡಿಕೊಡುವ ಈ ಉದ್ದೇಶಿತ ಕಂಪನಿಯು ಬಿಳಿ ಆನೆಯಾಗುತ್ತದೆ.

ಸರ್ಕಾರವು ಮಾಡಬೇಕಾದ ತಕ್ಷಣದ ನೂರಾರು ಬೇರೆ ಕೆಲಸಗಳಿವೆ. ಕುಡಿಯುವ ನೀರು ಪೂರೈಕೆ, ಶಾಲೆಗಳು, ಆರೋಗ್ಯ ಕೇಂದ್ರಗಳು, ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳ ನಿರ್ಮಾಣ, ಮಕ್ಕಳು ಮತ್ತು ಮಹಿಳೆಯರಲ್ಲಿನ ತೀವ್ರ ಅಪೌಷ್ಟಿಕತೆ ನಿವಾರಣೆಯಂತಹ ಅಭಿವೃದ್ಧಿ ಆದ್ಯತೆಗಳ ಬಗ್ಗೆ ಗಮನ ನೀಡುವ ಅಗತ್ಯವಿದೆ. ಕೆಲವೇ ಪ್ರತಿಷ್ಠಿತರ ಅಗತ್ಯಗಳು ಸರ್ಕಾರಕ್ಕೆ ಮುಖ್ಯವಾಗಬೇಕೋ ಅಥವಾ ಲಕ್ಷಾಂತರ ರೈತರು, ಕೂಲಿಕಾರರು, ಕಾರ್ಮಿಕರು, ಮಹಿಳೆಯರು, ಮಕ್ಕಳ ಕಲ್ಯಾಣ ಮುಖ್ಯವಾಗಬೇಕೋ? ವಿಮಾನಯಾನ ಕಂಪನಿಯನ್ನು ಆರಂಭಿಸುವ ಪ್ರಸ್ತಾವವನ್ನು ಸರ್ಕಾರ ಮೊದಲು ಕೈಬಿಡಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ನಿರೀಕ್ಷಿಸಬಹುದೇ?

ವಾಣಿಜ್ಯ ಬಳಕೆ ಸಿಲಿಂಡರ್
ದರದಲ್ಲಿ ಇಳಿಕೆ
ನಿರೀಕ್ಷಿಸಬಹುದೇ
ಏರಿದ ಹೋಟೆಲ್
ತಿಂಡಿಯ ದರದಲ್ಲೂ ಇಳಿಕೆ?!

ಆನಂದ ರಾಮತೀರ್ಥ, ಜಮಖಂಡಿ

ಮೆಟ್ರೊ ರೈಲು: ಪ್ರವಾಸೋದ್ಯಮಕ್ಕೂ ಪೂರಕವಾಗಲಿ

ಬೆಂಗಳೂರಿನಲ್ಲಿ ಪ್ರಯಾಣಿಕರಿಗೆ ಮೆಟ್ರೊ ರೈಲು ಆಪದ್ಬಾಂಧವನಂತೆ ಹೊರಹೊಮ್ಮಿದೆ. ಪ್ರತಿ ನಿಲ್ದಾಣ ಬರುವ ಮೊದಲೇ ಆ ನಿಲ್ದಾಣದ ಹೆಸರನ್ನು ಹಾಗೂ ಮುಂದಿನ ನಿಲ್ದಾಣದ ಹೆಸರನ್ನು ಮುಂಚಿತವಾಗಿಯೇ ಉದ್ಘೋಷಣೆ ಮಾಡುವುದು ಸಹಸ್ರಾರು ಪ್ರಯಾಣಿಕರಿಗೆ, ಅದೂ ನಿಲ್ದಾಣಗಳ ಪರಿಚಯ ಅಷ್ಟೊಂದು ಇರದವರಿಗೆ ಬಹಳ ಉಪಯುಕ್ತವಾಗಿದೆ. ಈ ರೈಲನ್ನು ಹೊರ ಊರಿನಿಂದ ಬರುವ ಪ್ರಯಾಣಿಕರೂ ಬಹಳಷ್ಟು ಸಂಖ್ಯೆಯಲ್ಲಿ ಬಳಸುವುದರಿಂದ ನಿಲ್ದಾಣಗಳ ಅಕ್ಕಪಕ್ಕದಲ್ಲಿರುವ ಪ್ರವಾಸಿ ತಾಣಗಳ ಬಗ್ಗೆಯೂ ಮಾಹಿತಿಯನ್ನು ಉದ್ಘೋಷಣೆ ಮಾಡುವುದು ಸೂಕ್ತ. ಉದಾಹರಣೆಗೆ, ಮಹಾಲಕ್ಷ್ಮಿ ನಿಲ್ದಾಣ ಬರುವ ಮುಂಚೆ ಹತ್ತಿರದಲ್ಲಿ ಆಂಜನೇಯ ದೇವಸ್ಥಾನ, ಶ್ರೀನಿವಾಸ ದೇವಸ್ಥಾನ, ಇಸ್ಕಾನ್ ದೇವಸ್ಥಾನ ಇವೆಯೆಂದು, ಕಬ್ಬನ್ ಉದ್ಯಾನ ನಿಲ್ದಾಣ ಬರುವ ಮುಂಚೆ ಚಿನ್ನಸ್ವಾಮಿ ಕ್ರೀಡಾಂಗಣ ಇದೆ ಎಂಬಂತಹ ಮಾಹಿತಿ ನೀಡುವುದರಿಂದ ಅನುಕೂಲವಾದೀತು. ಇದರಿಂದ ಪ್ರವಾಸೋದ್ಯಮಕ್ಕೂ ಬಲ ಬಂದೀತು.

ಬಿ.ಎನ್.ಭರತ್, ಬೆಂಗಳೂರು

ವಿನೋದದ ಸಂಗತಿ, ಆತ್ಮವಂಚನೆಯ ಮಾತು...

ಮತ್ತೆ ಆಪರೇಷನ್ ಕಮಲ ಆರಂಭವಾಗಲಿದೆ ಎಂಬ ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆಯಲ್ಲಿ (ಪ್ರ.ವಾ., ಸೆ. 3) ವಿನೋದದ ಜೊತೆಗೆ ಸವಾಲೂ ಇದೆ. ‘ಕಾಂಗ್ರೆಸ್‌ಗೆ ಒಂದು ತಿಂಗಳು ಸಮಯ ಕೊಡುತ್ತೇವೆ, ಬಿಜೆಪಿಯಿಂದ ಒಬ್ಬ ಶಾಸಕನನ್ನಾದರೂ ಕರೆದೊಯ್ಯಲಿ ನೋಡೋಣ’ ಎಂದು ಅವರು ಹೇಳಿರುವುದು ವಿನೋದದ ಸಂಗತಿ. ಸಾಮಾನ್ಯವಾಗಿ ದಿನನಿತ್ಯದ ಒಂದು ವಸ್ತುವನ್ನು ಕೊಂಡೊಯ್ಯಬೇಕೆನಿಸಿದಾಗಲೂ ಅದರ ಗುಣಮಟ್ಟವನ್ನು ಕೂಲಂಕಷವಾಗಿ ಪರಿಶೀಲಿಸಿ ದರ ಖಾತರಿ ಮಾಡಿಕೊಳ್ಳಲು ಹಲವು ನಿಮಿಷ, ಗಂಟೆಗಳೇ ಹಿಡಿಯುತ್ತವೆ. ಹಾಗಿರುವಾಗ, ಒಬ್ಬ ಶಾಸಕನನ್ನು ಅಷ್ಟು ಶೀಘ್ರವಾಗಿ ಕೊಂಡೊಯ್ಯಲು ಸಾಧ್ಯವೇ? ಆ ಶಾಸಕ ದಿನನಿತ್ಯದ ವಸ್ತುವೇ?! ಕಾಂಗ್ರೆಸ್ ಪಕ್ಷ ಬೇರೆ ಪಕ್ಷದ ಶಾಸಕರನ್ನು ಕರೆದೊಯ್ದು ಅಧಿಕಾರ ಉಳಿಸಿಕೊಳ್ಳುವಷ್ಟು ದಯನೀಯ ಸ್ಥಿತಿಯಲ್ಲಿದೆಯೇ ಅಥವಾ ಇತರ ಪಕ್ಷದ ಶಾಸಕರನ್ನು ಸಾಕಿ ಸಲಹುವಷ್ಟು ಕರುಣಾಮಯಿಯೇ?

ಇಷ್ಟಕ್ಕೂ ಬಿಜೆಪಿಯ ನಾಯಕರು ತಾನೆ ಈ ಸರ್ಕಾರ ಹೆಚ್ಚು ದಿನ ಇರುವುದಿಲ್ಲ ಎಂದು ಆಗಾಗ ಹೇಳುತ್ತಿರುವುದು. ಹಾಗಿದ್ದರೆ ಅದಕ್ಕೆ ಬೇಕಿರುವ ಕಾರಣ ಮತ್ತು ಯೋಜನೆಗಳನ್ನು ಈಶ್ವರಪ್ಪನವರೇ ಬಹಿರಂಗಪಡಿಸಿದರೆ ಒಳಿತು. ಸುಖಾಸುಮ್ಮನೆ ಆತ್ಮವಂಚನೆಯ ಮಾತುಗಳೇಕೆ?!

ರಮೇಶ್, ಬೆಂಗಳೂರು

ಲೈಂಗಿಕ ಅಲ್ಪಸಂಖ್ಯಾತರ ಉಪಟಳಕ್ಕೆ ಕೊನೆಯಿಲ್ಲವೇ?

ಮದುವೆ ಮತ್ತು ಗೃಹ ಪ್ರವೇಶದಂತಹ ಸಮಾರಂಭಗಳಲ್ಲಿ ಕೆಲವು ಲೈಂಗಿಕ ಅಲ್ಪಸಂಖ್ಯಾತರು ಮಾನಸಿಕವಾಗಿ ಕೊಡುವ ಉಪಟಳ ಹೇಳತೀರದಾಗಿದೆ. ಇತ್ತೀಚೆಗೆ ನಮ್ಮ ಸ್ನೇಹಿತರ ಮಗಳ ಮದುವೆಯ ಆರತಕ್ಷತೆಯ ವೇಳೆ ದಿಢೀರನೆ ವೇದಿಕೆಯ ಮೇಲೆ ಬಂದ ಐದು ಮಂದಿ ಲೈಂಗಿಕ ಅಲ್ಪಸಂಖ್ಯಾತರು ಹುಡುಗಿಯ ತಂದೆಯ ಮೈಮುಟ್ಟಿ, ಕೈ ಹಿಡಿದು ‘ಮಗಳ ಮದುವೆ ಮಾಡ್ತೀದ್ದೀಯ, ಹತ್ತು ಸಾವಿರ ಕೊಡು’ ಎಂದು ಮದುವೆಗೆ ಬಂದವರ ಎದುರಿನಲ್ಲೇ ಏಕವಚನದಲ್ಲಿ ಕೇಳಿದರು. ಅವರು ಮರ್ಯಾದೆಗೆ ಅಂಜಿ ಐದು ಸಾವಿರ ರೂಪಾಯಿ ಕೊಟ್ಟು ಸಾಗಹಾಕಿದರು. ಇವರು ಮೈಮುಟ್ಟುವುದು ಒಂದು ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸಾಚಾರವೆಂದು ಹೇಳಬಹುದು.

ಮತ್ತೊಂದು ಆತಂಕದ ಸಂಗತಿಯೆಂದರೆ, ಸಿಗ್ನಲ್ ದೀಪಗಳ ಬಳಿ ನಿಂತು ಇವರು ಹಣ ಕೇಳುವುದು. ಆಗ ಹಸಿರು ದೀಪ ಬಂದಾಗ ಹೊರಡುವ ಗಡಿಬಿಡಿಯಲ್ಲಿರುವ ಚಾಲಕರ ಜೇಬಿಗೇ ಕೈ ಹಾಕಿ ಇವರು ಹಣ ಎಗರಿಸುತ್ತಾರೆ. ಇನ್ನು ರಾತ್ರಿ ವೇಳೆಯಲ್ಲಾದರೆ ಜೇಬಿಗೇ ಕೈಹಾಕಿ ಮೊಬೈಲ್ ಫೋನ್‌ಗಳನ್ನೂ ಕಸಿದುಕೊಳ್ಳಲು ಪ್ರಯತ್ನಿಸುತ್ತಾರೆ. ಇನ್ನು ಅಲ್ಲೇ ನಿಂತಿರುವ ಸಂಚಾರ ಪೊಲೀಸರಿಗೆ ಈ ಬಗ್ಗೆ ದೂರು ಹೇಳಿದರೆ, ‘ನಮಗೂ ಇದಕ್ಕೂ ಸಂಬಂಧವಿಲ್ಲ, ನೀವು ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಿ’ ಎನ್ನುತ್ತಾರೆ. ಇಂತಹವರಿಂದ ಜನರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜೆಇಇ ಮತ್ತು ನೀಟ್‌ನಂತಹ ಪರೀಕ್ಷೆಗಳಿಗೆ ತರಬೇತಿ ನೀಡುವ ಸಾವಿರಾರು ಕೋಚಿಂಗ್ ಕೇಂದ್ರಗಳಿರುವ ನಗರ ರಾಜಸ್ಥಾನದ ಕೋಟಾ. ಇಲ್ಲಿಗೆ ಪ್ರತಿವರ್ಷ ಸುಮಾರು 2.5 ಲಕ್ಷದಿಂದ 3 ಲಕ್ಷದ ವರೆಗೆ ವಿದ್ಯಾರ್ಥಿಗಳು ದಾಖಲುಗೊಳ್ಳುತ್ತಾರೆ. ಇಂಥ ಪರೀಕ್ಷೆಗಳಲ್ಲಿ ಇಲ್ಲಿ ಓದಿದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗುತ್ತಾರೆ ಹಾಗೂ ರ‍್ಯಾಂಕ್ ಗಳಿಸುತ್ತಾರೆ. ಇದೇ ಕಾರಣಕ್ಕೆ ಈ ನಗರವನ್ನು ‘ಕೋಟಾ ಫ್ಯಾಕ್ಟರಿ’ ಎಂದು ಕರೆಯುತ್ತಾರೆ. ಉತ್ತಮ ಅಂಕ ಪಡೆಯುವ, ಪೋಷಕರ ಆಸೆಯನ್ನು ಈಡೇರಿಸುವ ಭಾರ ಹೊತ್ತ ವಿದ್ಯಾರ್ಥಿಗಳು ಈ ಫ್ಯಾಕ್ಟರಿಯಲ್ಲಿ ಪ್ರತಿದಿನವೂ ಒತ್ತಡದೊಂದಿಗೆ ಬದುಕುತ್ತಿದ್ದಾರೆ. 9–10ನೇ ತರಗತಿಗೇ ಇಲ್ಲಿ ಸೇರುವ ಮಕ್ಕಳ ಮೇಲೆ ಪಠ್ಯದ ಭಾರವೂ ಇದೆ. ಈ ಎಲ್ಲ ಭಾರವನ್ನು ತಾಳಿಕೊಳ್ಳಲು ಸಾಧ್ಯವಾಗದೇ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ



‘ಕೋಟಾ ಫ್ಯಾಕ್ಟರಿ’ಯ ಕಣ್ಣೀರಿನ ಕಥನಗಳು

ಪ್ರಜಾವಾಣಿ ವಾರ್ತೆ

ಬಿಡುವಿಲ್ಲದ ತರಗತಿಗಳು, ಉಸಿರು ಕಟ್ಟಿಸುವ ಸ್ಪರ್ಧೆ, ಉತ್ತಮ ಅಂಕ ಗಳಿಸಲೇ ಬೇಕು ಎನ್ನುವ ನಿರಂತರ ಒತ್ತಡ, ಪೋಷಕರ ಒತ್ತಾಸೆಯ ಭಾರ, ಗಳಿಗೆ ಗಳಿಗೆಗೂ ಕಾಡುವ ಮನೆಯ ನೆನಪು... ಇದು ರಾಜಸ್ಥಾನದ ‘ಕೋಟಾ ಫ್ಯಾಕ್ಟರಿ’ಯ ವಿದ್ಯಾರ್ಥಿಗಳ ಮೇಲೆ ನಡೆಯುವ ‘ಶೈಕ್ಷಣಿಕ ಕೌರ್ಯ’ದ ಕಥಾನಕ.

‘ನಾನು ಕಳೆದ ಎರಡು ವರ್ಷಗಳಿಂದ ಇಲ್ಲಿ ಜೆಇಇಗಾಗಿ ತಯಾರಿ ನಡೆಸುತ್ತಿದ್ದೇನೆ. ಕೋಟಾ ಎಂದರೆ ಟ್ರೆಡ್‌ಮಿಲ್ ಇದ್ದ ಹಾಗೆ. ಒಂದು ಬಾರಿ ಇದನ್ನು ಹತ್ತಿದರೆ ಮುಗಿಯಿತು ನೀವು ಓಡುತ್ತಲೇ ಇರಬೇಕು. ಓಡಲು ಪ್ರಾರಂಭಿದ ಮೇಲೆ ಮಾತ್ರ ನೀವು ನಿಲ್ಲುವ ಹಾಗಿಲ್ಲ ಅಥವಾ ನಿಮ್ಮ ಗತಿಯನ್ನು ತಗ್ಗಿಸುವ ಹಾಗೂ ಇಲ್ಲ.. ಓಡುತ್ತಿರಬೇಕು ಅಷ್ಟೇ’ ಎನ್ನುತ್ತಾರೆ ಒಡಿಸಾದ ಮಾನ್ಸಿ ಸಿಂಗ್.

ತನ್ನ ಗುರುತನ್ನು ಹೇಳಿಕೊಳ್ಳಲು ಬಯಸದ ಇನ್ನೊಬ್ಬ ವಿದ್ಯಾರ್ಥಿಯದ್ದು ಹೆಚ್ಚು ಕಡಿಮೆ ಇದೇ ಅಭಿಪ್ರಾಯವೇ. ‘ಒಂದೊಮ್ಮೆ ಕೆಲವು ನಿಮಿಷಗಳ ಕಾಲ ನೀವು ಪುಸ್ತಕ ಹಿಡಿಯಲಿಲ್ಲ, ಓದಲಿಲ್ಲ ಎಂದಿಟ್ಟುಕೊಳ್ಳಿ, ಆ ನಿಮಿಷಗಳು ‘ವ್ಯರ್ಥ’ವಾದಂತೆ ಅನ್ನಿಸಿ ಬಿಡುತ್ತದೆ. ಒಮ್ಮೆ ಈ ಅನ್ನಿಸಿಕೆ ನಮ್ಮ ತಲೆಹೊಕ್ಕರೆ ಸಾಕು, ಅದು ಅಪರಾಧಿಭಾವದ ವಿಷವರ್ತುಲದ ಒಳಗೆ ಸಿಲುಕಿಕೊಂಡಂತೆ. ಈ ವರ್ತುಲವು ಕೊನೆಯಲ್ಲಿ ನಮ್ಮನ್ನು ಅಧೀರರನ್ನಾಗಿ ಮಾಡಿಬಿಡುತ್ತದೆ’ ಎನ್ನುತ್ತಾರೆ.

ಹೀಗೆ ಒಂದೊಂದೂ ಕಥಾನಕ ‘ಫ್ಯಾಕ್ಟರಿ’ಯಲ್ಲಿನ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಬಿಚ್ಚಿಡುತ್ತಾ ಹೋಗುತ್ತವೆ. ಈ ಫ್ಯಾಕ್ಟರಿಗೆ ಸೇರುವ ವಿದ್ಯಾರ್ಥಿಗಳಿಗೆ ಅಲಿಖಿತ ನಿಯಮವೊಂದಿದೆ. ಅದುವೇ ಸ್ನೇಹಿತರನ್ನು ಸಂಪಾದಿಸಬಾರದು ಎಂಬುದಾಗಿ. ಪೋಷಕರು ಕೋಟಾಗೆ ತಮ್ಮ ಮಕ್ಕಳನ್ನು ತಂದು ಬಿಡುವಾಗ ಮಕ್ಕಳ ಮೇಲೆ ಹೇರುವ ನಿಮಯವಿದು. ‘ನೀನು ಇಲ್ಲಿಗೆ ಓದಲಿಕ್ಕೆ, ನಮ್ಮ ಕನಸನ್ನು ನನಸು ಮಾಡಲಿಕ್ಕೆ ಬಂದಿದ್ದೀಯಾ. ಆದ್ದರಿಂದ ಸ್ನೇಹವೆಂದೆಲ್ಲಾ ಸಮಯ ಹಾಳು ಮಾಡಬೇಡ’ ಇದು ಪೋಷಕರ ಖಡಾಖಂಡಿತ ಮಾತು.

‘ಇಲ್ಲಿ ಸ್ನೇಹಕ್ಕೆ ಅವಕಾಶವಿಲ್ಲ. ಇಲ್ಲಿ ಇರುವವರು ಸ್ಪರ್ಧಿಗಳು ಮಾತ್ರ. ನಮ್ಮ ಪಕ್ಕ ಕೂರುವ ಪ್ರತಿಯೊಬ್ಬರೂ ನಮ್ಮ ಪ್ರತಿಸ್ಪರ್ಧಿಗಳೇ ಆಗಿದ್ದಾರೆ. ಶಾಲೆ– ಕಾಲೇಜುಗಳು ಥರ ಇಲ್ಲಿ ಯಾರೂ ಯಾರೊಂದಿಗೂ ನೋಟ್ಸ್‌ಗಳನ್ನು ಹಂಚಿಕೊಳ್ಳುವುದಿಲ್ಲ. ಹಂಚಿಕೊಂಡರೆ ತಮ್ಮ ಅವಕಾಶವನ್ನು ಎಲ್ಲಿ ಕಿತ್ತುಕೊಂಡು ಬಿಡುತ್ತಾರೊ ಎನ್ನುವ ಆತಂಕ ಎಲ್ಲರಲ್ಲೂ ಇದೆ’ ಎನ್ನುತ್ತಾರೆ ಮಧ್ಯ ಪ್ರದೇಶದ ರಿಧಿಮಾ ಸ್ವಾಮಿ. ಸ್ನೇಹ ಮಾಡುವುದು ಪಾಪವಾಗಿರುವ ಇಲ್ಲಿ, ಇದೇ ವರ್ಷದಲ್ಲಿ ಸುಮಾರು 22 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆಧಾರ: ಪಿಟಿಐ, ಪೋಬ್ಸ್ ಪತ್ರಿಕೆ

‘ಸಮೂಹ ಮನಃಸ್ಥಿತಿಯಿಂದ ಸಮಸ್ಯೆ’



ಒಂದೇ ರೀತಿಯ ಮನಃಸ್ಥಿತಿಯವರು ನೇರವಾಗಿ ಅಥವಾ ಪರೋಕ್ಷವಾಗಿ ಒಬ್ಬರಿಗೊಬ್ಬರು ಆಸರೆಯಾಗಿರುತ್ತಾರೆ. ಯಾವುದೇ ಒಬ್ಬ ವ್ಯಕ್ತಿ ದುಡುಕಿನ ನಿರ್ಧಾರ ಕೈಗೊಂಡರೆ ಅದು ಉಳಿದವರ ಮನಃಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿ, ಅವರು ಸಹ ಅದೇ ಹಾದಿಯಲ್ಲಿ ಸಾಗುವ ಸಾಧ್ಯತೆ ಇರುತ್ತದೆ. ಇದನ್ನು ‘ಸಮೂಹ ಮನಃಸ್ಥಿತಿ ಪರಿಣಾಮ’ ಎನ್ನಬಹುದಾಗಿದೆ.

ಪರೀಕ್ಷೆಗಳಲ್ಲಿ ಅಧಿಕ ಅಂಕ ಪಡೆಯುವಂತೆ ಪಾಲಕರು ಒತ್ತಡ ಹೇರುತ್ತಿರುವುದರಿಂದ ಮಕ್ಕಳಲ್ಲಿ ಸಹ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ

ಡಾ. ಶಶಿಧರ್ ಎಚ್.ಎನ್., ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ)

‘ಮಕ್ಕಳ ಮೇಲೆ ಅತಿ ಒತ್ತಡ ಹೇರಬಾರದು’



ವೈದ್ಯಕೀಯ ಶಿಕ್ಷಣ ಮತ್ತು ಎಂಜಿನಿಯರಿಂಗ್ ಎನ್ನುವುದು ಇಂದು ಕ್ರೇಜ್ ಆಗಿದೆ. ಮಕ್ಕಳಿಗೆ ಆ ಕ್ಷೇತ್ರವನ್ನು ತಮ್ಮ ಕೈಯಲ್ಲಿ ನಿಭಾಯಿಸಲು ಸಾಧ್ಯವಿಲ್ಲ ಎನ್ನುವ ಭಾವನೆ ಇದ್ದಾಗ ಪೋಷಕರು ಆ ಕ್ಷೇತ್ರಕ್ಕೆ ಮಕ್ಕಳನ್ನು ಒತ್ತಾಯದಿಂದ ನೂಕಬಾರದು. ವೈದ್ಯರು ಅಥವಾ ಎಂಜಿನಿಯರ್ ಆಗಲಿಲ್ಲ ಎಂದರೆ ಜೀವನವೇ ಇಲ್ಲ ಎನ್ನುವ ಅತಿರೇಕದ ಮಟ್ಟಕ್ಕೆ ಇದು ತಲುಪಿದೆ. ಕೆಲವು ಪೋಷಕರು ತಮ್ಮ ಇಚ್ಛೆ, ಆಸೆಗಳನ್ನು ಮಕ್ಕಳ ಮೇಲೆ ಹೇರುತ್ತಾರೆ.

ಪ್ರದೀಪ್ ಈಶ್ವರ್, ಮುಖ್ಯಸ್ಥರು, ಪರಿಶ್ರಮ ನೀಟ್ ಅಕಾಡೆಮಿ, ಬೆಂಗಳೂರು

ಆತ್ಮಹತ್ಯೆ ಹೆಚ್ಚಳ: ಸಮಿತಿ ರಚನೆ

ಕೆಲವೇ ದಿನಗಳ ಹಿಂದೆ ಇಬ್ಬರು ವಿದ್ಯಾರ್ಥಿಗಳು ನಾಲ್ಕು ತಾಸಿನ ಅಂತರದಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಈ ಘಟನೆ ನಡೆಯುವ ಸುಮಾರು ಒಂದು ವಾರದ ಮುನ್ನ ಅಂದರೆ ಆಗಸ್ಟ್ 18ರಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸಭೆಯೊಂದನ್ನು ಕರೆದಿದ್ದರು. ಮುಖ್ಯಮಂತ್ರಿಯು ಈ ಸಭೆ ಕರೆಯುವ ಹೊತ್ತಿಗೆ ಕೋಟಾದಲ್ಲಿ ಇದೇ ವರ್ಷವೇ 20 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. ಕಳೆದ ವರ್ಷದ ಈ ಸಂಖ್ಯೆ 15ರಲ್ಲಿತ್ತು. ಆತ್ಮಹತ್ಯೆ ಪ್ರಕರಣದಲ್ಲಿ ಏರಿಕೆ ಕಂಡುಬಂದು ಕಳವಳಗೊಂಡ ಸರ್ಕಾರವು ಸಭೆ ಕರೆದಿತ್ತು. ಕೋಚಿಂಗ್ ಕೇಂದ್ರಗಳ ಪ್ರತಿನಿಧಿಗಳು, ಪೋಷಕರು, ವೈದ್ಯರು, ಸರ್ಕಾರಿ ಅಧಿಕಾರಿಗಳನ್ನು ಸೇರಿಸಿ ಈ ಸಮಿತಿಯನ್ನು ರಚಿಸಲಾಯಿತು. 15 ದಿನಗಳ ಒಳಗೆ ವರದಿಯನ್ನು ನೀಡುವಂತೆಯೂ ಗಡುವು ನೀಡಲಾಗಿತ್ತು. ಇದಾದ ಬಳಿಕ ಆಗಸ್ಟ್ 28ರಂದು ಈ ಸಮಿತಿಯು ಸಭೆ ಸೇರಿತ್ತು. ಈ ಸಭೆಯಲ್ಲಿ ಕೆಲವು ನಿರ್ಧಾರಗಳನ್ನೂ ಕೈಗೊಳ್ಳಲಾಗಿತ್ತು. ಅವುಗಳೆಂದರೆ:

- ಕೋಚಿಂಗ್ ಕೇಂದ್ರಗಳು ಪ್ರತಿ ಬುಧವಾರದ ಮಧ್ಯಾಹ್ನವನ್ನು ಮನರಂಜನೆಗಾಗಿ ಮೀಸಲಿಡಬೇಕು
- ಪರೀಕ್ಷೆಗಳಿಗೆ ಗೈರಾಗುವ ಮತ್ತು ಕಡಿಮೆ ಅಂಕಗಳನ್ನು ಗಳಿಸುವ, ಆತ್ಮಹತ್ಯೆ ಮಾಡಿಕೊಳ್ಳುವ ಮನಃಸ್ಥಿತಿ ತೋರುವ ವಿದ್ಯಾರ್ಥಿಗಳನ್ನು ಗಮನಿಸಿ ಅಂಥವರಿಗೆ ಆಪ್ತಸಮಾಲೋಚನೆ ಸೇವೆ ಒದಗಿಸಬೇಕು
- ಪ್ರತಿ ವಾರ ನೀಡುವ ಪರೀಕ್ಷೆಯನ್ನು ನಿಲ್ಲಿಸಬೇಕು
- ವಿದ್ಯಾರ್ಥಿಗಳ ಪಠ್ಯಭಾರವನ್ನು ಕಡಿಮೆಗೊಳಿಸಲು ವಿಷಯ ತಜ್ಞರ ಸಮಿತಿಯೊಂದನ್ನು ಕೋಚಿಂಗ್ ಕೇಂದ್ರಗಳು ರಚಿಸಿಕೊಳ್ಳಬೇಕು
- ತಜ್ಞರಿಂದ ಆನ್‌ಲೈನ್ ಮೂಲಕ ಸ್ಫೂರ್ತಿದಾಯಕ ಭಾಷಣಗಳನ್ನು ಏರ್ಪಡಿಸಬೇಕು ಮತ್ತು ಈ ಭಾಷಣಗಳನ್ನು ಕೇಂದ್ರಗಳು ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಅಪ್‌ಲೋಡ್ ಮಾಡಬೇಕು
- ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಅರಿತುಕೊಳ್ಳುವ ಸಲುವಾಗಿ ಪ್ರತಿನಿತ್ಯವೂ ಅರ್ಜಿಯೊಂದನ್ನು ನೀಡಿ, ಅದನ್ನು ತುಂಬಲು ಹೇಳಬೇಕು

ಅಮ್ಮನಾಗುವ ಪೊಲೀಸರು

‘ನಿಮ್ಮನ್ನು ಏನಾದರೊಂದು ವಿಷಯ ಕಾಡುತ್ತಿದೆಯಾ? ನಿಮಗೆ ನಿಜವಾಗಿಯೂ ಎಂಜಿನಿಯರ್ ಅಥವಾ ಡಾಕ್ಟರ್ ಆಗಲು ಇಷ್ಟವಿದೆಯಾ? ತರಗತಿಗಳಲ್ಲಿ ಹೇಳಿ ಕೊಡುತ್ತಿರುವುದು ಅರ್ಥವಾಗುತ್ತಿದೆಯಾ? ಹಾಸ್ಟಲ್‌ಗಳಲ್ಲಿ ಊಟ ಉತ್ತಮ ಗುಣಮಟ್ಟದಲ್ಲಿ ಇದೆಯಾ? – ಹೀಗೆ ‘ಕೋಟಾ ಫ್ಯಾಕ್ಟರಿ’ಯಲ್ಲಿ ತಿರುಗುವ ಪೊಲೀಸರು ವಿದ್ಯಾರ್ಥಿಗಳನ್ನು ವಿಚಾರಿಸಿಕೊಳ್ಳುತ್ತಿದ್ದಾರೆ.

ಒಂದಾದ ಮೇಲೆ ಒಂದು ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗ ತೊಡಗಿದಾಗ ಆತಂಕಗೊಂಡ ಆಡಳಿತ ಹಾಗೂ ಪೊಲೀಸರು ‘ವಿದ್ಯಾರ್ಥಿ ಸಹಾಯ ವಿಭಾಗ’ ಅನ್ನು ಪರಿಚಯಿಸಿದರು. ಇದರಲ್ಲಿ 40 ವರ್ಷ ಮೀರಿದ, 18 ವರ್ಷದ ಆಸುಪಾಸಿನ ಮಕ್ಕಳಿರುವ ಒಟ್ಟು 11 ಪೊಲೀಸರನ್ನು ಈ ವಿಭಾಗಕ್ಕೆ ನೇಮಿಸಲಾಗಿದೆ. ಮಹಿಳಾ ಪೊಲೀಸರೂ ಸೇರಿದ ಈ ವಿಭಾಗದವರು ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಾರೆ.

ಜುಲೈ ತಿಂಗಳಿನಿಂದ ಈ ವಿಭಾಗ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕೆ ಸಹಾಯವಾಣಿಯೂ ಇದೆ. ಇವರು ಸಮವಸ್ತ್ರ ಧರಿಸುವುದಿಲ್ಲ. ಪೊಲೀಸ್ ವಾಹನಗಳಲ್ಲಿ ಓಡಾಡುವುದಿಲ್ಲ. ಇವರು ಸ್ನೇಹಿತರಾಗುತ್ತಾರೆ. ಅಮ್ಮನಾಗುತ್ತಾರೆ ಹಾಗೂ ಕೆಲವೊಮ್ಮೆ ಆಪ್ತಸಮಾಲೋಚಕರೂ ಆಗಿ ಮಕ್ಕಳನ್ನು ಸಂಬಾಳಿಸುತ್ತಿದ್ದಾರೆ.

ನಿತ್ಯ ಬೆಳಿಗ್ಗೆ 9 ಗಂಟೆಗೆ ಇವರ ಕೆಲಸ ಪ್ರಾರಂಭವಾಗುತ್ತದೆ. ಹಾಸ್ಟೆಲ್‌ಗಳಿಗೆ ಭೇಟಿ ನೀಡುವುದು, ಟ್ಯೂಷನ್‌ಗಳಿಗೆ ಭೇಟಿ ನೀಡುವ ಕೆಲಸ ಮಾಡುತ್ತಾರೆ. ವಿದ್ಯಾರ್ಥಿಗಳನ್ನು ಮಾತನಾಡಿಸಿ, ಅವರ ಮಾನಸಿಕ ಸ್ಥಿತಿಯನ್ನು ಅಧ್ಯಯನ ಮಾಡಿ, ಆಪ್ತಸಮಾಲೋಚನೆ ಮಾಡುತ್ತಾರೆ. ಪರಿಸ್ಥಿತಿ ಕೈಮೀರಿದೆ ಎಂದು ತೋರಿದರೆ ಮನಃಶಾಸ್ತ್ರಜ್ಞರ ಬಳಿ ಕರೆದುಕೊಂಡು ಹೋಗುತ್ತಾರೆ ಮತ್ತು ಪೋಷಕರಿಗೆ ಮಾಹಿತಿಯನ್ನೂ ನೀಡುತ್ತಾರೆ.

‘ಇಲ್ಲಿಯ ವರೆಗೆ ಸುಮಾರು 60,000 ವಿದ್ಯಾರ್ಥಿಗಳನ್ನು ಮಾತನಾಡಿಸಿದ್ದೇವೆ. ಕೆಲವೊಮ್ಮೆ ವಿದ್ಯಾರ್ಥಿಗಳು ನಮ್ಮೊಂದಿಗೆ ವಿಷಯಗಳನ್ನು ಹಂಚಿಕೊಳ್ಳಲು ಅಂಜುತ್ತಾರೆ. ಯಾರಿಗೂ ಏನೂ ಹೇಳಬಾರದು ಎಂಬ ಪೋಷಕರ ಒತ್ತಡವೂ ಇರಬಹುದು. ಹಾಸ್ಟೆಲ್‌ಗಳ ವಾರ್ಡನ್‌ಗಳನ್ನು ಭೇಟಿ ಮಾಡುತ್ತೇವೆ. ವಿದ್ಯಾರ್ಥಿಗಳ ನಡವಳಿಕೆಯಲ್ಲಾಗುವ ಬದಲಾವಣೆಗಳನ್ನು ಕೇಳುತ್ತೇವೆ. ಒಂದೊಮ್ಮೆ ಅವರು ತರಗತಿಗಳನ್ನು ನಿರಂತರವಾಗಿ ತಪ್ಪಿಸುತ್ತಿದ್ದರೆ, ಅದರ ಕುರಿತೂ ಮಾಹಿತಿ ಪಡೆದುಕೊಳ್ಳುತ್ತೇವೆ. ಇದೆಲ್ಲವನ್ನೂ ಗಮನಿಸಿ ಆತ್ಮಹತ್ಯೆಯಂಥ ತೀವ್ರವಾದ ನಿರ್ಧಾರ ತೆಗೆದುಕೊಳ್ಳುವುದರ ಒಳಗೆ ಅಂಥ ವಿದ್ಯಾರ್ಥಿಗಳನ್ನು ಕಾಪಾಡುವ ಕೆಲಸ ಮಾಡುತ್ತೇವೆ’ ಎನ್ನುತ್ತಾರೆ ಕೋಟಾದ ಹೆಚ್ಚುವರಿ ಎಸ್‌ಪಿ ಚಂದ್ರಶೀಲ್ ಠಾಕೂರ್. ಇವರೇ ಈ ವಿಭಾಗದ ಮುಖ್ಯಸ್ಥರು.

ಸಹಾಯವಾಣಿಗೆ ಕರೆ ಬಂದು ತೀವ್ರತರವಾದ ನಿರ್ಧಾರ ಕೈಗೊಳ್ಳುವ ಮುನ್ನವೇ ವಿದ್ಯಾರ್ಥಿಗಳನ್ನು ಕಾಪಾಡಿದ ಹಲವು ಉದಾಹರಣೆಗಳು ಈ ‘ವಿದ್ಯಾರ್ಥಿ ಸಹಾಯ ವಿಭಾಗ’ದಲ್ಲಿ ಇದೆ.

ಮತ್ತೆ ನಿರ್ದೇಶನದತ್ತ ಕಿಚ್ಚ ಸುದೀಪ್

ಕಿಚ್ಚ ಸುದೀಪ್ ತಾವು ನಿರ್ದೇಶಿಸಿದ್ದ ‘ಮಾಣಿಕ್ಯ’ ಚಿತ್ರ ಬಿಡುಗಡೆಯಾಗಿ 10 ವರ್ಷಗಳ ನಂತರ ಮತ್ತೆ ನಿರ್ದೇಶನಕ್ಕಿಳಿಯುತ್ತಿದ್ದಾರೆ. ಕೆ.ಆರ್.ಜಿ ಸ್ಟುಡಿಯೋಸ್ ನಿರ್ಮಿಸುತ್ತಿರುವ ‘ಕೆಕೆ’ ಚಿತ್ರದಲ್ಲಿ ಸುದೀಪ್ ನಟಿಸುವ ಜೊತೆಗೆ ಆ್ಯಕ್ಷನ್ ಕಟ್ ಕೂಡ ಹೇಳುತ್ತಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಪೋಸ್ಟರ್ ಬಿಡುಗಡೆಗೊಂಡಿದೆ. ‘ಮೈ ಆಟೋಗ್ರಾಫ್’ ಚಿತ್ರದ ಮೂಲಕ ನಿರ್ದೇಶಕರಾದ ಸುದೀಪ್ ಇದುವರೆಗೂ ಆರು ಚಿತ್ರಗಳನ್ನು ನಿರ್ದೇಶನ ಮಾಡಿದ್ದಾರೆ.

ಮುಂದಿನ ಚಿತ್ರ ‘ಮ್ಯಾಕ್ಸ್’:

ವಿ ಕ್ರಿಯೇಷನ್ಸ್ ಮತ್ತು ಕಿಚ್ಚ ಕ್ರಿಯೇಷನ್ಸ್ ಒಟ್ಟಾಗಿ ನಿರ್ಮಿಸುತ್ತಿರುವ ಸುದೀಪ್ ಅವರ 46ನೇ ಚಿತ್ರಕ್ಕೆ ‘ಮ್ಯಾಕ್ಸ್’ ಎಂದು ಶೀರ್ಷಿಕೆ ಇಡಲಾಗಿದೆ. ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು, ಸುದೀಪ್ ಮತ್ತೆ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿರುವ ಸುಳಿವನ್ನು ಟೀಸರ್‌ನಲ್ಲಿ ನೀಡಲಾಗಿದೆ.

ಕನ್ನಡ, ಹಿಂದಿ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಚಿತ್ರ ಇದಾಗಿದ್ದು, ಚೆನ್ನೈ ಸೇರಿದಂತೆ ಹಲವೆಡೆ ಚಿತ್ರೀಕರಣ ನಡೆಯುತ್ತಿದೆ. ಇದಲ್ಲದೇ ‘ಕಬ್ಜ’ ನಿರ್ದೇಶಕ ಆರ್. ಚಂದ್ರು ಜೊತೆ ಸುದೀಪ್ ಮತ್ತೊಂದು ಸಿನಿಮಾ ಘೋಷಿಸಿದ್ದಾರೆ.



‘ಕೆಕೆ’ ಚಿತ್ರದ ಪೋಸ್ಟರ್



'ಪರ್ಯಾಯ' ಚಿತ್ರತಂಡ

‘ಪರ್ಯಾಯ’ ಮಾರ್ಗ ಹುಡುಕಿ ಹೊರಟರು..

ಬದುಕಿನಲ್ಲಿ ಹಣ ಮಾಡಬೇಕೆಂಬ ಆಸೆಗೆ ಬೀಳುವ ಅಂಧ, ಕಿವಿ ಕೇಳದ, ಮಾತುಬಾರದವರು ಅಡ್ಡದಾರಿ ಹಿಡಿದು ಹೋಗುವ ಕಥೆ ಹೊಂದಿರುವ ‘ಪರ್ಯಾಯ’ ಚಿತ್ರ ಸೆ.8ರಂದು ಬಿಡುಗಡೆಗೆ ಸಿದ್ಧವಾಗಿದೆ. ಮಮತಾ ಕ್ರಿಯೇಶನ್ಸ್ ಮೂಲಕ ರಾಜಕುಮಾರ್ ನಿರ್ಮಿಸಿ, ಒಬ್ಬ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ರಮಾನಂದ ಮಿತ್ರ ಆ್ಯಕ್ಷನ್–ಕಟ್ ಹೇಳಿದ್ದಾರೆ.

‘ಇಡೀ ಚಿತ್ರ ಉತ್ತರ ಕರ್ನಾಟಕದಲ್ಲಿ ಚಿತ್ರೀಕರಣಗೊಂಡಿದೆ. ಹೀಗಾಗಿ ಆ ಭಾಗದಲ್ಲಿಯೇ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುತ್ತೇವೆ. ಕಣ್ಣು ಕಾಣದ, ಕಿವಿ ಕೇಳದ, ಮಾತು ಬಾರದ ಮೂವರು ಮಿತ್ರರು ಬದುಕಿನಲ್ಲಿ ಏನೇನೋ ಪ್ರಯತ್ನಿಸುತ್ತಾರೆ. ಕೊನೆಗೆ ದಾರಿ ಕಾಣದೆ ಪರ್ಯಾಯ ಮಾರ್ಗ ಹುಡುಕುತ್ತಾರೆ. ಆ ಮಾರ್ಗ ಯಾವುದು ಎಂಬುದನ್ನು ಹಾಸ್ಯಮಯವಾಗಿ ಹೇಳಲಾಗಿದೆ. ಸಂಪೂರ್ಣ ಉತ್ತರ ಕರ್ನಾಟಕ ಸೊಗಡಿನ ಚಿತ್ರ’ ಎಂದರು ನಿರ್ದೇಶಕ ರಮಾನಂದ ಮಿತ್ರ.

ರಾಜಕುಮಾರ್, ರಂಜನ್ ಕುಮಾರ್, ಅರ್ಚನಾ ಶೆಟ್ಟಿ ಮೊದಲಾದವರು ಚಿತ್ರದಲ್ಲಿದ್ದಾರೆ. ಎ.ಟಿ. ರವೀಶ್ ಸಂಗೀತ, ಜಿ.ರಂಗಸ್ವಾಮಿ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಆಗಸ್ಟ್ 23ರಂದು ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಸಂಜೆ 6.04ರ ಹೊತ್ತಿಗೆ ಇಳಿಸಿ, ‘ಚಂದ್ರಯಾನ–3’ ಯಶಸ್ಸು ಗಳಿಸಿತ್ತು. ನಂತರ ಸುಮಾರು 7.40ರ ಹೊತ್ತಿಗೆ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ ಅವರು ಪಾರ್ಟಿ‌ವೊಂದರಲ್ಲಿ ನೃತ್ಯ ಮಾಡುತ್ತಿದ್ದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ‘ಚಂದ್ರಯಾನ–3 ಯಶಸ್ಸು ಗಳಿಸಿದ ನಂತರ ನಡೆದ ಇಸ್ರೊ ಡಿಸ್ಕೊ ಪಾರ್ಟಿ ಇದು. ಇದರಲ್ಲಿ ಸೋಮನಾಥ ಅವರು ನೃತ್ಯ ಮಾಡುತ್ತದ್ದಾರೆ’ ಎಂಬ ಬರಹದೊಂದಿಗೆ ವಿಡಿಯೊವನ್ನು ಹಂಚಿಕೊಳ್ಳಲಾಯಿತು. ಆದರೆ, ಇದು ಸುಳ್ಳು ಸುದ್ದಿ.



ಈ ವಿಡಿಯೊವನ್ನು ಮೊದಲು ಹಂಚಿಕೊಂಡವರು ತಾನು ಪತ್ರಕರ್ತ ಎಂದು ಹೇಳಿಕೊಂಡಿರುವ ಸಿದ್ದಾರ್ಥ್ ಎಂ.ಪಿ. ವಿಡಿಯೊದೊಂದಿಗೆ ಚಂದ್ರಯಾನದ ಯಶಸ್ಸಿನ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಪೋಸ್ಟ್ ಹಂಚಿಕೊಂಡಿದ್ದರು. ಇದು ಭಾರಿ ಸಂಖ್ಯೆಯಲ್ಲಿ ಹರಿದಾಡಿತು. ಕೇವಲ ಎರಡು ನಿಮಿಷಗಳ ಅಂತರದಲ್ಲಿ ಸಿದ್ದಾರ್ಥ್ ಅವರು ‘ಈ ವಿಡಿಯೊ ಇಂದಿನ ರಾತ್ರಿಯ ವಿಡಿಯೊವಲ್ಲ’ ಎಂದು ಬರೆದುಕೊಂಡಿದ್ದರು. ‘ಜಿ20 ಪ್ರಯುಕ್ತ ಬೆಂಗಳೂರಿನಲ್ಲಿ ಇಸ್ರೊ ಕಾರ್ಯಕ್ರಮವೊಂದನ್ನು ಜುಲೈನಲ್ಲಿ ಆಯೋಜಿಸಿತ್ತು. ಆ ವೇಳೆ ನಡೆದಿದ್ದ ಸಾಂಸ್ಕೃತಿಕ ಕಾರ್ಯಕ್ರಮದ ವೇಳೆ ನಾನೇ ಈ ವಿಡಿಯೊವನ್ನು ಚಿತ್ರೀಕರಿಸಿದ್ದೆ’ ಎಂದು ಸಿದ್ದಾರ್ಥ್ ಅವರು ಪಿಟಿಐಗೆ ತಿಳಿಸಿದ್ದಾರೆ. ಸೋಮನಾಥ ಅವರು ಚಂದ್ರಯಾನ–3ರ ಯಶಸ್ಸಿನ ನಂತರ ಈ ಪಾರ್ಟಿಯಲ್ಲಿ ಭಾಗವಹಿಸಿಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಸೆಪ್ಟೆಂಬರ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಪಂಚಮಿ ಗಂ. 16-43 ನಕ್ಷತ್ರ: ಅಶ್ವಿನಿ ಗಂ. 09-27 ಯೋಗ: ಧ್ರುವ ಗಂ. 24-59 ಕರಣ: ತೈತಿಲ ಗಂ. 16-43, ಸಿಂಹ ಮಾಸದ 18 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 2.

ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-23 ಸೂರ್ಯಾಸ್ತ : 06-36

ಮುಸ್ಲಿಂ ದಿನಾಂಕ : 18 ಸಫರ್

ದಿನ ವಿಶೇಷ: ಶ್ರೀ ಮಾಧವ ದೇವರ ತಿಥಿ (ಅಸ್ಸಾಂ)

ಅದೃಷ್ಟ ಸಂಖ್ಯೆ : 4, 11

ಮೇಷ: ಅದೃಷ್ಟ ನಿಮ್ಮೆಡೆಗಿದ್ದರೂ ಎಲ್ಲಾ ಕಾರ್ಯಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವುದು ಉತ್ತಮ. ನೂತನ ಯೋಜನೆ ರೂಪಿಸುವ ಬಗ್ಗೆ ನುರಿತ ವರೊಡನೆ ಚರ್ಚೆಗೆ ಈ ದಿನ ಸೂಕ್ತ. ನಿತ್ಯದ ಕೆಲಸಗಳು ಎಂದಿನಂತೆ ಸಾಗಲಿದೆ.

ವೃಷಭ: ಮಹತ್ವಾಕಾಂಕ್ಷೆ ಈಡೇರಿಕೆಯತ್ತ ಮನುಷ್ಯ ಪ್ರಯತ್ನದ ಜತೆಯಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟವನ್ನು ನಡೆಸುವ ತೀರ್ಮಾನ ಮಾಡಬಹುದು.

ಮಿಥುನ: ಬಹುದಿನಗಳ ಕನಸು ಸಾಕಾರಗೊಳ್ಳುವುದು, ಪ್ರಾಮಾಣಿಕತೆ, ಬುದ್ಧಿವಂತಿಕೆ, ಕೆಲಸದಲ್ಲಿನ ಶಿಸ್ತು ಗೌರವಯುತ ಹುದ್ದೆ ಅಲಂಕರಿಸಲು ಸಹಾಯ ಮಾಡಲಿದೆ, ಲೇವಾದೇವಿ ವ್ಯವಹಾರದವರಿಗೆ ಲಾಭ ಸಿಗುವುದು.

ಕರ್ಕಾಟಕ: ಸದುದ್ದೇಶ ಕಾರಣದಿಂದ ಈ ದಿನ ಕೆಲವು ಕೆಲಸವನ್ನು ಗೌಪ್ಯವಾಗಿ ನಿರ್ವಹಿಸಬೇಕಾಗುವುದು. ವ್ಯವಹಾರದಲ್ಲಿ ಮೋಸ ನಡೆದು ಹಣ ಸಂಗ್ರಹವಾಗಬಹುದು . ಆದರೆ, ಅದರ ದುಷ್ಫಲವನ್ನು ಅನುಭವಿಸುವಂತಾಗುತ್ತದೆ.

ಸಿಂಹ: ಆರಕ್ಷಕ ವರ್ಗದವರಿಗೆ ಅಥವಾ ರಕ್ಷಣಾ ಕಾರ್ಮಿಕರಿಗೆ ರಾತ್ರಿ ಪಾಳಿ ಪ್ರಾರಂಭವಾಗಬಹುದು. ಆಹಾರದಲ್ಲಿ ಆಗುವ ಬದಲಾವಣೆಯು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯ.

ಕನ್ಯಾ: ನಿಮ್ಮ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಮಗನ ಬೇಡಿಕೆ ಪೂರೈಸುವ ಪ್ರಯತ್ನಕ್ಕೆ ಹಲವಾರು ಅಡ್ಡಿ ಆತಂಕ ಎದುರಾಗುವುದು. ಊರಿನ ಜನರ ಚಿಂತೆಗಳಿಗೆ ನೀವೇ ಆಶ್ರಯ ಕೊಟ್ಟಂತೆ ಕಾಣುವುದು.

ತುಲಾ: ಆದಾಯ ಮತ್ತು ತೆರಿಗೆ ಅಧಿಕಾರಿಗಳಿಗೆ ದಿಢೀರ್ ವರ್ಗಾವಣೆಯಾಗುವ ಸಂಭವವಿದೆ. ನಿಮ್ಮ ಪ್ರೀತಿ ಪಾತ್ರರಿಂದ ನೆಮ್ಮದಿ ತರುವಂತಹ ಸನ್ನಿವೇಶಗಳು ನಡೆಯುತ್ತವೆ. ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ಪ್ರಯತ್ನ ನಡೆಸಿರಿ.

ವೃಶ್ಚಿಕ: ಪ್ರಿಯವಾದ ಮಾತು ಮತ್ತು ಸಕಾಲದ ಆರ್ಥಿಕ ನೆರವು ಸೋದರಿಯ ಸಂಸಾರ ನೆಲೆ ನಿಲ್ಲುವುದಕ್ಕೆ ಕಾರಣವಾಗಲಿದ್ದು, ಜವಾಬ್ದಾರಿ ಪೂರೈಸಿದ ತೃಪ್ತಿ ಈ ದಿನ ದೊರೆಯಲಿದೆ. ಧಾರ್ಮಿಕ ನಾಯಕರಿಗೆ ಶುಭವಾಗುವುದು.

ಧನು: ಸ್ವಂತ ಉದ್ಯೋಗಿಗಳಿಗೆ ಬರುವ ನೂತನ ಯೋಚನೆಗಳನ್ನು ಕೈ ಬಿಟ್ಟು ಈಗಿನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಕುಟುಂಬದ ಸದಸ್ಯರ ಜತೆಗೆ ಕಳೆಯುವ ಈ ದಿನದ ಸಮಯವು ಹಾಸ್ಯಮಯವಾಗಿರಲಿದೆ.

ಮಕರ: ವೃತ್ತಿ ಜೀವನದಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಳ್ಳುವ ತೀರ್ಮಾನ ನಿಮ್ಮ ಅಭಿವೃದ್ಧಿಗೆ ಕಾರಣವಾಗುವುದು. ರಾಜಕೀಯ ವಿಚಾರ ಚರ್ಚಿಸಲು ರಾಜಕೀಯ ಗುರುವಿನ ಸ್ಥಳಕ್ಕೆ ತೆರಳುವ ಸಂಭವ ಇರಲಿದೆ.


ಕುಂಭ: ನಿಮ್ಮ ಪ್ರಧಾನವಾದ ವೃತ್ತಿಗಿಂತ ಪ್ರವೃತ್ತಿಗೆ ಸಮಯ ಕೊಡುವಿಕೆ ಹೆಚ್ಚಲಿದೆ. ಗೃಹಕೃತ್ಯದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಿರಿ. ಹಣದ ಮುಗ್ಗಟ್ಟು ಕಾಡಲಿದ್ದು ಯೋಚನೆಗಳು ತಲೆಕೆಳಗಾದಂತೆ ಆಗುವುದು.

ಮೀನ: ವಿದ್ಯಾರ್ಥಿಗಳಿಗೆ ಇತರೆ ಚಟುವಟಿಕೆಯ ಬಗ್ಗೆ ಹೆಚ್ಚಿನ ಒಲವು ಮೂಡಿಬಂದು ವಿದ್ಯಾಭ್ಯಾಸದಲ್ಲಿ ಹಿನ್ನಡೆಯಾಗುವುದು. ಹರಾಜಿನಲ್ಲಿ ಆಸ್ತಿ ಖರೀದಿ ಎನ್ನುವ ರೀತಿಯಲ್ಲಿ ಸಂಪತ್ತು ಅಭಿವೃದ್ಧಿಯಾಗಲಿದೆ.

ನುಡಿ ಬೆಳಗು

ನಾವು ಹೇಗಿದ್ದೇವೆಯೋ ಹಾಗೇ ಕಾಣಿಸುತ್ತದೆ ಜಗತ್ತು





ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಇದೊಂದು ಜನಪ್ರಿಯ ಝೆನ್ ಕತೆ. ಬಹಳ ದೊಡ್ಡ ಪದವಿಗಳನ್ನು ಗಳಿಸಿದ್ದ ಪಂಡಿತರೊಬ್ಬರು ಒಮ್ಮೆ ಝೆನ್ ಮಾಸ್ಟರ್ ಒಬ್ಬರ ಬಳಿ ಬಂದು, ‘ನಾನು ನಿಮ್ಮ ಹತ್ತಿರ ಜ್ಞಾನದ ಕುರಿತಾಗಿ ಚರ್ಚೆ ಮಾಡಬೇಕೆಂದಿದ್ದೇನೆ’ ಎಂದು ಹೇಳಿದರು. ಆಗ ಝೆನ್ ಮಾಸ್ಟರ್ ‘ಜ್ಞಾನವೆಂಬುದು ಅಂತರಂಗದ ಬೆಳಕು. ಅದು ವಾದ ವಿವಾದದಿಂದ ಪರಿಹಾರ ಆಗುವಂಥದ್ದಲ್ಲ’ ಎಂದು ಹೇಳಿದರೂ ತಮ್ಮ ಪಾಂಡಿತ್ಯದ ಬಗ್ಗೆ ಅಪಾರ ಗರ್ವ ಹೊಂದಿದ್ದ ಪಂಡಿತರು ಒಪ್ಪದೇ ಅವರನ್ನು ವಾದಕ್ಕೆಳೆದರು. ಸ್ವಲ್ಪ ಹೊತ್ತಿನ ಚರ್ಚೆಯ ನಂತರ ಪಂಡಿತರು ಅಹಂಕಾರದ ನಗುನಗುತ್ತಾ ‘ನನಗೆ ನಿಮ್ಮ ಬಗ್ಗೆ ಏನೋ ಅನಿಸುತ್ತಿದೆ. ಅದನ್ನು ಹೇಳಲೇ’ ಎಂದು ಕೇಳಿದರು.

ಆಗ ಝೆನ್ ಮಾಸ್ಟರ್ ‘ನನಗೆ ಅದನ್ನು ಕೇಳುವಲ್ಲಿ ಯಾವ ಆಸಕ್ತಿಯೂ ಇಲ್ಲ. ಏಕೆಂದರೆ ನಾನು ಏನಾಗಿದ್ದೇನೋ ಅದೇ ಆಗಿದ್ದೇನೆ’ ಎಂದು ಉತ್ತರಿಸಿದರು. ಆದರೆ ಪಂಡಿತ ಮಹಾಶಯರು ಕೇಳಬೇಕಲ್ಲ. ‘ನನಗೆ ನಿಮ್ಮೊಡನೆ ಇಷ್ಟು ಹೊತ್ತು ಮಾತನಾಡಿದ ಮೇಲೆ ನಿಮ್ಮನ್ನು ನೋಡಿದರೆ ಸಗಣಿ ಮುದ್ದೆ ನೋಡಿದ ಹಾಗೆ ಅನಿಸುತ್ತದೆ’ ಎಂದರು. ಅದಕ್ಕೆ ನಸುನಗೆಯ ಪ್ರತಿಕ್ರಿಯೆ ಕೊಟ್ಟ ಮಾಸ್ಟರ್‌ಗೆ ‘ನನ್ನ ಬಗ್ಗೆ ನಿಮಗೇನು ಅನಿಸುತ್ತದೆ ಹೇಳಿ’ ಎಂದು ಒತ್ತಾಯಿಸಿದರು.

ಆಗ ಝೆನ್ ಮಾಸ್ಟರ್, ‘ನೀವು ನನ್ನ ಕಣ್ಣಿಗೆ ಬುದ್ಧನಂತೆ ಕಾಣಿಸುತ್ತಿದ್ದೀರಿ’ ಎಂದು ಉತ್ತರಿಸಿದರು. ಈ ಮಾತನ್ನು ಕೇಳಿದ ಪಂಡಿತರು, ದಿಗ್ವಿಜಯದ ನಗೆ ಬೀರುತ್ತಾ ಅಲ್ಲಿಂದ ತೆರಳಿದರು. ಮನೆಗೆ ಹೋದೊಡನೆ ಪತ್ನಿಯೊಡನೆ ನಡೆದದ್ದನ್ನು ಪಂಡಿತರು ವಿವರಿಸಿದರು. ಅದನ್ನು ಕೇಳಿದ ಪಂಡಿತರ ಪತ್ನಿ ನಗುತ್ತಾ ಹೀಗೆಂದರು, ‘ನಾನು ಈ ಝೆನ್ ಮಾಸ್ಟರ್‌ನ ಪ್ರವಚನ ಕೇಳಲು ಯಾವಾಗಲೂ ಹೋಗುತ್ತಿರುತ್ತೇನೆ. ಅವರು ಒಂದು ಮಾತನ್ನು ಸದಾ ಹೇಳುತ್ತಿರುತ್ತಾರೆ, ಅದೇನೆಂದರೆ ‘ನಾವು ಏನಾಗಿದ್ದೇವೆಯೋ ಅದನ್ನು ಇನ್ನೊಬ್ಬರಲ್ಲಿ ಕಾಣುತ್ತೇವೆ... ಹೀಗಾಗಿ ಝೆನ್ ಮಾಸ್ಟರ್‌ಗೆ ನಿಮ್ಮಲ್ಲಿ ಬುದ್ಧ ಕಾಣಿಸಿದ್ದಾನೆ, ಆದರೆ ನಿಮಗೆ ಝೆನ್ ಮಾಸ್ಟರ್ ಸಗಣಿ ಮುದ್ದೆಯಂತೆ ಕಂಡಿದ್ದಾರೆ’.

ನಾವು ಹೇಗಿರುತ್ತೇವೆಯೋ ಜಗತ್ತು ನಮಗೆ ಹಾಗೇ ಗೋಚರಿಸುತ್ತದೆ. ಎಲ್ಲವನ್ನು ಎಲ್ಲರನ್ನೂ ನಕಾರಾತ್ಮಕವಾಗಿ ನೋಡುವ ವ್ಯಕ್ತಿಗೆ ಜಗತ್ತಿನಲ್ಲಿ ಯಾವುದೂ ಸರಿ ಇಲ್ಲದಂತೆ ಕಾಣುತ್ತದೆ. ಪರಿಸ್ಥಿತಿಯನ್ನು ಧನಾತ್ಮಕವಾಗಿ ನೋಡುವ ವ್ಯಕ್ತಿ ಎಂತಹ ದುಸ್ತರ ಪರಿಸ್ಥಿತಿಯನ್ನು ಕೂಡ ಸರಿಯಾಗಿದೆ ಎಂದುಕೊಳ್ಳುತ್ತಾನೆ ಹಾಗೂ ಕೆಡುಕಿನಲ್ಲಿರುವ ಒಳಿತನ್ನು ಗುರುತಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿರುತ್ತಾನೆ. ಕಾಮಾಲೆ ಕಣ್ಣಿನವರಿಗೆ ಜಗತ್ತೇ ಹಳದಿಯಾಗಿ ತೋರುತ್ತದೆ ಎಂಬ ಮಾತಿನಂತೆ ತಮ್ಮಲ್ಲಿ ದೋಷವಿರುವ ಮಂದಿ ಇನ್ನೊಬ್ಬರ ದೋಷವನ್ನೇ ಹುಡುಕುತ್ತಿರುತ್ತಾರೆ. ತಮ್ಮ ಅಂತರಂಗವನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುವುದೇ ನಿಜವಾದ ಅರಿವಿನ ಹಾದಿ. ಈ ಹಾದಿಯಲ್ಲಿ ನಡೆದಾಗ ಮಾತ್ರ ಸರಿಯಾದ ಜ್ಞಾನ ಪ್ರಾಪ್ತಿ.

ಪದಬಂಧ 5431

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಲ್ಲರಿಗೂ ತಿಳಿದ ವಿಷಯ (4)

3.ಮಂಗಳಕರವಾದ ದ್ರವವನ್ನು ದೇವರಿಗೆ ಎರೆಯುವುದು (4)

5.ಸಿರಿತನವಲ್ಲ,ದುಡ್ಡಿಲ್ಲದಿರುವಿಕೆ (4)

7.ಮಸ್ತಕದ ಹತ್ತಿರವಿರುವ ಹೊತ್ತಿಗೆ (3)

8.ಕಾಡನ್ನು ಪಾಲನೆ ಮಾಡುವವನು (5)

11.ಉದಯ ಕಾಲದಲ್ಲಿ ಹಿಡಿದಿಟ್ಟ ನೀರು(3)

12.ದೇವಸ್ಥಾನದ ಸಭಾಮಂಟಪ (4)

14.ಸರಿಯಾಗಿ ಹೇಳಿದಿರಿ!ಇದು ಹರಿದಾಡುವ ಪ್ರಾಣಿ! (4)

15.ಈತ ಗುರುತುಳ್ಳ ವ್ಯಕ್ತಿ (4)

ಮೇಲಿಂದ ಕೆಳಕ್ಕೆ

1.ಮನಸ್ಸಿನ ಶಕ್ತಿ (4)

2.ಈತ ಆನೆ ನಡೆಸುವವನು (3)

4.ಕಲೆಸಿದ ಗೋಧಿ ಹಿಟ್ಟು (3)

6.ತಿರುಗಿಸಿದರೂ ಇದು ಹೊಸತು! (3)

7.ರೋಮಾಂಚನಕ್ಕೊಂದು ಪರ್ಯಾಯ ಪದ (3)


8.ವರ್ತಮಾನ ತಿಳಿಸಿದ ವ್ಯಾಪಾರಿ (3)

9.ಶುನಕದ ಹತ್ತಿರವಿರುವ ಬೆಳ್ಳುಳ್ಳಿ (3)

10.ಅಜಗಜಾಂತರದಲ್ಲೇ ಮನ್ಮಥನನ್ನು ಹುಡುಕಿ! (4)

11.ಉತ್ಸಾಹದೊಂದಿಗೆ ಸಂತೋಷವೂ ಬಂದಿದೆ (3)

13.ಯಾರೀಕೆ? ಬಲು ಬಿಂಕ ತೋರುತ್ತಿಹಳಲ್ಲಾ? (3)



5430ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಸಗೆ 4.ಮಸಣ 5.ತಹನಾಮೆ 6.ಹಳವಂಡ 8.ಟೆಸ 10.ಉಪಾ 13.ರಸಮಯ 14.ಪರಿಹಾಸ 15.ಗಾಚಾರ 16.ಕುಠಾರ

ಮೇಲಿಂದ ಕೆಳಕ್ಕೆ:
1.ಗ್ರಾಮಕೈಗಾರಿಕೆ 2.ಒಣಹರಟೆ 3.ಇನಾಮು 5.ತಡಸಲು 7.ಉದರಂಭರಣ 9.ಸಮರಸ 11.ಪಾಳೆಯಗಾರ 12.ಅರಿವು

ಸುಡೊಕು 5817

				6	8	1		3
9		6					7	
	8	3	7			2		6
6		1		5		7		9
			8	9	6			
8				7		5		2
3		9		1			2	
			6		7	9		4
7		8		2			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5816 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5







ಐ.ಟಿ. ವಿವರ: ತಪ್ಪು ತಿದ್ದುವುದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಆದಾಯ ತೆರಿಗೆ ವಿವರ ಸಲ್ಲಿಸುವಾಗ ಕೆಲವೊಮ್ಮೆ ತಿಳಿದೋ ತಿಳಿಯದೆಯೋ ತಪ್ಪುಗಳಾಗಿರುತ್ತವೆ. ಆದರೆ ಆ ದೋಷಗಳನ್ನು ಸರಿಪಡಿಸಿಕೊಳ್ಳಲು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 139(5) ಅಡಿಯಲ್ಲಿ ಅವಕಾಶವಿದೆ. ತಪ್ಪು ಆದಾಯ ತೆರಿಗೆ ವಿವರ ಸಲ್ಲಿಸಿರುವವರು ಸ್ವಯಂಪ್ರೇರಿತವಾಗಿ ಪರಿಷ್ಕೃತ ತೆರಿಗೆ ವಿವರ ಸಲ್ಲಿಸಬಹುದು. ಈ ವರ್ಷದ ಡಿಸೆಂಬರ್ 31ರ ಒಳಗಾಗಿ ಈ ಪ್ರಕ್ರಿಯೆ ಪೂರ್ಣಗೊಳಿಸಲು ಆದಾಯ ತೆರಿಗೆ ಇಲಾಖೆ ಅವಕಾಶ ನೀಡಿದೆ. ಜುಲೈ 31ರ ಬಳಿಕ, ತಡವಾಗಿ ಆದಾಯ ತೆರಿಗೆ ವಿವರ ಸಲ್ಲಿಸಿದವರಿಗೂ ಪರಿಷ್ಕೃತ ವಿವರ ಸಲ್ಲಿಸಲು ಅನುವು ಮಾಡಿಕೊಟ್ಟಿದೆ.

ಯಾವಾಗ ಪರಿಷ್ಕೃತ ವಿವರ ಸಲ್ಲಿಸಬೇಕು?: ಆದಾಯ ತೆರಿಗೆ ವಿವರ ಸಲ್ಲಿಸುವಾಗ ನೀವು ತಪ್ಪು ಮಾಡಿದ್ದರೆ, ಹೆಚ್ಚುವರಿ ಆದಾಯ ವರದಿ ಮಾಡುವುದನ್ನು ತಪ್ಪಿಸಿದ್ದರೆ, ಬಾಡಿಗೆ ಭತ್ಯೆ ಪಡೆಯಲು ಸಾಧ್ಯವಾಗಿದ್ದರೆ, ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡುವ ಬದಲು ಹಳೆಯ ತೆರಿಗೆ ಪದ್ಧತಿ ಆಯ್ದುಕೊಂಡಿದ್ದರೆ, ತಪ್ಪು ಬ್ಯಾಂಕ್ ಖಾತೆಯನ್ನು ನಮೂದಿಸಿದ್ದರೆ, ಫಾರಂ 26ಎಎಸ್ ತಡವಾಗಿ ನಮೂದಾಗಿದ್ದು ಟಿಡಿಎಸ್ ಕ್ರೆಡಿಟ್ ಪಡೆಯಲು ಸಾಧ್ಯವಾಗದಿದ್ದರೆ, ಬಂಡವಾಳ ವೃದ್ಧಿ ತೆರಿಗೆ ಪರಿಗಣಿಸದೆ ವಿವರ ಸಲ್ಲಿಸಿದ್ದರೆ... ಹೀಗೆ ಅನೇಕ ಕಾರಣಗಳಿಗೆ ಪರಿಷ್ಕೃತ ವಿವರ ಸಲ್ಲಿಸಬಹುದು.

ತಿದ್ದಿಕೊಂಡ ಸಂದೀಪ್: ಸಂದೀಪ್ (ಹೆಸರು ಬದಲಿಸಲಾಗಿದೆ) ಬೆಂಗಳೂರಿನ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಉದ್ಯೋಗಿ. ಜುಲೈನಲ್ಲಿ ಅವರು ಆದಾಯ ತೆರಿಗೆ ವಿವರ ಸಲ್ಲಿಸಿದ್ದರು. ವಿವರ ಸಲ್ಲಿಸುವಾಗ ಬ್ಯಾಂಕ್ ಬಡ್ಡಿಯಿಂದ ಬಂದಿರುವ ಆದಾಯ, ಷೇರುಗಳ ಡಿವಿಡೆಂಡ್ ಆದಾಯವನ್ನು ತೆರಿಗೆ ಲೆಕ್ಕಾಚಾರಕ್ಕೆ ಪರಿಗಣಿಸಿದರು. ಆದರೆ ಷೇರುಗಳು ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಂದ ಬಂದಿರುವ ಗಳಿಕೆಗೆ ಬಂಡವಾಳ ವೃದ್ಧಿ ತೆರಿಗೆ (ಕ್ಯಾಪಿಟಲ್ ಗೇನ್ಸ್ ಟ್ಯಾಕ್ಸ್) ಕಟ್ಟುವುದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಆದರೆ ಆಗಸ್ಟ್‌ನಲ್ಲಿ ವಾರ್ಷಿಕ ಮಾಹಿತಿ ವಿವರ ನೋಡಿದಾಗ ₹2.25 ಲಕ್ಷ ಆದಾಯ ಬಂಡವಾಳ ವೃದ್ಧಿ ತೆರಿಗೆಗೆ ಒಳಪಡುತ್ತದೆ ಎಂದು ತಿಳಿಯಿತು.

ಹೀಗಾದಾಗ ಸಂದೀಪ್‌ಗೆ ಮುಂದೇನು ಮಾಡುವುದು ಎಂಬ ಪ್ರಶ್ನೆ ಎದುರಾಯಿತು. ಕೂಡಲೇ ತೆರಿಗೆ ತಜ್ಞರನ್ನು ಸಂಪರ್ಕಿಸಿದಾಗ, ಹೆಚ್ಚುವರಿ ಗಳಿಕೆ ₹2.25 ಲಕ್ಷದ ಪೈಕಿ ₹1 ಲಕ್ಷ ದೀರ್ಘಾವಧಿ ಬಂಡವಾಳ ಗಳಿಕೆಯಾಗಿದ್ದರಿಂದ ಅದಕ್ಕೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ, ಇನ್ನುಳಿದ ₹1.25 ಲಕ್ಷಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ (ಎಸ್‌ಟಿಸಿಜಿ) ಶೇ 15ರಷ್ಟು ಕಟ್ಟಬೇಕು ಎನ್ನುವ ಮಾಹಿತಿ ಸಿಕ್ಕಿತು. ಅದರಂತೆ ಹೆಚ್ಚುವರಿ ₹18,750 ತೆರಿಗೆಯನ್ನು ಸಂದೀಪ್ ಪಾವತಿಸಿದರು. ನಿಗದಿತ ತೆರಿಗೆ ಕಟ್ಟದಿದ್ದರೆ ಆದಾಯ ತೆರಿಗೆ ಇಲಾಖೆ ನೋಟಿಸ್ ಕಳುಹಿಸುವ ಸಾಧ್ಯತೆಯಿತ್ತು. ಆದರೆ ಹೆಚ್ಚುವರಿ ತೆರಿಗೆ ಪಾವತಿಸಿ ಪರಿಷ್ಕೃತ ಆದಾಯ ತೆರಿಗೆ ವಿವರ ಸಲ್ಲಿಸಿದ ಕಾರಣ ಸಮಸ್ಯೆ ಬಗೆಹರಿಯಿತು. (ಹೆಚ್ಚಿನ ವಿವರಗಳಿಗೆ ಪಟ್ಟಿ ಗಮನಿಸಿ)

ಪರಿಷ್ಕೃತ ವಿವರ ಸಲ್ಲಿಸುವಾಗ ಗಮನಿಸಿ: ನಿಗದಿತ ಸಮಯದ ಒಳಗೆ ಎಷ್ಟು ಬಾರಿ ಬೇಕಾದರೂ ಪರಿಷ್ಕೃತ ಆದಾಯ ತೆರಿಗೆ ವಿವರ ಸಲ್ಲಿಸಬಹುದು. ಆದರೆ ಕಟ್ಟಿರುವ ತೆರಿಗೆ ಪಾಲಿನಲ್ಲಿ ಹೆಚ್ಚು ಹಣ ವಾಪಸ್ ಪಡೆಯಬೇಕು ಎನ್ನುವ ಕಾರಣಕ್ಕೆ ಪರಿಷ್ಕೃತ ವಿವರ ಸಲ್ಲಿಕೆ ಅನುಕೂಲವನ್ನು ದುರುಪಯೋಗ ಮಾಡಿಕೊಳ್ಳಬೇಡಿ. ತಪ್ಪು ಮಾಹಿತಿ ನೀಡಿ ಹೆಚ್ಚು ಹಣ ಹಿಂಪಡೆಯಲು ಯತ್ನಿಸಿದರೆ ಆ ವಿಷಯ ಆದಾಯ ತೆರಿಗೆ ಇಲಾಖೆಗೆ ತಿಳಿದು ನಿಮಗೆ ನೋಟಿಸ್ ಬರುವ ಸಾಧ್ಯತೆಯಿರುತ್ತದೆ. ಹಾಗಾಗಿ ನೈಜ ಪ್ರಕರಣಗಳಲ್ಲಿ ಮಾತ್ರ ಆದಾಯ ತೆರಿಗೆ ವಿವರ ಪರಿಷ್ಕರಣೆ ಮಾಡಿ.

ಹೀಗೆ ಪರಿಷ್ಕೃತ ವಿವರ ಸಲ್ಲಿಸಿ: ಈ ಹಿಂದೆ ಹೇಗೆ ಆನ್‌ಲೈನ್ ಮೂಲಕ ಆದಾಯ ತೆರಿಗೆ ವಿವರ ಸಲ್ಲಿಸಿರುವಿರೋ ಅದೇ ಮಾದರಿಯಲ್ಲಿ ಪರಿಷ್ಕೃತ ವಿವರ ಸಲ್ಲಿಸಿ. ಪರಿಷ್ಕೃತ ವಿವರ ಸಲ್ಲಿಸುವಾಗ ಸ್ವಯಂ ಪ್ರೇರಿತವಾಗಿ ಪರಿಷ್ಕೃತ ವಿವರ ಸಲ್ಲಿಸುತ್ತಿರುವಿರೋ ಅಥವಾ ನೋಟಿಸ್ ನೀಡಿದ ಕಾರಣಕ್ಕೆ ಪರಿಷ್ಕೃತ ವಿವರ ಸಲ್ಲಿಕೆ ಮಾಡುತ್ತಿರುವಿರೋ ಎನ್ನುವುದನ್ನು ನಮೂದಿಸಿ. ಮೊದಲ ಬಾರಿಗೆ ಸಲ್ಲಿಸಿದ ವಿವರಗಳನ್ನು ಪರಿಷ್ಕೃತ ವಿವರ ಸಲ್ಲಿಸುವಾಗ ಸರಿಯಾಗಿ ನಮೂದಿಸಿ, 15 ಅಂಕಿಗಳ ಸ್ವೀಕೃತಿ ಸಂಖ್ಯೆಯನ್ನು ಸೂಚಿಸಿ. ಮೊದಲ ವಿವರ ಮತ್ತು ಪರಿಷ್ಕೃತ ವಿವರದ ನಡುವೆ ಹೊಂದಾಣಿಕೆಯಾಗದಿದ್ದರೆ ಅರ್ಜಿ ತಿರಸ್ಕೃತವಾಗುತ್ತದೆ. ವಿವರ ಸಲ್ಲಿಕೆ ಬಗ್ಗೆ ಸರಿಯಾದ ಅರಿವಿಲ್ಲದಿದ್ದರೆ ತೆರಿಗೆ ತಜ್ಞರ ನೆರವು ಪಡೆಯಿರಿ.

ವಿವರಗಳು	ಸಲ್ಲಿಸಲಾಗಿರುವ ಆದಾಯ ತೆರಿಗೆ ವಿವರ	ಪರಿಷ್ಕೃತ ಆದಾಯ ತೆರಿಗೆ ವಿವರ
ವೇತನದಿಂದ ಬರುವ ಆದಾಯ	₹16 ಲಕ್ಷ	₹16 ಲಕ್ಷ
ಬಡ್ಡಿ ಮತ್ತು ಡಿವಿಡೆಂಡ್ ಗಳಿಕೆ	₹28,000	₹28,000
ಪಡೆದಿರುವ ವಿನಾಯಿತಿ, ರಿಯಾಯಿತಿ	₹3.5 ಲಕ್ಷ	₹3.5 ಲಕ್ಷ
ಬಂಡವಾಳ ವೃದ್ಧಿ ತೆರಿಗೆಗೆ ಒಳಪಡುವ ಆದಾಯ	ಇಲ್ಲ	₹2.25 ಲಕ್ಷ
ಪಾವತಿಸಬೇಕಿರುವ ತೆರಿಗೆ	₹1.88 ಲಕ್ಷ	₹2.06 ಲಕ್ಷ
ಕಟ್ಟಬೇಕಾಗುವ ಹೆಚ್ಚುವರಿ ತೆರಿಗೆ	₹18,750	

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆಯ ಲಯಕ್ಕೆ ಮರಳಿದ ಷೇರುಪೇಟೆ



ಸತತ ಐದು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಹಾದಿಗೆ ಮರಳಿವೆ. ಸೆಪ್ಟೆಂಬರ್ 1ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 65,387 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.77ರಷ್ಟು ಗಳಿಸಿಕೊಂಡಿದೆ. 19,435 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.87ರಷ್ಟು ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಮಂದಗತಿಯ ವಹಿವಾಟು, ಮುಂಗಾರು ಹಿನ್ನಡೆ, ತೈಲ ಬೆಲೆ ಹೆಚ್ಚಳ ಸೇರಿದಂತೆ ಹಲವು ನಕಾರಾತ್ಮಕ ಅಂಶಗಳಿದ್ದರೂ ಉತ್ತಮ ಜಿಡಿಪಿ ದರ ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿನ ಹೆಚ್ಚಳವು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ಸೂಚ್ಯಂಕ ಶೇ 6ರಷ್ಟು, ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 5.7ರಷ್ಟು ಮತ್ತು ಟೆಲಿಕಾಂ ಸೂಚ್ಯಂಕ ಶೇ 4.5ರಷ್ಟು ಜಿಗಿದಿವೆ. ಬಿಎಸ್‌ಇ ಪವರ್ ಮತ್ತು ಆಟೋ ಸೂಚ್ಯಂಕಗಳು ತಲಾ ಶೇ 3.4ರಷ್ಟು ಹೆಚ್ಚಳ ದಾಖಲಿಸಿವೆ. ಬಿಎಸ್‌ಇ ಎಫ್‌ಎಂಸಿಜಿ ಸೂಚ್ಯಂಕ ಶೇ 0.5ರಷ್ಟು ಕುಸಿದಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಟಾಟಾ ಸ್ಟೀಲ್, ಮಾರುತಿ ಸುಜುಕಿ ಇಂಡಿಯಾ, ಇಂಡಸ್ ಟವರ್ಸ್, ಜೊಮಾಟೊ, ಅವೆನ್ಯೂ ಸೂಪರ್‌ಮಾರ್ಟ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಡಿಎಲ್‌ಎಫ್ ಗಳಿಸಿಕೊಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,311.58 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹9,570 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುನ್ನೋಟ: ಈ ವಾರ ಬಿಜೋಟಿಕ್ ಕಮರ್ಷಿಯಲ್, ಕಾನ್‌ಕೋರ್ಡ್ ಬಯೋಟೆಕ್ ಲಿಮಿಟೆಡ್ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಸೂಚ್ಯಂಕಗಳ ಗತಿ ನಿರ್ಧರಿಸಲಿವೆ.

ಇಮ್ರಾನ್: ವಿಚಾರಣೆ ಮುಂದೂಡಿದ ವಿಶೇಷ ಕೋರ್ಟ್

ಇಸ್ಲಾಮಾಬಾದ್ (ಪಿಟಿಐ): ರಾಷ್ಟ್ರದ ರಹಸ್ಯಗಳನ್ನು ಬಹಿರಂಗಪಡಿಸಿದ ಪ್ರಕರಣದ ಆರೋಪಿಗಳಾದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಆಪ್ತ ಶಾ ಮಹಮ್ಮದ್ ಖುರೇಷಿ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಪಾಕಿಸ್ತಾನ ವಿಶೇಷ ನ್ಯಾಯಾಲಯ ಮುಂದೂಡಿದೆ.

ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ನ್ಯಾಯಾಲಯದ ವ್ಯಾಪ್ತಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ಬಳಿಕ ಈ ಅರ್ಜಿಯ ವಿಚಾರಣೆ ನಡೆಸಲಾಗುವುದು ಎಂದು ನ್ಯಾಯಾಲಯ ತಿಳಿಸಿದೆ.

ಏಳು ವಿವಿಧ ಪ್ರಕರಣಗಳಲ್ಲಿ ಪ್ರಕರಣಗಳಲ್ಲಿ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಅಧ್ಯಕ್ಷ ಇಮ್ರಾನ್ ಖಾನ್ ಸಲ್ಲಿಸಿರುವ ಬಂಧನ ಪೂರ್ವ ಜಾಮೀನು ಪಡೆಯುವ ಅರ್ಜಿಯ ವಿಚಾರಣೆಯನ್ನು ಸೋಮವಾರ ಲಾಹೋರ್ ಹೈಕೋರ್ಟ್ ನಡೆಸಲಿದೆ.

ರಿಯಲ್ ಎಸ್ಟೇಟ್ ವಲಯ: ಶೇ 38ರಷ್ಟು ಹೆಚ್ಚಿದ ಸಾಲ ನೀಡಿಕೆ



ಮುಂಬೈ (ಪಿಟಿಐ): ಗೃಹ ಮತ್ತು ರಿಯಲ್ ಎಸ್ಟೇಟ್ ವಲಯಕ್ಕೆ ಬ್ಯಾಂಕ್‌ಗಳು ನೀಡಿರುವ ಸಾಲವು ಜುಲೈನಲ್ಲಿ ಶೇಕಡ 38ಷ್ಟು ಬೆಳವಣಿಗೆ ಕಂಡಿದ್ದು, ರಿಯಲ್ ಎಸ್ಟೇಟ್ ವಲಯದ ಸಾಲದ ಒಟ್ಟು ಬಾಕಿಯ ₹28 ಲಕ್ಷ ಕೋಟಿ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಈಚಿನ ವರದಿ ತಿಳಿಸಿದೆ.

ಗೃಹ ಸಾಲದ (ಆದ್ಯತಾ ವಲಯ ಸಾಲವನ್ನೂ ಒಳಗೊಂಡು) ಬಾಕಿಯು ಜುಲೈನಲ್ಲಿ ಶೇ 37.4ರಷ್ಟು ಹೆಚ್ಚಾಗಿ ₹24.28 ಲಕ್ಷ ಕೋಟಿಗೆ ತಲುಪಿದೆ ಎಂದು ಆರ್‌ಬಿಐ ಬಿಡುಗಡೆ ಮಾಡಿರುವ '2023ರ ಜುಲೈನಲ್ಲಿ ಬ್ಯಾಂಕ್ ಸಾಲದ ವಲಯವಾರು ಬೆಳವಣಿಗೆ' ವರದಿಯಲ್ಲಿ ಹೇಳಲಾಗಿದೆ.

ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್‌ನ ಸಾಲ ಬಾಕಿಯು ಶೇ 38.1ರಷ್ಟು ಹೆಚ್ಚಾಗಿದ್ದು ₹4.07 ಲಕ್ಷ ಕೋಟಿ ಆಗಿದೆ.

ಸಾಲ ನೀಡಿಕೆ ಪ್ರಮಾಣದಲ್ಲಿ ಉತ್ತಮ ಬೆಳವಣಿಗೆ ಕಂಡಿದ್ದು, ರಿಯಲ್ ಎಸ್ಟೇಟ್ ವಲಯದಲ್ಲಿ ಒಟ್ಟು ಬೇಡಿಕೆಯು ಹೆಚ್ಚಿನ ಮಟ್ಟದಲ್ಲಿ ಚೇತರಿಕೆ ಕಂಡಿರುವುದರಿಂದ ಸಾಲ ನೀಡಿಕೆ ಉತ್ತಮ ಬೆಳವಣಿಗೆ ಕಂಡಿದೆ ಎಂದು ಅನರಾಕ್ ಸಂಸ್ಥೆಯ ಅಧ್ಯಕ್ಷ ಅನುಜ್ ಪುರಿ ತಿಳಿಸಿದ್ದಾರೆ.

ದಲಿತ ಉದ್ದಿಮೆದಾರರ ಜೊತೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಉದ್ದಿಮೆದಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಜೊತೆ ಸಭೆ ನಡೆಸಲಿದ್ದಾರೆ. ಸಭೆಯು ಬೆಂಗಳೂರಿನ ವಸಂತ ನಗರದ ಡಾ. ಬಾಬು ಜಗಜೀವನ ರಾಂ ಲಿಡ್ಕರ್ ಭವನದಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು		
	100 ಮೊಟ್ಟೆಗೆ	₹440
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹440

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹311-536
ದ್ವಿತಳಿ (ಬಿ.ವಿ) ₹444-673

ನಿವೃತ್ತ ಸೇನಾಧಿಕಾರಿಗೆ ಮಣಿಪುರ ಶಾಂತಿ ಸ್ಥಾಪನೆ ಹೊಣೆ

ಇಂಫಾಲ್: 2015ರಲ್ಲಿ ಮ್ಯಾನ್ಮರ್ ನೆಲದಲ್ಲಿ ನಡೆಸಿದ್ದ ನಿರ್ದಿಷ್ಟ ದಾಳಿಯಲ್ಲಿ (ಸರ್ಜಿಕಲ್ ಸ್ಟ್ರೈಕ್) ಪ್ರಮುಖ ಪಾತ್ರ ವಹಿಸಿದ್ದ ನಿವೃತ್ತ ಸೇನಾಧಿಕಾರಿಗೆ ಸಂಘರ್ಷ ಪೀಡಿತ ಮಣಿಪುರದಲ್ಲಿ ಶಾಂತಿ ಸ್ಥಾಪನೆಯ ಜವಾಬ್ದಾರಿ ನೀಡಲಾಗಿದೆ.

2 ತಿಂಗಳಲ್ಲಿ ಹಿಂಸಾಚಾರದಿಂದಾಗಿ 170 ಮಂದಿ ಮೃತಪಟ್ಟಿರುವ ಈಶಾನ್ಯ ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ಅಲ್ಲಿನ ಮಣಿಪುರ ಸರ್ಕಾರಕ್ಕೆ ನೆರವಾಗುವಂತೆ ನಿವೃತ್ತ ಕರ್ನಲ್ ನೆಕ್ಟರ್ ಸಂಜೆನ್‌ಬಮ್ ಅವರನ್ನು ಹಿರಿಯ ವರಿಷ್ಠಾಧಿಕಾರಿಯನ್ನಾಗಿ ಐದು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗಿದೆ. ಇವರು ಮಣಿಪುರ ಪೊಲೀಸ್ ಇಲಾಖೆ ಅಡಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.



ಗಣೇಶ ಬಂದ... ಮುಂಬೈನಲ್ಲಿ ಗಣೇಶ ಚತುರ್ಥಿ ಹಬ್ಬವು ಇದೇ 19ರಿಂದ ಹತ್ತು ದಿನಗಳವರೆಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭಕ್ತರು ಬೃಹತ್ ಆಕಾರದ ಗಣಪನ ಮೂರ್ತಿಗಳನ್ನು ಮೆರವಣಿಗೆಯೊಂದಿಗೆ ಭಾನುವಾರ ಕೊಂಡೊಯ್ದರು –ಎಎಫ್‌ಪಿ ಚಿತ್ರ

ಮಳೆ ಕೊರತೆ: ಇಳುವರಿ ಕುಂಠಿತ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಪ್ರದೇಶಗಳಲ್ಲಿ ಆಗಸ್ಟ್‌ನಲ್ಲಿ ಮಳೆ ಸುರಿಯದ ಕಾರಣ ಬೇಳೆಕಾಳು, ಹತ್ತಿ ಮತ್ತು ಸೊಯಾಬೀನ್ ಸೇರಿದಂತೆ ವಿವಿಧ ಬೆಳೆಗಳ ಇಳುವರಿ ಕುಂಠಿತವಾಗುವ ಸಾಧ್ಯತೆ ಇದೆ ಎಂದು ಕೃಷಿ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ, ತೆಲಂಗಾಣ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಮಳೆ ಕೊರತೆಯು ಮುಂಗಾರು ಬೆಳೆಗಳ ಮೇಲೆ ಪರಿಣಾಮ ಬೀರಲಿದೆ ಎಂದಿದ್ದಾರೆ.

ಈ ರಾಜ್ಯಗಳ ರೈತರು ಹೆಚ್ಚಾಗಿ ಎಣ್ಣೆಕಾಳು, ಬೇಳೆಕಾಳು, ಹತ್ತಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ಸೆಪ್ಟೆಂಬರ್ 1ರ ವರೆಗೆ ಅನಿಯಮಿತ ಮುಂಗಾರು ಮಳೆಯಿಂದಾಗಿ ದ್ವಿದಳ ಧಾನ್ಯಗಳ ಒಟ್ಟು ಬಿತ್ತನೆ ಪ್ರದೇಶವು ಶೇ 8.48 ರಷ್ಟು ಕುಂಠಿತವಾಗಿದ್ದು, ವರ್ಷದಿಂದ ವರ್ಷಕ್ಕೆ ಈ ಬೆಳೆಗಳ ಬಿತ್ತನೆ ಪ್ರದೇಶವು ಕುಂಠಿತವಾಗುತ್ತಿದೆ ಎಂದು ಹೇಳಿದ್ದಾರೆ.

ತೊಗರಿ ಬಿತ್ತನೆ ಪ್ರದೇಶ ಶೇ5.76ರಷ್ಟು, ಉದ್ದಿನ ಬೆಳೆ ಶೇ 13.5ರಷ್ಟು ಮತ್ತು ಹೆಸರು ಬೆಳೆಯ ಬಿತ್ತನೆ ಪ್ರದೇಶ ಶೇ7.7 ರಷ್ಟು ಕುಂಠಿತವಾಗಿದೆ. ಹತ್ತಿ ಬೆಳೆಯುವ ಪ್ರದೇಶ ಶೇ 2ರಷ್ಟು ಮತ್ತು ಎಣ್ಣೆ ಕಾಳು ಬಿತ್ತನೆ ಪ್ರದೇಶ ಶೇ1ರಷ್ಟು ಕುಂಠಿತವಾಗಿದೆ ಎಂದು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವ್ಯಭಿಚಾರ ಆರೋಪ: ಕಲ್ಲಿನಿಂದ ಹೊಡೆದು ಮಹಿಳೆಯ ಹತ್ಯೆ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ರಾಜಾನ್‌ಪುರ ಜಿಲ್ಲೆಯಲ್ಲಿ ಇತ್ತೀಚೆಗೆ ಮಹಿಳೆಯೊಬ್ಬರನ್ನು ವ್ಯಭಿಚಾರದ ಆರೋಪದ ಮೇಲೆ ಕಲ್ಲಿನಿಂದ ಹೊಡೆದು ಕೊಲ್ಲಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

20 ವರ್ಷದ ಮಹಿಳೆ ವಿರುದ್ಧ ಆಕೆಯ ಪತಿಯೇ ವ್ಯಭಿಚಾರದ ಆರೋಪ ಮಾಡಿದ್ದು, ಶುಕ್ರವಾರ ತನ್ನ ಇಬ್ಬರು ಸೋದರರ ಜತೆ ಸೇರಿ ಪತ್ನಿಯನ್ನು ಮರಕ್ಕೆ ಕಟ್ಟಿ ಕಲ್ಲುಗಳಿಂದ ಹೊಡೆದು ಕೊಂದಿದ್ದಾನೆ. ಇದಕ್ಕೂ ಮೊದಲು ಆಕೆಯನ್ನು ತೀವ್ರವಾಗಿ ಹಿಂಸಿಸಲಾಗಿದೆ. ಘಟನೆ ನಂತರ ಪತಿಯ ಸೋದರರು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯು ರಾಜಾನ್‌ಪುರದ ಅಲ್ಕಾನಿ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಪಾಕಿಸ್ತಾನದಲ್ಲಿ ಮರ್ಯಾದೆ ಹೆಸರಲ್ಲಿ ಪ್ರತಿ ವರ್ಷ 1,000 ಮಹಿಳೆಯರು ಹತ್ಯೆಗೀಡಾಗುತ್ತಾರೆ ಎಂದು ಮಾನವಹಕ್ಕು ಹೋರಾಟಗಾರರು ತಿಳಿಸಿದ್ದಾರೆ.

ಡ್ಯಾನ್ಯೂಬ್ ಬಂದರು ಮೇಲೆ ರಷ್ಯಾ ಡ್ರೋನ್ ದಾಳಿ

ಕೀವ್ (ಎಎಫ್‌ಪಿ): ಉಕ್ರೇನಿನ ದಕ್ಷಿಣ ಒಡೆಸಾ ಪ್ರದೇಶವನ್ನು ಗುರಿಯಾಗಿಸಿಕೊಂಡು ರಷ್ಯಾ ಭಾನುವಾರ ನಸುಕಿನಲ್ಲಿ ಡ್ರೋನ್ ದಾಳಿ ನಡೆಸಿದೆ. ಈ ದಾಳಿಯಲ್ಲಿ ನ್ಯಾಟೊ ಸದಸ್ಯ ರಾಷ್ಟ್ರ ರೊಮಾನಿಯಾದ ಗಡಿಯಲ್ಲಿರುವ ಉಕ್ರೇನ್‌ನ ಡ್ಯಾನ್ಯೂಬ್ ಬಂದರಿಗೆ ಹಾನಿಯಾಗಿದೆ. ರಷ್ಯಾ ಸೇನೆ ನಡೆಸಿರುವ ಈ ದಾಳಿಯನ್ನು ಬುಕಾರೆಸ್ಟ್ ತೀವ್ರವಾಗಿ ಖಂಡಿಸಿದ್ದು, ಇದೊಂದು 'ಸಮರ್ಥನೀಯವಲ್ಲ ಮತ್ತು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳಿಗೆ ವಿರುದ್ಧವಾದ ನಡೆ' ಎಂದು ಟೀಕಿಸಿದೆ.

ರೊಮಾನಿಯಾದಿಂದ ಉಕ್ರೇನ್ ಪ್ರತ್ಯೇಕಿಸುವ ಡ್ಯಾನ್ಯೂಬ್ ನದಿಯ ಬಂದರಿನ ರೆನಿಯಲ್ಲಿದ್ದ ಇಂಧನ ಸಂಗ್ರಹಗಾರವನ್ನು ಗುರಿಯಾಗಿಸಿ ದಾಳಿ ನಡೆಸಿರುವುದಾಗಿ ರಷ್ಯಾ ಸೇನೆ ಹೇಳಿದೆ. ಒಡೆಸಾ ಮೇಲೆ ಗುರಿಯಾಗಿಸಿದ್ದ 22 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಹೇಳಿದೆ.

ರಾಣಿ 2ನೇ ಎಲಿಜಬೆತ್ ಸ್ಮಾರಕ ನಿರ್ಮಾಣಕ್ಕೆ ಚಿಂತನೆ

ಲಂಡನ್ (ಪಿಟಿಐ): ಬ್ರಿಟನ್ ರಾಣಿಯಾಗಿದ್ದ ಎರಡನೇ ಎಲಿಜಬೆತ್ ಅವರ ಶಾಶ್ವತ ಸ್ಮಾರಕ ಸ್ಥಾಪನೆಗೆ ಚಿಂತನೆ ನಡೆಯುತ್ತಿದೆ. 2026ರಲ್ಲಿ ರಾಣಿಗೆ 100 ವರ್ಷ ಪೂರ್ಣಗೊಳ್ಳಲಿದೆ. ಹೀಗಾಗಿ ಆ ವರ್ಷವೇ ಸ್ಮಾರಕವನ್ನು ಅನಾವರಣಗೊಳಿಸುವ ಯೋಜನೆ ಇದೆ ಎಂದು ಬ್ರಿಟನ್ ಸರ್ಕಾರ ಭಾನುವಾರ ಘೋಷಿಸಿದೆ.

ರಾಣಿ ಎಲಿಜಬೆತ್ ತಮ್ಮ 96ನೇ ವಯಸ್ಸಿನಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿ ಮೃತಪಟ್ಟಿದ್ದಾರೆ.

ಮೊದಲನೇ ಪುಣ್ಯ ತಿಥಿ ಸಮೀಪಿಸುತ್ತಿದ್ದು, ಈ ನಡುವೆ ಸರ್ಕಾರ ತನ್ನ ನೂತನ ಯೋಜನೆ ಬಗ್ಗೆ ಘೋಷಿಸಿದೆ.

ಜಿ–20: ಪಾಕಿಸ್ತಾನ, ಚೀನಾ ಆಕ್ಷೇಪಗಳನ್ನು ತಳ್ಳಿಹಾಕಿದ ನರೇಂದ್ರ ಮೋದಿ

ದೇಶದ ವಿವಿಧೆಡೆ ಸಭೆ: ಸಮರ್ಥನೆ

ನವದೆಹಲಿ(ಪಿಟಿಐ): ಅರುಣಾಚಲ ಪ್ರದೇಶ, ಜಮ್ಮು–ಕಾಶ್ಮೀರದಲ್ಲಿ ಜಿ–20ಗೆ ಸಂಬಂಧಿಸಿದ ಸಭೆಗಳನ್ನು ಆಯೋಜಿಸಿದ ಭಾರತದ ಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.



‘ತನ್ನ ಭಾಗವಾಗಿರುವ ಪ್ರತಿಯೊಂದು ಪ್ರದೇಶದಲ್ಲಿ ಭಾರತವು ಜಿ–20 ಸಭೆಗಳನ್ನು ನಡೆಸುವುದು ಸಹಜ’ ಎಂದೂ ಹೇಳಿದ್ದಾರೆ.

ಭಾರತವು ಅಧ್ಯಕ್ಷ ಸ್ಥಾನದಲ್ಲಿರುವ ಜಿ–20 ಸಂಘಟನೆಯ ಶೃಂಗಸಭೆಯು ಸೆ. 9 ಹಾಗೂ 10ರಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ, ಪಿಟಿಐ ಸುದ್ದಿಸಂಸ್ಥೆಗೆ ಮೋದಿ ಅವರು ಸಂದರ್ಶನ ನೀಡಿದ್ದು, ಜಿ–20 ಅಧ್ಯಕ್ಷ ಸ್ಥಾನದ ಮಹತ್ವ ಸೇರಿದಂತೆ ಹಲವಾರು ಪ್ರಚಲಿತ ವಿದ್ಯಮಾನಗಳ ಕುರಿತು ಮಾತನಾಡಿದ್ದಾರೆ.

‘ಪಾಕಿಸ್ತಾನ, ಚೀನಾದ ಆಕ್ಷೇಪದ ಹೊರತಾಗಿಯೂ ಜಮ್ಮು–ಕಾಶ್ಮೀರ, ಅರುಣಾಚಲ ಪ್ರದೇಶದಲ್ಲಿ ಜಿ–20 ಸಭೆಗಳನ್ನು ನಡೆಸಿ, ವಿಶ್ವ ನಾಯಕರಿಗೆ ಯಾವ ಸಂದೇಶವನ್ನು ನಾವು ರವಾನಿಸಿದಂತಾಗಿದೆ’ ಎಂಬ ಪಿಟಿಐ ಪ್ರಧಾನ ಸಂಪಾದಕ ವಿಜಯ ಜೋಶಿ ಅವರ ಪ್ರಶ್ನೆಗೆ ಮೋದಿ ಮೇಲಿನಂತೆ ಉತ್ತರ ನೀಡಿದ್ದಾರೆ.

‘ಭಾರತ: 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದೆ’

‘2047ರ ಹೊತ್ತಿಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪೈಕಿ ಒಂದಾಗಲಿದೆ. ಉಳಿದ ದೇಶಗಳಿಗೆ ಹೋಲಿಸಿದರೆ ನಮ್ಮ ಅರ್ಥ ವ್ಯವಸ್ಥೆಯು ಹೆಚ್ಚು ಒಳಗೊಳ್ಳುವಿಕೆ ಹಾಗೂ ನಾವೀನ್ಯದಿಂದ ಕೂಡಿರಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಕಳೆದ ಒಂಬತ್ತು ವರ್ಷಗಳ ಅವಧಿಯಲ್ಲಿ ದೇಶದ ಆರ್ಥಿಕತೆ, ಶಿಕ್ಷಣ, ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳನ್ನು ತರಲಾಗಿದೆ. ದೇಶದ ಈ ಪ್ರಗತಿಯು ರಾಜಕೀಯ ಸ್ಥಿರತೆ ಹಾಗೂ ಸುಧಾರಣೆಗಳ ಉಪ ಉತ್ಪನ್ನವೇ ಆಗಿದೆ’ ಎಂದು ಪ್ರತಿಪಾದಿಸಿದರು.

ಸಂದರ್ಶನದಲ್ಲಿ ಪ್ರಸ್ತಾಪಗೊಂಡ ಪ್ರಮುಖ ಅಂಶಗಳು

- **2014ರ ನಂತರ ಸ್ಥಿರ ಸರ್ಕಾರವಿದ್ದ ಕಾರಣ ನೀತಿ–ನಿರೂಪಣೆ, ಅನುಷ್ಠಾನದಲ್ಲಿ ಹೆಚ್ಚು ಸ್ಪಷ್ಟತೆ ಸಾಧ್ಯವಾಗಿದೆ**
- **ವಿಶ್ವಸಂಸ್ಥೆಯಲ್ಲಿ ಕಾಲಕ್ಕೆ ತಕ್ಕಂತೆ ಸುಧಾರಣೆ ಅಗತ್ಯವಿದೆ. ಎಲ್ಲ ದೇಶಗಳ ಧ್ವನಿಯಾಗಿ ವಿಶ್ವಸಂಸ್ಥೆ ಕಾರ್ಯನಿರ್ವಹಿಸಬೇಕು**
- **ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳು ಸಾಲದ ಸುಳಿಗೆ ಸಿಲುಕಿರುವುದು ಕಳವಳಕಾರಿ ವಿಷಯ. ಇಂತಹ ದೇಶಗಳು ಈಗ ವಿತ್ತೀಯ ಶಿಸ್ತಿಗೆ ಮಹತ್ವ ನೀಡುತ್ತಿವೆ**
- **ಬೇಜವಾಬ್ದಾರಿಯ ಹಣಕಾಸು ನೀತಿ ಹಾಗೂ ಜನಪ್ರಿಯ ಯೋಜನೆಗಳು ಅಲ್ಪಾವಧಿಯಲ್ಲಿ ರಾಜಕೀಯವಾಗಿ ಫಲ ನೀಡಬಹುದು. ಆದರೆ, ದೀರ್ಘಾವಧಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಬಹು ದೊಡ್ಡ ಬೆಲೆ ತೆರಬೇಕಾಗುತ್ತದೆ. ಹೀಗಾಗಿ ರಾಜ್ಯಗಳು ಹಣಕಾಸು ಶಿಸ್ತು ಕುರಿತು ಹೆಚ್ಚು ಎಚ್ಚರ ವಹಿಸಬೇಕು**
- **ಆಫ್ರಿಕಾ ಒಕ್ಕೂಟಕ್ಕೆ ಜಿ–20ಯ ಪೂರ್ಣ ಪ್ರಮಾಣದ ಸದಸ್ಯತ್ವ ನೀಡಬೇಕು ಎಂಬುದು ಭಾರತದ ಒತ್ತಾಸೆ. ಪ್ರತಿಯೊಂದು ದೇಶಕ್ಕೆ, ಪ್ರತಿಯೊಬ್ಬರ ಧ್ವನಿಗೆ ಪ್ರಾತಿನಿಧ್ಯ ಸಿಗದ ಹೊರತು ಮನುಕುಲದ ಭವಿಷ್ಯಕ್ಕಾಗಿ ರೂಪಿಸುವ ಯಾವುದೇ ಯೋಜನೆ ಯಶಸ್ಸು ಕಾಣುವುದಿಲ್ಲ ಎಂಬುದು ಭಾರತದ ದೃಢ ನಂಬಿಕೆ**

ಬಿಜೆಪಿ–ವಿಪಕ್ಷಗಳ ಜಟಾಪಟಿ

ನವದೆಹಲಿ(ಪಿಟಿಐ): ‘ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್’ ಮಾದರಿಯು ವಿಶ್ವ ಕಲ್ಯಾಣಕ್ಕೆ ಮಾರ್ಗದರ್ಶಿ ತತ್ವವಾಗಬಲ್ಲದು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯು ಬಿಜೆಪಿ ಮತ್ತು ವಿಪಕ್ಷಗಳ ನಡುವಿನ ಜಟಾಪಟಿಗೆ ಕಾರಣವಾಗಿದೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಮೋದಿ ಅವರು ಈ ‘ಮಾದರಿ’ ಕುರಿತು ಪ್ರಸ್ತಾಪಿಸಿದ್ದರು.

‘ಈ ಹಿಂದಿನ 67 ವರ್ಷಗಳಿಗೆ ಹೋಲಿಸಿದಾಗ, ದೇಶದಲ್ಲಿ ಕಳೆದ 9 ವರ್ಷಗಳ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾಣಬಹುದು’ ಎಂದು ಬಿಜೆಪಿ ಮುಖಂಡ ಅನಿಲ್ ಆಂಟನಿ ಹೇಳಿದ್ದಾರೆ.

‘ಇಂಡಿಯಾ’ ಗುಂಪಿನ ನಾಯಕರು ಪ್ರಧಾನಿಯನ್ನು ಟೀಕಿಸಿದ್ದಾರೆ. ‘ಜಿ–20 ಶೃಂಗಕ್ಕಾಗಿ ರಸ್ತೆಗಳನ್ನು ಅಂದಗೊಳಿಸಲಾಗುತ್ತಿದೆ. ಆದರೆ, ದೇಶದ ಯುವಕರು ಉದ್ಯೋಗ ಕೇಳುತ್ತಿದ್ದಾರೆ’ ಎಂದು ಕಾಂಗ್ರೆಸ್ ಸಂಸದೆ ರಂಜೀತ್ ರಂಜನ್ ಟೀಕಿಸಿದ್ದಾರೆ.

‘ಕಳೆದ 42 ವರ್ಷಗಳಲ್ಲೇ ನಿರುದ್ಯೋಗ ಪ್ರಮಾಣ ಗರಿಷ್ಠ ಮಟ್ಟ ತಲುಪಿದೆ. ಇಂಧನ, ಔಷಧಗಳ ಬೆಲೆಗಳು ಕೈಗೆಟುಕಲಾರದಷ್ಟು ಹೆಚ್ಚಿವೆ’ ಎಂದು ಎಎಪಿ ಸಂಸದ ಸಂಜಯಸಿಂಗ್ ಟೀಕಿಸಿದ್ದಾರೆ. ಆರ್‌ಜೆಡಿ ಸಂಸದ ಮನೋಜ್ ಝಾ ಅವರೂ ಮೋದಿ ಹೇಳಿಕೆಗಳನ್ನು ಟೀಕಿಸಿದ್ದಾರೆ.

‘ಹಿಂದೆ ಎಲ್ಲಾ ಸಭೆಗಳು ದೆಹಲಿಗೆ ಸೀಮಿತವಾಗಿರುತ್ತಿದ್ದವು. ಈ ಹಿಂದಿನ ಸರ್ಕಾರಗಳು ಇಂಥ ವಿಚಾರದಲ್ಲಿ ದೇಶದ ಇತರ ಭಾಗಗಳ ಜನರಲ್ಲಿ ವಿಶ್ವಾಸ ಹೊಂದಿರಲಿಲ್ಲ ಅನಿಸುತ್ತದೆ’ ಎಂದೂ ಹೇಳಿದ್ದಾರೆ.

‘ಇದು ಯುದ್ಧದ ಯುಗವಲ್ಲ’ ಎಂಬುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ನೀವು ಹೇಳಿದ್ದ ಮಾತನ್ನು ಜಗತ್ತೇ ಒಪ್ಪಿತ್ತು. ಅಧ್ಯಕ್ಷ ಸ್ಥಾನದಲ್ಲಿರುವ ಭಾರತವು ಈ ವಿಚಾರವಾಗಿ ಜಿ-20 ಸದಸ್ಯ ರಾಷ್ಟ್ರಗಳಲ್ಲಿ ಹೇಗೆ ಒಮ್ಮತ ಮೂಡಿಸಲಿದೆ’ ಎಂಬ ಪ್ರಶ್ನೆಗೆ, ‘ಯಾವುದೇ ರೀತಿಯ ಸಂಘರ್ಷವಿರಲಿ, ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕವೇ ಬಗೆಹರಿಸಿಕೊಳ್ಳಬೇಕು. ಜಿ-20 ಅಧ್ಯಕ್ಷ ಸ್ಥಾನದಲ್ಲಿರಲಿ ಅಥವಾ ಇಲ್ಲದಿರಲಿ ಇದೇ ಭಾರತದ ದೃಢ ನಿಲುವು’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆತ್ಮಹತ್ಯೆ ತಡೆಗೆ ಹೊಸ ಕ್ರಮ

ಕೋಟ (ರಾಜಸ್ಥಾನ)(ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯ ‘ಹಬ್’ ಎನಿಸಿಕೊಂಡಿರುವ ರಾಜಸ್ಥಾನದ ಕೋಟ ಸದ್ಯ ವಿದ್ಯಾರ್ಥಿಗಳ ಸರಣಿ ಆತ್ಮಹತ್ಯೆಗಳಿಂದ ತತ್ತರಿಸಿದೆ. ಇದನ್ನು ತಡೆಯುವ ಪ್ರಯತ್ನವಾಗಿ ಪೊಲೀಸರು ‘ದರ್ವಾಜೆ ಪೇ ದಸ್ತಕ್ (ಬಾಗಿಲು ಬಡಿಯುವುದು)’ ವಿನೂತನ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.

‘ರಾತ್ರಿ 11 ಗಂಟೆಯ ಸುಮಾರಿಗೆ ಪ್ರತಿ ವಿದ್ಯಾರ್ಥಿಯ ಕೊಠಡಿಯ ಬಾಗಿಲು ಬಡಿಯುವುದನ್ನು ರೂಢಿ ಮಾಡಿಕೊಳ್ಳುವಂತೆ ವಾರ್ಡನ್, ಪಿಜಿ, ಮೆಸ್ ಕೆಲಸಗಾರರಿಗೆ ತಿಳಿಸಿದ್ದೇವೆ. ವಿದ್ಯಾರ್ಥಿಗಳು ಸರಿಯಾಗಿದ್ದಾರೆಯೇ ಎಂದು ಅವರನ್ನು ಕೇಳಿ ತಿಳಿದುಕೊಳ್ಳುವಂತೆ ಸೂಚನೆ ನೀಡಿದ್ದೇವೆ’ ಎಂದು ಕೋಟದ ಎಎಸ್‌ಪಿ ಚಂದ್ರಶೀಲ್ ಠಾಕೂರ್ ಪಿಟಿಐಗೆ ತಿಳಿಸಿದರು.

ಸ್ಫೋಟಕ ಪತ್ತೆ ತಪ್ಪಿದ ದುರಂತ



ರಜೌರಿ/ ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಭಾನುವಾರ ಸುಧಾರಿತ ಸ್ಫೋಟಕವನ್ನು ಸಮಯಕ್ಕೆ ಸರಿಯಾಗಿ ಪತ್ತೆ ಮಾಡಿ ಬಹುದೊಡ್ಡ ದುರಂತವನ್ನು ತಪ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು–ಪೂಂಛ್ ರಾಷ್ಟ್ರೀಯ ಹೆದ್ದಾರಿಯ ಕಾಲುವೆಯೊಂದರ ಸಮೀಪ ಸುಧಾರಿತ ಸ್ಫೋಟಕವಿದ್ದ ಟಿಫಿನ್ ಬಾಕ್ಸ್ ಪತ್ತೆಯಾಗಿತ್ತು. ತಕ್ಷಣವೇ ಸಮೀಪದ ಸೇನಾ ಶಿಬಿರದ ಮೂರು ತಂಡಗಳು ಸ್ಥಳಕ್ಕೆ ದೌಡಾಯಿಸಿದವು. ಬಾಂಬ್ ನಿಷ್ಕ್ರಿಯ ದಳವೂ ಸ್ಥಳಕ್ಕೆ ಆಗಮಿಸಿ ಯಾವುದೇ ಹಾನಿಯಾಗದಂತೆ ಸ್ಫೋಟಕವನ್ನು ನಿಷ್ಕ್ರಿಯಗೊಳಿಸಿತು.

ಮುಂಜಾಗ್ರತಾ ಕ್ರಮವಾಗಿ ಜನನಿಬಿಡ ಹೆದ್ದಾರಿಯಲ್ಲಿ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ದಲಿತನ ಮೇಲೆ ಹಲ್ಲೆ: ನಾಲ್ವರ ಬಂಧನ

ಹೈದರಾಬಾದ್ (ಪಿಟಿಐ): ಮೇಕೆ ಮತ್ತು ಕಬ್ಬಿಣದ ಪೈಪ್ ಕಳವು ಮಾಡಿದ್ದಾನೆಂದು ಶಂಕಿಸಿ ಪರಿಶಿಷ್ಟ ಜಾತಿಯ ವ್ಯಕ್ತಿಯನ್ನು ದನದ ಕೊಟ್ಟಿಗೆಯಲ್ಲಿ ತಲೆಕೆಳಗು ಮಾಡಿ ನೇತು ಹಾಕಿ, ವ್ಯಕ್ತಿ ಮತ್ತು ಆತನ ಕುಟುಂಬ ಸದಸ್ಯರು ಹಲ್ಲೆ ನಡೆಸಿದ ಪ್ರಕರಣ ತೆಲಂಗಾಣದ ಮಂಚೇರಿಯಲ್ ಜಿಲ್ಲೆಯಲ್ಲಿ ನಡೆದಿದೆ. ನಾಲ್ವರನ್ನು ಬಂಧಿಸಲಾಗಿದೆ.

ಜಿಲ್ಲೆಯ ಮಂಡಮರ್ರಿ ಮಂಡಲ್‌ನಲ್ಲಿ ಸೆ.1ರಂದು ಈ ಪ್ರಕರಣ ನಡೆದಿದೆ. ‘ದಲಿತ ವ್ಯಕ್ತಿಯನ್ನು ಕೊಟ್ಟಿಗೆಯಲ್ಲಿ ತಲೆಕೆಳಗಾಗಿ ನೇತುಹಾಕಿ, ದೊಣ್ಣೆಯಿಂದ ಹೊಡೆದು, ಬೆಂಕಿ ಹಚ್ಚಿದ್ದಾರೆ. ದಲಿತನೊಂದಿಗೆ ಈತನೊಂದಿಗೆ ಕೆಲಸ ಮಾಡುತ್ತಿದ್ದ, ಆತನ ಸ್ನೇಹಿತನನ್ನೂ ಇದೇ ರೀತಿ ಕಟ್ಟಿ ಹಾಕಿ ಚಿತ್ರಹಿಂಸೆ ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಹಲ್ಲೆಗೊಳಗಾದ ವ್ಯಕ್ತಿಯನ್ನು ಆತನ ಸಂಬಂಧಿಕರು ರಕ್ಷಿಸಿ, ಚಿಕಿತ್ಸೆ ಕೊಡಿಸಿದ್ದಾರೆ.

ಜಿ 20: ಭಾರತದ ಖಾದ್ಯಗಳ ಪರಿಚಯ

ನವದೆಹಲಿ (ಪಿಟಿಐ): ಮುಂದಿನ ವಾರ ಇಲ್ಲಿ ನಡೆಯಲಿರುವ ಜಿ 20 ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೇರಿದಂತೆ ಅನೇಕ ಜಾಗತಿಕ ನಾಯಕರು ಭಾಗವಹಿಸಲಿದ್ದು, ಭಾರತದ ವಿಶೇಷ ಖಾದ್ಯಗಳ ರುಚಿಯನ್ನು ಸವಿಯಲಿದ್ದಾರೆ.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಜಾಗತಿಕ ನಾಯಕರಿಗೆ ಸಿರಿಧಾನ್ಯಗಳಿಂದ ತಯಾರಾಗುವ ವಿಶೇಷ ತಿನಿಸುಗಳನ್ನು ನೀಡುವ ಮೂಲಕ ಪೌಷ್ಟಿಕಾಂಶ ಯುಕ್ತ ಧಾನ್ಯಗಳ ಮಹತ್ವವನ್ನು ತಿಳಿಸಲು ನಿರ್ಧರಿಸಲಾಗಿದೆ.

ಇದೇ ಸಂದರ್ಭದಲ್ಲಿ ಭಾರತ ಮಂಟಪ ಸಂಕೀರ್ಣದಲ್ಲಿ ಜಿ20 ಉದ್ಯಾನ ಸ್ಥಾಪಿಸುವ ಉದ್ದೇಶದಿಂದ ಜಾಗತಿಕ ನಾಯಕರು ತಮ್ಮ ದೇಶದ ರಾಷ್ಟ್ರೀಯ ಸಸಿಗಳನ್ನು ನೆಡಲಿದ್ದಾರೆ.

‘1000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಜಾಗತಿಕ ನಾಯಕರ ವಸತಿಗಾಗಿ ಕೇಂದ್ರ ದೆಹಲಿ, ಗುರುಗ್ರಾಮ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿನ ವಿವಿಐಪಿ ಹೋಟೆಲ್‌ಗಳನ್ನು ಕಾಯ್ದಿರಿಸಲಾಗಿದೆ’ ಎಂದು ಭಾರತ ಜಿ 20 ವಿಶೇಷ ಕಾರ್ಯದರ್ಶಿ ಮುಕ್ತೇಶ್ ಪರದೇಶಿ ತಿಳಿಸಿದ್ದಾರೆ.

ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿಕೊಂಡಿದ್ದು, ಸೆಪ್ಟೆಂಬರ್ 9–10ರಂದು ನವದೆಹಲಿಯಲ್ಲಿ ಶೃಂಗಸಭೆ ನಡೆಯಲಿದೆ.

ಪೊಲೀಸರಿಂದ ತಾಲೀಮು: ಜಿ 20 ಶೃಂಗದ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರು ಭಾನುವಾರ ಸಮವಸ್ತ್ರ ಧರಿಸಿ ತಾಲೀಮು ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಆತಿಥ್ಯ: ಶೃಂಗಕ್ಕೆ ಆಗಮಿಸುವ ವಿವಿಧ ದೇಶಗಳ ಮುಖ್ಯಸ್ಥರು ಮತ್ತು ಅವರ ಪತ್ನಿಗೆ ಐತಿಹಾಸಿಕ ಜೈಪುರ ಹೌಸ್‌ನಲ್ಲಿ ವಿಶೇಷ ಭೋಜನ ವ್ಯವಸ್ಥೆ ಏರ್ಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಖಾದ್ಯಗಳ ಪಟ್ಟಿಯಲ್ಲಿ ಸಿರಿಧಾನ್ಯಗಳಿಂದ ತಯಾರಾಗುವ ಭಕ್ಷ್ಯಗಳೂ ಇರಲಿವೆ ಎಂದು ತಿಳಿಸಿವೆ.

ಸಿಐಎಸ್‌ಎಫ್ ಭದ್ರತೆ: ಶೃಂಗಕ್ಕೆ ಆಗಮಿಸುವ ಗೌರವಾನ್ವಿತರಿಗಾಗಿ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನಲ್ಲಿ (ಎನ್‌ಜಿಎಂಎ) ವಿಶೇಷ ಕಾರ್ಯಕ್ರಮ ಆಯೋಜನೆಗೊಂಡಿದೆ. ಹೀಗಾಗಿ ಈ ಕೂಡಲೇ ಎನ್‌ಜಿಎಂಎನಲ್ಲಿ ಕೇಂದ್ರೀಯ ಔದ್ಯೋಗಿಕ ಸುರಕ್ಷಾ ಪಡೆಯನ್ನು (ಸಿಐಎಸ್‌ಎಫ್) ನಿಯೋಜಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಆದೇಶಿಸಿದೆ.

ಕ್ಷಮೆಯಾಚಿಸಿದ ರಷ್ಯಾ ರಾಯಭಾರಿ

ನವದೆಹಲಿ(ಪಿಟಿಐ): ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರ ಬಗ್ಗೆ ಹಗುರವಾಗಿ ಮಾತನಾಡಿ ಟೀಕೆಗೆ ಗುರಿಯಾದ ಬೆನ್ನಲ್ಲೇ ಎಚ್ಚೆತ್ತುಕೊಂಡ ಭಾರತದಲ್ಲಿನ ರಷ್ಯಾ ರಾಯಭಾರಿ ಡೆನಿಸ್ ಅಲಿಪೊವ್ ಅವರು ಭಾನುವಾರ ತಮ್ಮ ಹೇಳಿಕೆಗೆ ಕ್ಷಮೆಯಾಚಿಸಿ, ಲಾವ್ರೊವ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ನನ್ನ ಮಾತುಗಳು ತೇಜೋವಧೆ ಮಾಡುವಂತಿರುವುದರಿಂದ ಕ್ಷಮಿಸಿ. ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರು ಮಹಿಳೆಯರ ಜತೆಗೆ ಸಂಭಾವಿತ ವ್ಯಕ್ತಿಯಾಗಿ ಜನಪ್ರಿಯರು ಎಂದು ಹೇಳುವುದು ನನ್ನ ಉದ್ದೇಶವಾಗಿತ್ತು. ಲಾವ್ರೊವ್ ಅವರು ತಮ್ಮ ಬುದ್ಧಿಶಕ್ತಿ, ವರ್ಚಸ್ಸು ಮತ್ತು ಚತುರತೆಯಿಂದಾಗಿ ಪುರುಷರಲ್ಲೂ ಮೆಚ್ಚುಗೆ ಪಡೆದಿದ್ದಾರೆ’ ಎಂದು ಅಲಿಪೊವ್ ಭಾನುವಾರ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಶುಕ್ರವಾರ ದಕ್ಷಿಣ ಏಷ್ಯಾ ವಿದೇಶಿ ಬಾತ್ಮೀದಾರರ ಸಂಘ (ಎಫ್‌ಸಿಸಿಎಸ್ ಸೌತ್ ಏಷ್ಯಾ) ಆಯೋಜಿಸಿದ್ದ ಮಾಧ್ಯಮ ಸಂವಾದದ ವೇಳೆ ಪತ್ರಕರ್ತರೊಬ್ಬರು, ರಷ್ಯಾ ಅಧ್ಯಕ್ಷ ಪುಟಿನ್ ಅವರು ಜಿ20 ಶೃಂಗಸಭೆಗೆ ಗೈರು ಹಾಜರಾಗುವ ನಿರ್ಧಾರ ತೆಗೆದುಕೊಂಡಿರುವ ಬಗ್ಗೆ ಪ್ರಶ್ನಿಸಿ, ಅವರು ಭಾರತಕ್ಕೆ ಬಂದಿದ್ದರೆ ಚೆನ್ನಾಗಿರುತ್ತಿತ್ತು ಮತ್ತು ಪುಟಿನ್ ಅವರು ರಷ್ಯಾ ಮಹಿಳೆಯರಲ್ಲಿ ಹೇಗೆ ಜನಪ್ರಿಯತೆ ಗಿಟ್ಟಿಸಿದ್ದಾರೆ ಎಂದು ತಮಾಷೆ ದಾಟಿಯಲ್ಲಿ ಅಲಿಪೊವ್ ಅವರನ್ನು ಕೇಳಿದ್ದರು.

ಪ್ರಶ್ನೆ ಕೇಳಿದ ಮಾಧ್ಯಮ ಪ್ರತಿನಿಧಿಗೆ ಧನ್ಯವಾದ ಹೇಳಿದ್ದ ಅಲಿಪೊವ್, ‘ಲಾವ್ರೊವ್ ವಿವಾಹಿತ. ಅವರು ಆಗಮಿಸುತ್ತಿದ್ದಾರೆ. ಆದರೆ, ಅವರು ಸ್ತ್ರೀಲೋಲ’ ಎಂದು ಉತ್ತರಿಸಿದ್ದರು. ಅಲಿಪೊವ್ ಹೇಳಿಕೆ ಸಭಿಕರನ್ನು ನಗೆಗಡಲಲ್ಲಿ ತೇಲಿಸಿತ್ತು. ಲಾವ್ರೊವ್ ಅವರು ಜಿ20 ಶೃಂಗಸಭೆಯಲ್ಲಿ ರಷ್ಯಾ ಪ್ರತಿನಿಧಿಸಲಿದ್ದಾರೆ.



ಎತ್ತುಗಳ ಓಟ... ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಮರ್ಗತ್‌ಮ್ಹನೆ ಗ್ರಾಮದಲ್ಲಿ ‘ನಂಗ್ರಾಣಿ’ ಉತ್ಸವದ ಅಂಗವಾಗಿ ಭಾನುವಾರ ನಡೆದ ಸಾಂಪ್ರದಾಯಿಕ ಎತ್ತುಗಳ ಓಟದ ಸ್ಪರ್ಧೆಯ ಮೈನವಿರೇಳಿಸುವ ನೋಟ –ಪಿಟಿಐ ಚಿತ್ರ

ಹಿಂದೆಯೂ ಸಮಿತಿ ಮುಂದೆ ಮಿಶ್ರ ಅಭಿಪ್ರಾಯ ವ್ಯಕ್ತ

‘ಏಕಕಾಲ ಚುನಾವಣೆ: ಹಲವು ಪ್ರಶ್ನೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಒಂದು ರಾಷ್ಟ್ರ, ಒಂದು ಚುನಾವಣೆ’ ಚಿಂತನೆಯು ವಾಸ್ತವಿಕ ನೆಲೆಗಟ್ಟಿನಲ್ಲಿ ಕಾರ್ಯಸಾಧುವಲ್ಲ ಹಾಗೂ ಇದು, ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ’ ಎಂದು ವಿರೋಧಪಕ್ಷಗಳು ಟೀಕಿಸಿವೆ.

ಇಂಡಿಯಾ ಅರ್ಥಾತ್ ಭಾರತವು ರಾಜ್ಯಗಳ ಒಕ್ಕೂಟ. ‘ಒಂದು ದೇಶ, ಒಂದು ಚುನಾವಣೆ’ ಚಿಂತನೆಯು ಒಕ್ಕೂಟ ಮತ್ತು ಎಲ್ಲ ರಾಜ್ಯಗಳ ಮೇಲಿನ ದಾಳಿಯಾಗಿದೆ
ರಾಹುಲ್‌ಗಾಂಧಿ, ಸಂಸದ

ದೇಶಕ್ಕೆ ಮುಖ್ಯವಾದುದು ಏನು? ಒಂದು ದೇಶ ಒಂದು ಚುನಾವಣೆಯೇ ಅಥವಾ ಒಂದು ದೇಶ, ಒಂದೇ ಶಿಕ್ಷಣ ವ್ಯವಸ್ಥೆಯೇ?
ಅರವಿಂದ ಕೇಜ್ರಿವಾಲ್, ದೆಹಲಿ ಸಿ.ಎಂ

ಜನರಿಗೆ ಈಗ ಬೇಕಾಗಿರುವುದು ಒಂದು ದೇಶ, ಒಂದು ಪರಿಹಾರ. ಬಿಜೆಪಿಯ ದುರಾಡಳಿತದಿಂದ ಬಿಡುಗಡೆ ಹೊಂದುವುದು ಮಾತ್ರ
ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

ಏಕಕಾಲದಲ್ಲಿ ಚುನಾವಣೆ ಕುರಿತು ಪರಿಶೀಲನೆ ನಡೆದಿರುವ ಸಂದರ್ಭವೇ ಅನುಮಾನ ಮೂಡಿಸುತ್ತಿದೆ. ಸಮಿತಿಯ ಶಿಫಾರಸುಗಳು ಈಗಾಗಲೇ ನಿರ್ಧಾರವಾಗಿರಬಹುದು
ಜೈರಾಮ್ ರಮೇಶ್, ಕಾಂಗ್ರೆಸ್ ನಾಯಕ

ಲೋಕಸಭೆ, ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಧ್ಯತೆ ಪರಿಶೀಲಿಸಲು 2015ರಲ್ಲಿ ರಚಿಸಿದ್ದ ಸಂಸದೀಯ ಸ್ಥಾಯಿ ಸಮಿತಿಯ ಎದುರು ವಿವಿಧ ಪಕ್ಷಗಳು ಈ ಕುರಿತಂತೆ ಮಿಶ್ರ ಪ್ರತಿಕ್ರಿಯೆಯನ್ನು ದಾಖಲಿಸಿದ್ದವು.

ಆಗ ಕಾಂಗ್ರೆಸ್ ಪಕ್ಷ, ತೃಣಮೂಲ ಕಾಂಗ್ರೆಸ್, ಎನ್‌ಸಿಪಿ, ಸಿಪಿಐ, ಎಐಎಂಐಎಂ ಪಕ್ಷಗಳು ಏಕಕಾಲಕ್ಕೆ ಚುನಾವಣೆ ನಡೆಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಎಐಎಡಿಎಂಕೆ, ಮುಸ್ಲಿಂ ಲೀಗ್, ಡಿಎಂಡಿಕೆ, ಅಸ್ಸಾಂ ಗಣ ಪರಿಷತ್, ಅಕಾಲಿದಳ ಬೆಂಬಲಿಸಿದ್ದವು.

ಸಮಿತಿಯ ಎದುರು ಎಲ್ಲ ಪಕ್ಷಗಳು ಅಭಿಪ್ರಾಯ ದಾಖಲಿಸಿದ್ದವು. ‘ಏಕಕಾಲದಲ್ಲಿ ಚುನಾವಣೆಯನ್ನು ನಡೆಸುವುದು ವೆಚ್ಚ ಮಿತವ್ಯಯಿಯಾದ ಕ್ರಮ. ಆದರೆ, ಅದರ ಅನುಷ್ಠಾನವು ಕಷ್ಟಸಾಧ್ಯ ಎಂದು ಪ್ರತಿಪಾದಿಸಿದ್ದವು.

ಕಾಂಗ್ರೆಸ್ ಪಕ್ಷದ ಸದಸ್ಯ ಇ.ಎಂ. ಸುದರ್ಶನ್ ನಾಚಿಯಪ್ಪನ್ ನೇತೃತ್ವದ ‘ಸಿಬ್ಬಂದಿ, ಸಾರ್ವಜನಿಕ ಅಹವಾಲು, ಕಾನೂನು ಕುರಿತು ಸಂಸದೀಯ ಸ್ಥಾಯಿ ಸಮಿತಿ’ಯ ವರದಿಯನ್ನು 2015ರ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ‘ಕೆಲವು ವಿಧಾನಸಭೆಗಳಿಗೆ ಲೋಕಸಭೆ ಅವಧಿಯ ಮಧ್ಯಭಾಗದಲ್ಲಿ ಹಾಗೂ ಉಳಿದ ವಿಧಾನಸಭೆಗಳಿಗೆ ಲೋಕಸಭೆ ಅವಧಿಯ ಅಂತ್ಯದಲ್ಲಿ ಏಕಕಾಲಕ್ಕೆ ಚುನಾವಣೆಯನ್ನು ನಡೆಸಬೇಕು’ ಎಂದು ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು.

ಲಿಖಿತ ಅಭಿಪ್ರಾಯ ದಾಖಲಿಸಿದ್ದ ಕಾಂಗ್ರೆಸ್ ಪಕ್ಷ, ‘ಏಕಕಾಲದಲ್ಲಿ ಚುನಾವಣೆ ಸೂಕ್ತ ಎನಿಸಬಹುದು. ಆದರೆ, ಪ್ರಾಯೋಗಿಕವಲ್ಲ. ಕಾರ್ಯಸಾಧುವಲ್ಲ. ಇದರಿಂದ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಸಮತೋಲನ ತಪ್ಪಬಹುದು’ ಎಂದು ಹೇಳಿತ್ತು.

ಆದರೆ, ತೃಣಮೂಲ ಕಾಂಗ್ರೆಸ್ ಈ ಚಿಂತನೆಯನ್ನು ತಿರಸ್ಕರಿಸಿತ್ತು. ಅವಧಿಪೂರ್ವದಲ್ಲಿ ವಿಧಾನಸಭೆ ವಿಸರ್ಜನೆಗೆ ಸಂವಿಧಾನದಲ್ಲಿ ಅವಕಾಶವಿದೆ. ಆದರೆ, ರಾಷ್ಟ್ರೀಯ ತುರ್ತು ಸ್ಥಿತಿ ಘೋಷಣೆ ಹೊರತುಪಡಿಸಿ ನಿಗದಿತ ಅವಧಿ ಮೀರಿ ಕಾರ್ಯನಿರ್ವಹಿಸಲು ಅವಕಾಶವಿಲ್ಲ. ಚುನಾವಣೆ ಮುಂದೂಡುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ’ ಎಂದಿತ್ತು.

ಆದರೆ, ಇದೇ ಸಂದರ್ಭದಲ್ಲಿ ರಾಜ್ಯಗಳಲ್ಲಿ ಮುನಿಸಿಪಾಲಿಟಿಗಳು, ಪಂಚಾಯಿತಿಗಳು ಸೇರಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆಯನ್ನು ನಡೆಸುವ ಕುರಿತಂತೆ ತೃಣಮೂಲ ಕಾಂಗ್ರೆಸ್ ಪಕ್ಷವು ತನ್ನ ಸಹಮತವನ್ನು ವ್ಯಕ್ತಪಡಿಸಿತ್ತು.

ಸಿಪಿಐ ಪಕ್ಷವು ‘ಸರ್ಕಾರ ಬಹುಮತ ಕಳೆದುಕೊಂಡಾಗ ಮಧ್ಯಂತರ ಚುನಾವಣೆ ನಡೆಸುವುದು ಸೇರಿದಂತೆ ಹಲವು ಪ್ರಶ್ನೆಗಳಿವೆ. ಏಕಕಾಲದಲ್ಲಿ ಚುನಾವಣೆ ನಡೆಸಲು ಕೆಲ ವಿಧಾನಸಭೆಗಳ ಅವಧಿ ಕಡಿತಗೊಳಿಸುವ ಪ್ರಸ್ತಾಪ ಸರಿಯಲ್ಲ’ ಎಂದು ಹೇಳಿತ್ತು.

‘ಏಕಕಾಲದಲ್ಲಿ ಚುನಾವಣೆ ಕಾರ್ಯಸಾಧುವಲ್ಲ’ ಎಂದು ಎನ್‌ಸಿಪಿ ಪ್ರತಿಪಾದಿಸಿದ್ದರೆ, ಎಐಎಂಐಎಂ ಪಕ್ಷ, ‘ಸಂಕೀರ್ಣ ರಾಜಕೀಯ ಸ್ಥಿತಿಯಲ್ಲಿ ಇದು ಸ್ವಲ್ಪಮಟ್ಟಿಗೆ ಕಾರ್ಯಸಾಧು ಎನಿಸುತ್ತದೆ’ ಎಂದಿತ್ತು. ‘ಅತಂತ್ರ ವಿಧಾನಸಭೆ ರಚನೆ, ಸರ್ಕಾರಕ್ಕೆ ಬಹುಮತ ನಷ್ಟ ಸಾಧ್ಯತೆಗೆ ಸಂವಿಧಾನಕ್ಕೆ ತಿದ್ದುಪಡಿ ಪರಿಹಾರವಾಗಲಾರದು’ ಎಂದೂ ಹೇಳಿತ್ತು.

ಎಐಎಡಿಎಂಕೆ ಪಕ್ಷವು, ‘ಈಗ ಅಮೆರಿಕದಲ್ಲಿ ಇರುವಂತೆ ಏಕಕಾಲದಲ್ಲಿ ಚುನಾವಣೆ ನಡೆಸಲು ನಿಗದಿತ ಅವಧಿ ಮತ್ತು ದಿನಾಂಕವನ್ನು ಪೂರ್ವಭಾವಿಯಾಗಿ ನಿಗದಿಪಡಿಸುವುದು ಸೂಕ್ತ ಎನಿಸುತ್ತದೆ’ ಎಂದು ಸಲಹೆ ಮಾಡಿತ್ತು.

ಅಸ್ಸಾಂ ಗಣ ಪರಿಷತ್ ಪಕ್ಷವು, ‘ಸಣ್ಣ ಪಕ್ಷಗಳ ಮೇಲಿನ ಆರ್ಥಿಕ ಹೊರೆ ಕುಗ್ಗಲಿದೆ’ ಎಂದಿದ್ದರೆ, ಮುಸ್ಲಿಂ ಲೀಗ್ ‘ದೇಶದ ಸಮಯ, ಸಂಪನ್ಮೂಲ ಉಳಿಯಲಿದೆ’ ಎಂದು ಹೇಳಿತ್ತು.

ರಾಹುಲ್‌ಗೆ ಲಾಲು ‘ಪಾಕ ಪಾಠ’



ಲಾಲು ಮಾರ್ಗದರ್ಶನದಲ್ಲಿ ರಾಹುಲ್ ಅಡುಗೆ ಮಾಡಿದರು

ನವದೆಹಲಿ (ಪಿಟಿಐ): ಆರ್‌ಜೆಡಿ ಪರಮೋಚ್ಚ ನಾಯಕ ಲಾಲು ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ‘ಚಂಪಾರಣ್ ಮಟನ್’ ತಯಾರಿಸಿ ಉಣಬಡಿಸಿದ್ದಾರೆ.

ಹೌದು, ಲಾಲು ಪುತ್ರಿ ಮಿಸಾ ಭಾರತಿ ನಿವಾಸದಲ್ಲಿ ಅವರನ್ನು ಭೇಟಿಯಾಗಿ ರಾಜಕೀಯ ಕುಶಲೋಪರಿ ವಿಚಾರಿಸಿದ ರಾಹುಲ್, ಲಾಲು ಮಾರ್ಗದರ್ಶನದಲ್ಲಿ ‘ಚಂಪಾರಣ್ ಮಟನ್’ ತಯಾರಿಸಿದರು. ನಂತರ ಪ್ರಸಕ್ತ ರಾಜಕಾರಣ ಮತ್ತು ‘ದ್ವೇಷ ಎಲ್ಲೆಡೆ ಹರಡುತ್ತಿರುವ’ ಕುರಿತು ಚರ್ಚಿಸಿದರು. ಈ ಕುರಿತ ಏಳು ನಿಮಿಷದ ವಿಡಿಯೊವನ್ನು ರಾಹುಲ್ ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಬಿಜೆಪಿಯು ದ್ವೇಷ ಹರಡುತ್ತಿದೆ ಎಂಬ ರಾಹುಲ್ ಮಾತಿಗೆ ಪ್ರತಿಕ್ರಿಯಿಸಿದ ಲಾಲು ಪ್ರಸಾದ್, ‘ಕೇಸರಿ ಪಕ್ಷದ ರಾಜಕೀಯ ಹಸಿವಿಗೆ ಸಂತೃಪ್ತಿಯೇ ಇಲ್ಲ. ಆರ್ಥಿಕ ಸ್ಥಿತಿ ಯಾವಾಗ ಉತ್ತಮವಾಗಿರುತ್ತದೋ ಆಗ ದ್ವೇಷ ಹರಡುವಿಕೆ ಕಡಿಮೆಯಾಗುತ್ತದೆ. ಆರ್ಥಿಕ ಸ್ಥಿತಿ ಹದಗೆಟ್ಟಾದ ಹೆಚ್ಚುತ್ತದೆ. ಸದ್ಯ ದೇಶ ಆರ್ಥಿಕ ಬಿಕ್ಕಟ್ಟಿನಲ್ಲಿದೆ ಹಾಗಾಗಿ ದ್ವೇಷವೂ ಹೆಚ್ಚಾಗಿದೆ’ ಎಂದು ಹೇಳಿದರು.

‘ಬಡವರಿಂದ ಕಿತ್ತು ತಿನ್ನುವುದೇ ಬಿಜೆಪಿಯ ಮುಖ್ಯ ಉದ್ದೇಶ’ ಎಂದು ರಾಹುಲ್ ಹೇಳಿದರು.

‘ಬಡವರ ಮನೆಗಳಿಗೆ ಬೆಂಕಿ ಇಟ್ಟು, ಅವರ ಸಂಪತ್ತು, ಮನೆಯನ್ನು ನಾಶ ಮಾಡುವುದೇ ಅವರ (ಬಿಜೆಪಿ) ಗುರಿ. ಜನರನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ಬಯಸಿದ್ದಾರೆ’ ಎಂದು ಲಾಲು ಪ್ರತಿಕ್ರಿಯಿಸಿದರು. ಇದೇ ವೇಳೆ, ರಾಹುಲ್ ಗಾಂಧಿ, ‘ನನಗೆ ಅಥವಾ ಮುಂದಿನ ಪೀಳಿಗೆಯ ರಾಜಕಾರಣಿಗೆ ನಿಮ್ಮ ಸಲಹೆ ಏನು ಎಂದು ಕೇಳಿದರು.

‘ನಿಮ್ಮ ಪೋಷಕರು, ಅಜ್ಜ–ಅಜ್ಜಿ ಈ ದೇಶಕ್ಕೆ ಹೊಸ ಪಥವೊಂದನ್ನು ತೋರಿಸಿಕೊಟ್ಟರು. ಅದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು’ ಎಂದು ಲಾಲು ಹೇಳಿದರು. ನಂತರ ರಾಹುಲ್, ‘ರಾಜಕೀಯ ಮಸಾಲ ಅಂದರೆ ನಿಮ್ಮ ಪ್ರಕಾರ ಏನು?’ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಲಾಲು ‘ಅನ್ಯಾಯದ ವಿರುದ್ಧದ ಹೋರಾಟ’ ಎಂದು ಹೇಳಿದರು. ತಾವೇ ತಯಾರಿಸಿದ್ದ ಮಟನ್ ಊಟವನ್ನು ಸೋದರಿ ಪ್ರಿಯಾಂಕಾ ಗಾಂಧಿ ಅವರಿಗೂ ರಾಹುಲ್ ಕೊಂಡೊಯ್ದಿದ್ದರು. ವಿಡಿಯೊದ ಕೊನೆಯಲ್ಲಿ ಪ್ರಿಯಾಂಕಾ ಗಾಂಧಿ ‘ಚಂಪಾರಣ್ ಮಟನ್’ ರುಚಿ ಸವಿದ ದೃಶ್ಯವಿದೆ.

‘ಸನಾತನ ಧರ್ಮದ ನಿರ್ಮೂಲನೆ ಅಗತ್ಯ’

ಒಂದನೇ ಪುಟದಿಂದ...

ನಾಶಪಡಿಸಬೇಕು: ಸನಾತನ ಧರ್ಮವನ್ನು ಕೊರೊನಾ, ಮಲೇರಿಯಾ ಜೊತೆಗೆ ಸಮೀಕರಿಸಿದ ಉದಯನಿಧಿ ಅವರು ‘ಇಂಥದನ್ನು ವಿರೋಧ ಮಾಡಬಾರದು, ಸಂಪೂರ್ಣವಾಗಿ ನಾಶಪಡಿಸಬೇಕು’ ಎಂದು ಭಾನುವಾರ ಆಕ್ರೋಶ ಹೊರಹಾಕಿದರು.

ತಮಿಳುನಾಡು ಪ್ರಗತಿಪರ ಲೇಖಕರು ಮತ್ತು ಕಲಾವಿದರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ‘ಸನಾತನಂ ಎಂದರೇನು? ಈ ಪದ ಸಂಸ್ಕೃತದ್ದು. ಸಮಾನತೆ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದುದು. ಮತ್ತೇನೂ ಇಲ್ಲ’ ಎಂದು ವ್ಯಾಖ್ಯಾನಿಸಿದರು.

‘ಸನಾತನ ಧರ್ಮ ಜಾತಿ ಆಧಾರದಲ್ಲಿ ಜನರನ್ನು ವಿಂಗಡಿಸಲಿದೆ. ಮಾಜಿ ಸಿ.ಎಂ, ಪಕ್ಷದ ಮುಖಂಡ ಎಂ.ಕರುಣಾನಿಧಿ ಅವರು ಎಲ್ಲ ವರ್ಗದವರು ಒಂದೆಡೆ ವಾಸಿಸಲು ನಾಂದಿ ಹಾಡಿದ್ದರು. ಎಲ್ಲ ವರ್ಗದವರು ಅರ್ಚಕರಾಗುವಂತೆ ಕಾನೂನು ರೂಪಿಸಿದ್ದರು. ಸ್ಟಾಲಿನ್ ಅವರು ಅರ್ಚಕ ತರಬೇತಿ ಪಡೆದವರನ್ನು ದೇಗುಲಗಳಿಗೆ ನೇಮಿಸಿದರು’ ಎಂದು ಹೇಳಿದರು.

‘ನಾವು ಮಕ್ಕಳಿಗೆ ಜಾಗೃತರಾಗಿಸಲು ಶಿಕ್ಷಣವನ್ನು ಒದಗಿಸುತ್ತಿದ್ದೇವೆ. ಆದರೆ, ಮಕ್ಕಳು ಶಿಕ್ಷಣ ಪಡೆಯದಂತೆ ಮತೀಯವಾದಿಗಳು ಯೋಜನೆ ರೂಪಿಸುತ್ತಿದ್ದಾರೆ’ ಎಂದು ಟೀಕಿಸಿದರು.

ಗಂಭೀರ ಪರಿಣಾಮ: ವಿಎಚ್‌ಪಿ ಎಚ್ಚರಿಕೆ

ನವದೆಹಲಿ (ಪಿಟಿಐ): ಸನಾತನ ಧರ್ಮ ಕುರಿತ ಉದಯನಿಧಿ ಸ್ಟಾಲಿನ್ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ವಿಶ್ವ ಹಿಂದೂ ಪರಿಷತ್, ‘ಇಂಥ ಹೇಳಿಕೆಯಿಂದ ದೂರ ಉಳಿಯಬೇಕು. ಇಲ್ಲವೇ ಇದು ಗಂಭೀರ ಪರಿಣಾಮಕ್ಕೆ ಆಸ್ಪದವಾಗಲಿದೆ’ ಎಂದು ಎಚ್ಚರಿಸಿದೆ.

ಈ ಕುರಿತ ಹೇಳಿಕೆಯಲ್ಲಿ ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಅವರು, ‘ಉದಯನಿಧಿ ಹೇಳಿಕೆಗೆ ಸಹಮತ ಇದೆಯೇ ಎಂದು ತಮಿಳುನಾಡು ಸರ್ಕಾರ ಸ್ಪಷ್ಟನೆ ನೀಡಬೇಕು. ಹೌದು ಎಂದಾದರೆ, ನಾವು ರಾಜ್ಯದಲ್ಲಿ ತಮ್ಮ ಧರ್ಮ, ಸಂಪ್ರದಾಯ ಆಚರಿಸಲು ಜನರಿಗೆ ರಕ್ಷಣೆ ನೀಡುವಂತೆ ಕೇಂದ್ರವನ್ನು ಕೋರುತ್ತೇವೆ’ ಎಂದು ಹೇಳಿದ್ದಾರೆ.

ಉದಯನಿಧಿ ಅವರು ಸ್ವತಃ ತಮ್ಮ ಸಾಮರ್ಥ್ಯವನ್ನೇ ಗಣನೆಗೆ ತೆಗೆದುಕೊಂಡಿಲ್ಲ. ಇಂಥ ಹೇಳಿಕೆಗಳ ಪರಿಣಾಮಗಳು ಗಂಭೀರವಾಗಿರುತ್ತವೆ. ಸನಾತನ ಧರ್ಮದ ನಾಶಕ್ಕೆ ಕರೆ ಕೊಡುವವರು ಸ್ವತಃ ನಾಶಗೊಳ್ಳುತ್ತಾರೆ ಎಂಬುದನ್ನು ನೆನಪಿನಲ್ಲಿಡಬೇಕು ಎಂದು ಹೇಳಿದ್ದಾರೆ.

ಕ್ರಮಕ್ಕೆ ಬಿಜೆಪಿ ಆಗ್ರಹ: ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಯು ದ್ವೇಷಭಾಷಣವಾಗಿದೆ ಎಂದು ಪ್ರತಿಪಾದಿಸಿರುವ ಬಿಜೆಪಿಯು, ಸುಪ್ರೀಂ ಕೋರ್ಟ್ ಈ ಅಂಶವನ್ನು ಗಮನಿಸಿ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ವೋಟ್‌ಬ್ಯಾಂಕ್‌ಗಾಗಿ ಟೀಕೆ –ಶಾ: ‘ತುಷ್ಟೀಕರಣ ರಾಜಕಾರಣ, ವೋಟ್ ಬ್ಯಾಂಕ್‌ಗಾಗಿ ಸನಾತನ ಧರ್ಮವನ್ನು ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಅವಮಾನಿಸುತ್ತಿದ್ದಾರೆ’ ಎಂದು ಗೃಹ ಸಚಿವ ಅಮಿತ್ ಶಾ ಟೀಕಿಸಿದ್ದಾರೆ. ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ಸನಾತನ ಧರ್ಮದ ಬಗ್ಗೆ ಅವರು ಹೆಚ್ಚು ಮಾತನಾಡಿದಷ್ಟೂ, ಜನರಿಂದ ಕಣ್ಮರೆಯಾಗುತ್ತಾ ಹೋಗುತ್ತಾರೆ’ ಎಂದು ಶಾ ಪ್ರತಿಪಾದಿಸಿದರು.

ನಡ್ಡಾ ಕರೆ: ‘ಸನಾತನ ಧರ್ಮ ಹಾಗೂ ಸಂಪ್ರದಾಯಗಳ ವಿರುದ್ಧವಿರುವ ಇಂಥ ಪಕ್ಷಗಳನ್ನು ಚುನಾವಣೆಯಲ್ಲಿ ತಿರಸ್ಕರಿಸಬೇಕು’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಕರೆ ನೀಡಿದ್ದಾರೆ.

ಉದಯನಿಧಿ ಹೇಳಿಕೆ ಆಘಾತಕಾರಿ: ಪೇಜಾವರ ಶ್ರೀ

ಪ್ರಜಾವಾಣಿ ವಾರ್ತೆ

ಉಡುಪಿ: ‘ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು’ ಎಂದು ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಕರೆ ನೀಡಿರುವುದು ಆಘಾತಕಾರಿ’ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರತಿಕ್ರಿಯೆ ನೀಡಿದ್ದಾರೆ.

ಜವಾಬ್ದಾರಿಯುತ ಸ್ಥಾನದಲ್ಲಿರುವವರು ಸಮಾಜದಲ್ಲಿ ವಿಷಬೀಜ ಬಿತ್ತುವ ಕೆಲಸ ಮಾಡಬಾರದು. ಸನಾತನ ಧರ್ಮ ಸದಾಕಾಲ ಇರುವಂಥದ್ದು. ಸಮಾಜದಲ್ಲಿ ಸುಖ ಸಂತೋಷದಿಂದ ಬಾಳಬೇಕಾದರೆ ಧರ್ಮ ಅಗತ್ಯ. ಎಲ್ಲರಿಗೂ ಸುಖವನ್ನು ಬಯಸುವುದು ಸನಾತನ ಧರ್ಮವಾಗಿದೆ ಎಂದು ಪೇಜಾವರ ಸ್ವಾಮೀಜಿ ಹೇಳಿದ್ದಾರೆ.

ಕಾರ್ಯತಂತ್ರ: ‘ಇಂಡಿಯಾ’ ಸಿದ್ಧತೆ

ಒಂದನೇ ಪುಟದಿಂದ...

ಕೇಂದ್ರದ ತೀರ್ಮಾನಗಳಿಗೆ ಸಂಬಂಧಿಸಿದಂತೆ ಯಾವ ನಿಲುವು ತಳೆಯಬೇಕು ಎಂದು ಮುಖಂಡರು ಚರ್ಚಿಸಲಿದ್ದಾರೆ. ಅದಾನಿ ಸಮೂಹದ ಬೆಳವಣಿಗೆ ಕುರಿತಂತೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಸಬೇಕು ಎಂಬ ಬೇಡಿಕೆಯನ್ನು ಕಾಂಗ್ರೆಸ್ ಪುನರುಚ್ಚರಿಸಲಿದೆ. ಈ ವಿಷಯದಲ್ಲಿ ‘ಇಂಡಿಯಾ’ ಪಕ್ಷಗಳಲ್ಲಿ ಭಿನ್ನ ಅಭಿಪ್ರಾಯಗಳಿವೆ.

ಜೆಪಿಸಿ ತನಿಖೆ ಬೇಡಿಕೆಗೆ ತೃಣಮೂಲ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಸಹಮತವಿಲ್ಲ. ಇತರ ಪಕ್ಷಗಳು ಪರವಾಗಿವೆ. ಅದಾನಿ ಸಮೂಹದ ವಿರುದ್ಧ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೂರು ನೀಡುವ ಸಂದರ್ಭದಲ್ಲಿಯೂ ಎನ್‌ಸಿಪಿ ಕೈಜೋಡಿಸಿರಲಿಲ್ಲ.

ಈಗ ವದಂತಿ ಇರುವಂತೆ ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದರೆ ಯಾವ ನಿಲುವು ತಳೆಯಬೇಕು ಎಂದು ವಿರೋಧ ಪಕ್ಷಗಳ ಮೈತ್ರಿಕೂಟ ಚರ್ಚಿಸುವ ಸಾಧ್ಯತೆಯಿದೆ. ಎಸ್‌ಪಿ ಮತ್ತು ಆರ್‌ಜೆಡಿ ಪಕ್ಷಗಳು ಚುನಾವಣೆಯಲ್ಲಿ ಮಹಿಳೆಯರಿಗೆ ಒಬಿಸಿ ಕೋಟಾ ಬೇಕು ಎಂಬ ಬೇಡಿಕೆಯನ್ನು ಇಟ್ಟಿವೆ.

ಕೇಂದ್ರ ಸರ್ಕಾರವು ಸಂಸತ್ತಿನ ವಿಶೇಷ ಅಧಿವೇಶನ ಕುರಿತು ಕಾರ್ಯಸೂಚಿ ಪ್ರಕಟಿಸಿಲ್ಲ ಎಂಬುದು ಸಭೆಯಲ್ಲಿ ಚರ್ಚೆಗೆ ಬರಲಿದ್ದು, ವಿಶೇಷ ಅಧಿವೇಶನದ ಕಲಾಪದ ಕಾರ್ಯಸೂಚಿಯಿಂದ ಶೂನ್ಯವೇಳೆ, ಪ್ರಶ್ನೋತ್ತರ ಅವಧಿ ಕೈಬಿಟ್ಟಿರುವ ಸರ್ಕಾರದ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗುವ ಸಂಭವವಿದೆ.

ಅಧಿಕಾರಿಗಳಿಂದ ಪೂರಕ ಮಾಹಿತಿ

ಏಕಕಾಲದಲ್ಲಿ ಚುನಾವಣೆ ಕುರಿತು ಪರಿಶೀಲಿಸಲು ರಚನೆಯಾಗಿರುವ ಉನ್ನತ ಮಟ್ಟದ ಸಮಿತಿ ನೇತೃತ್ವ ವಹಿಸಿರುವ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ, ಕಾನೂನು ಸಚಿವಾಲಯದ ಅಧಿಕಾರಿಗಳು ಭಾನುವಾರ ಪೂರಕ ಮಾಹಿತಿಯನ್ನು ಒದಗಿಸಿದರು.

ಕಾನೂನು ಕಾರ್ಯದರ್ಶಿ ನಿತೇನ್ ಚಂದ್ರ, ಸಚಿವಾಲಯದ ಕಾರ್ಯದರ್ಶಿ ರೀತಾ ವಸಿಷ್ಠ, ಇತರ ಅಧಿಕಾರಿಗಳು ಕೋವಿಂದ್ ಅವರನ್ನು ಭೇಟಿ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಚಂದ್ರ ಉನ್ನತ ಸಮಿತಿಯ ಕಾರ್ಯದರ್ಶಿ ಆಗಿದ್ದರೆ, ವಸಿಷ್ಠ ಅವರು ಕಾರ್ಯನಿರ್ವಹಿಸುತ್ತಿರುವ ಇಲಾಖೆಯು ಚುನಾವಣೆ ಹಾಗೂ ಜನಪ್ರತಿನಿಧಿಗಳ ಕಾಯ್ದೆಗೆ ಸಂಬಂಧಿಸಿದ ಬೆಳವಣಿಗೆಗಳ ನಿರ್ವಹಣೆಯನ್ನು ಮಾಡಲಿದೆ.

ಸಮಿತಿ ಸದಸ್ಯರ ವಿವರ ಪ್ರಕಟಿಸಲು ಕೇಂದ್ರ ಏಕೆ ‘ಸಂಕಲ್ಪ’ ಮಾಡಿದೆ ಎಂಬ ಪ್ರಶ್ನೆಗೆ, ‘ಈ ಪ್ರಕ್ರಿಯೆಗಳನ್ನು ಸಚಿವಾಲಯ ನಿರ್ವಹಿಸುತ್ತಿರುವ ಕಾರಣ ಹಾಗೆ ಹೊರಡಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಾನೂನು ಸಚಿವಾಲಯದ ಮಾಜಿ ಕಾರ್ಯದರ್ಶಿ ಪಿ.ಕೆ.ಮಲ್ಹೋತ್ರಾ ಪ್ರಕಾರ, ಕಾರ್ಯಾಂಗದ ನಿರ್ಧಾರಗಳನ್ನು ಜನರ ಗಮನಕ್ಕೆ ತರಲು ಸಾಮಾನ್ಯವಾಗಿ ಸರ್ಕಾರ ಅಧಿಸೂಚನೆ, ಆದೇಶ, ನಿರ್ಣಯವನ್ನು ಹೊರಡಿಸಲಿದೆ.

ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡಲು ಬದ್ಧ: ಶಿಂದೆ

ಕಾಂಗ್ರೆಸ್ ‘ಜನ ಸಂವಾದ ಯಾತ್ರೆ’ ಆರಂಭ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರ ಮತ್ತು ಏಕನಾಥ್ ಶಿಂದೆ ನೇತೃತ್ವದ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸಲು ಮಹಾರಾಷ್ಟ್ರ ಕಾಂಗ್ರೆಸ್ ಭಾನುವಾರ ರಾಜ್ಯದಲ್ಲಿ ‘ಜನ ಸಂವಾದ ಯಾತ್ರೆ’ ಪ್ರಾರಂಭಿಸಿದೆ.

ಆದರೆ, ಜಲ್ನಾ ಜಿಲ್ಲೆಯಲ್ಲಿ ಮರಾಠಾ ಮೀಸಲಾತಿ ಪ್ರತಿಭಟನಕಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ ಬಳಿಕ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾದ ಹಿನ್ನೆಲೆಯಲ್ಲಿ ಮರಾಠಾವಾಡಾದ ಎಲ್ಲಾ ಎಂಟು ಜಿಲ್ಲೆಗಳಲ್ಲಿ ಪಕ್ಷವು ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

‘ಹೊಸ ದಿನಾಂಕಗಳನ್ನು ಶೀಘ್ರದಲ್ಲೇ ಘೋಷಿಸಲಾಗುವುದು’ ಎಂದು ಕಾಂಗ್ರೆಸ್ ಹಿರಿಯ ಮುಖಂಡ ಅಶೋಕ್ ಚವಾಣ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು ಪೂರ್ವ ವಿದರ್ಭದ ವಾರ್ಧಾ ಜಿಲ್ಲೆಯಿಂದ ಪಕ್ಷದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಪ್ಪು ನೀತಿಗಳಿಂದಾಗಿ ರೈತರು, ಯುವಕರು, ಮಹಿಳೆಯರು ಮತ್ತು ವ್ಯಾಪಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಒತ್ತಾಯಿಸಿ ಶುಕ್ರವಾರ ನಡೆದ ಪ್ರತಿಭಟನೆ ವೇಳೆ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಪ್ರತಿಭಟನಕಾರರು ನಿರಾಕರಿಸಿದ್ದರಿಂದ ಅಂತರ್ವಾಲಿ ಸಾರಥಿಯಲ್ಲಿ ಉದ್ರಿಕ್ತ ಗುಂಪು ಚದುರಿಸಲು ಪೊಲೀಸರು ಶುಕ್ರವಾರ ಲಾಠಿ ಪ್ರಹಾರ ನಡೆಸಿದರು ಮತ್ತು ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಿದರು.

ಘಟನೆಯಲ್ಲಿ 40 ಪೊಲೀಸರು ಗಾಯಗೊಂಡರು. 15ಕ್ಕೂ ಹೆಚ್ಚು ಬಸ್‌ಗಳಿಗೆ ಬೆಂಕಿ ಹಚ್ಚಲಾಗಿದೆ. 360ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೀಸಲಾತಿ ನೀಡಲು ಬದ್ಧ: ಹಿಂಸಾಚಾರದ ಹಿನ್ನೆಲೆಯಲ್ಲಿ ಮರಾಠಾ ಸಮುದಾಯಕ್ಕೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ನೀಡಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಭಾನುವಾರ ಮುಖ್ಯಮಂತ್ರಿ ಏಕನಾಥ್ ಶಿಂದೆ ಹೇಳಿದ್ದಾರೆ.

ಬುಲ್ಡಾನಾ ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮುದಾಯಕ್ಕೆ ಮೀಸಲಾತಿ ಸಿಗುವವರೆಗೆ, ಈಗಾಗಲೇ ಜಾರಿಯಲ್ಲಿರುವ ಸರ್ಕಾರಿ ಯೋಜನೆಗಳು ಮುಂದುವರಿಯುತ್ತವೆ ಎಂದರು.

ಲಾಠಿ ಪ್ರಹಾರ ನಡೆಸಿದ ಜಲ್ನಾ ಪೊಲೀಸ್ ವರಿಷ್ಠಾಧಿಕಾರಿ ತುಷಾರ್ ದೋಶಿ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ. ಲಾಠಿ ಚಾರ್ಜ್ ಘಟನೆ ಬಗ್ಗೆ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಸಂಜಯ್ ಸಕ್ಸೇನಾ ತನಿಖೆ ನಡೆಸಲಿದ್ದಾರೆ ಮತ್ತು ಅಗತ್ಯವಿದ್ದರೆ ನ್ಯಾಯಾಂಗ ತನಿಖೆ ನಡೆಸಲಾಗುವುದು ಎಂದರು.

ಏಷ್ಯಾ ಕಪ್: ಭಾರತ–ನೇಪಾಳ ಹಣಾಹಣಿ ಇಂದು; ಬೂಮ್ರಾ ಅಲಭ್ಯ

ಸುಲಭ ಜಯದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಪಲೇಕೆಲೆ, ಶ್ರೀಲಂಕಾ: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ನೇಪಾಳ ತಂಡದ ಎದುರು ಕಣಕ್ಕಿಳಿಯಲಿದೆ.

ಶನಿವಾರ ನಡೆದ ಭಾರತ ಮತ್ತು ಪಾಕಿಸ್ತಾನ ಪಂದ್ಯದಲ್ಲಿ ಮಳೆಯಿಂದಾಗಿ ಫಲಿತಾಂಶ ಹೊರಹೊಮ್ಮಲಿಲ್ಲ. ಅದರಿಂದಾಗಿ ಉಭಯ ತಂಡಗಳೂ ತಲಾ ಒಂದು ಅಂಕ ಹಂಚಿಕೊಂಡವು. ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕ್ ತಂಡವು ನೇಪಾಳವನ್ನು ಸೋಲಿಸಿತ್ತು. ಅದರಿಂದಾಗಿ ಒಟ್ಟು ಮೂರು ಅಂಕಗಳೊಂದಿಗೆ ಸೂಪರ್ ಫೋರ್ ಹಂತ ಪ್ರವೇಶಿಸಿತು. ಭಾರತವು ಈ ಪಂದ್ಯದಲ್ಲಿ ಜಯಿಸಿ ಸೂಪರ್ ಫೋರ್‌ನಲ್ಲಿ ಪಾಕ್ ತಂಡವನ್ನು ಎದುರಿಸುವತ್ತ ಚಿತ್ತ ನೆಟ್ಟಿದೆ.

ನೇಪಾಳ ತಂಡವು ಕ್ರಿಕೆಟ್ ಅಂಗಳದಲ್ಲಿ ಈಗ ಅಂಬೆಗಾಲಿಡುತ್ತಿರುವ ತಂಡವಾಗಿರುವುದರಿಂದ ಭಾರತವೇ ಗೆಲುವಿನ ನೆಚ್ಚಿನ ತಂಡವಾಗಿದೆ. ಆದರೆ, ಪಾಕ್ ವಿರುದ್ಧದ ಪಂದ್ಯದಲ್ಲಿ ಭಾರತ ತಂಡವು ಮೊದಲು ಬ್ಯಾಟಿಂಗ್ ಮಾಡಿ 266 ರನ್ ಗಳಿಸಿತ್ತು. ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಹಾಗೂ ಶ್ರೇಯಸ್ ಅಯ್ಯರ್ ಅವರು ಬೇಗನೇ ಔಟಾದರು. ಇದರಿಂದಾಗಿ ತಂಡವು 66ಕ್ಕೆ 4 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಇಶಾನ್ ಕಿಶನ್ ಮತ್ತು ಹಾರ್ದಿಕ್ ಪಾಂಡ್ಯ ಅವರು ಶತಕದ ಜೊತೆಯಾಟವಾಡಿದರು. ಅದರಿಂದಾಗಿ ತಂಡವು ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ಸಾಧ್ಯವಾಯಿತು. ಪಾಕಿಸ್ತಾನ ತಂಡದ ಶಾಹೀನ್ ಅಫ್ರಿದಿ, ನಸೀಂ ಶಾ ಮತ್ತು ಹ್ಯಾರಿಸ್ ರವೂಫ್ ಅವರ ಅಮೋಘ ಬೌಲಿಂಗ್ ಮುಂದೆ ಭಾರತದ ಬ್ಯಾಟರ್‌ಗಳು ಎಡವಿದರು. ಅದರಿಂದಾಗಿ ಈ ಟೂರ್ನಿಯಲ್ಲಿ ಪಾಕ್ ತಂಡವನ್ನು ಮತ್ತೆರಡು ಬಾರಿ ಎದುರಿಸುವ ಸಾಧ್ಯತೆ ಇರುವುದರಿಂದ ರೋಹಿತ್ ಬಳಗವು ತಮ್ಮ ಕೌಶಲಗಳನ್ನು ಸುಧಾರಿಸಿಕೊಳ್ಳಲು ನೇಪಾಳ ವಿರುದ್ಧದ ಪಂದ್ಯವನ್ನು ವೇದಿಕೆ ಮಾಡಿಕೊಳ್ಳುವ ಅವಕಾಶ ಇದೆ.

ಮುಂದಿನ ತಿಂಗಳು ನಡೆಯುವ ಏಕದಿನ ವಿಶ್ವಕಪ್ ಟೂರ್ನಿಗೆ ತಂಡವನ್ನು ಆಯ್ಕೆ ಮಾಡಲು ಕೂಡ ಏಷ್ಯಾ ಕಪ್ ಟೂರ್ನಿಯು ಪ್ರಮುಖ ವೇದಿಕೆಯಾಗಿದೆ. ಅದರಿಂದಾಗಿ ನಾಯಕ ರೋಹಿತ್ ಹಾಗೂ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಬಹಳ ಎಚ್ಚರಿಕೆಯಿಂದ ತಂತ್ರಗಾರಿಕೆಯನ್ನು ರೂಪಿಸಬೇಕಾದ ಅಗತ್ಯವೂ ಇದೆ.

ಬೂಮ್ರಾ ಅಲಭ್ಯ: ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ವೈಯಕ್ತಿಕ ಕಾರಣಗಳಿಂದಾಗಿ ತವರಿಗೆ ಮರಳಿದ್ದು, ಸೋಮವಾರದ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಬೂಮ್ರಾ ದಂಪತಿ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದು, ಅವರು ಭಾನುವಾರ ಬೆಳಿಗ್ಗೆ ಕೊಲಂಬೊದಿಂದ ಮುಂಬೈಗೆ ಪ್ರಯಾಣಿಸಿದರು. ಭಾರತದ ಸೂಪರ್ ಫೋರ್ ಹಂತದ ಪಂದ್ಯದ ವೇಳೆಗೆ ಅವರು ತಂಡವನ್ನು ಸೇರಿಕೊಳ್ಳುವ ಸಾಧ್ಯತೆಯಿದೆ.

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್


ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮಾ ಸಮಾಲೋಚನೆ –ಎಎಫ್‌ಪಿ ಚಿತ್ರ

ಶ್ರೀನಾಥ್‌ಗೆ 250ನೇ ಪಂದ್ಯ



'ಮೈಸೂರು ಎಕ್ಸ್‌ಪ್ರೆಸ್' ಖ್ಯಾತಿಯ ಜಾವಗಲ್ ಶ್ರೀನಾಥ್ ಅವರು ಐಸಿಸಿ ಪಂದ್ಯ ರೆಫರಿಯಾಗಿ ನೂತನ ಮೈಲುಗಲ್ಲು ಮುಟ್ಟಲಿದ್ದಾರೆ.

250 ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ ಸಾಧನೆಯನ್ನು ಅವರು ಸೋಮವಾರ ಮಾಡಲಿದ್ದಾರೆ. ಭಾರತ ಮತ್ತು ನೇಪಾಳ ಪಂದ್ಯದಲ್ಲಿ ಅವರು ರೆಫರಿಯಾಗಿ ಕಾರ್ಯನಿರ್ವಹಿಸುವರು. ಈ ಸಾಧನೆ ಮಾಡಿದ ವಿಶ್ವದ ನಾಲ್ಕನೇ ರೆಫರಿಯಾಗಲಿದ್ದಾರೆ. ರಂಜನ್ ಮದುಗಲೆ, ಕ್ರಿಸ್ ಬ್ರಾಡ್ ಹಾಗೂ ಜೆಫ್ ಕ್ರೋವ್ ಮೊದಲ ಮೂರು ಸ್ಥಾನಗಳಲ್ಲಿದ್ದಾರೆ.

'ರೆಫರಿಯಾಗಿ ಇಂತಹ ಮೈಲುಗಲ್ಲು ಮುಟ್ಟುತ್ತಿರುವುದು ಸಂತಸ ತಂದಿದೆ. 17 ವರ್ಷಗಳಿಂದ ಈ ಹುದ್ದೆಯಲ್ಲಿದ್ದೇನೆ. ಇದೀಗ ನಾನು ಆಟಗಾರನಾಗಿ ಆಡಿದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಏಕದಿನ ಪಂದ್ಯಗಳಲ್ಲಿ ರೆಫರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಇದು ಅಚ್ಚರಿ ಮೂಡಿಸುತ್ತಿದೆ' ಎಂದು 54 ವರ್ಷದ ಶ್ರೀನಾಥ್ ಹೇಳಿದರು.

ಏಕದಿನ ವಿಶ್ವಕಪ್ ತಂಡಕ್ಕೆ ರಾಹುಲ್?

ಪಲೇಕೆಲೆ: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಿಂದ ಫಿಟ್‌ನೆಸ್ ಪ್ರಮಾಣಪತ್ರ ಪಡೆದಿರುವ ಕೆ.ಎಲ್. ರಾಹುಲ್ ಮುಂದಿನ ತಿಂಗಳು ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತದ ಸಂಭಾವ್ಯ ತಂಡದಲ್ಲಿ ಸ್ಥಾನ ಪಡೆಯಲು ಸಿದ್ಧರಾಗಿದ್ದಾರೆ.

ಮಂಗಳವಾರ ಈ ಸಂಭಾವ್ಯ ತಂಡದ ಆಯ್ಕೆ ನಡೆಯಲಿದೆ. ಆದರೆ ಸಂಜು ಸ್ಯಾಮ್ಸನ್ ಮತ್ತು ಪ್ರಸಿದ್ಧ ಕೃಷ್ಣ ಅವರಿಗೆ ಈ ತಂಡದಲ್ಲಿ ಅವಕಾಶ ಸಿಗುವುದು ಖಚಿತವಿಲ್ಲ.

ಐಪಿಎಲ್ ಸಂದರ್ಭದಲ್ಲಿ ತೊಡೆಯ ಗಾಯದಿಂದ ಬಳಲಿದ್ದ ರಾಹುಲ್ ಶಸ್ತ್ರಚಿಕಿತ್ಸೆ ಪಡೆದಿದ್ದರು. ನಂತರ ಎನ್‌ಸಿಎನಲ್ಲಿ ಪುನಶ್ಚೇತನ ಶಿಬಿರದಲ್ಲಿದ್ದರು. ಏಷ್ಯಾ ಕಪ್ ಟೂರ್ನಿಯಲ್ಲಿ ಆಡುವ ತಂಡಕ್ಕೆ ಆಯ್ಕೆಯಾಗಿದ್ದರೂ, ಮೊದಲೆರಡು ಪಂದ್ಯಗಳಿಂದ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಸಂಭಾವ್ಯ ತಂಡ : ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಅಕ್ಷರ್ ಪಟೇಲ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್.


ಕೆ.ಎಲ್. ರಾಹುಲ್

ಅಲ್ಕರಾಜ್, ಮೆಡ್ವೆಡೆವ್ ಮುನ್ನಡೆ

ಅಮೆರಿಕ ಓಪನ್: ಆನ್ಸ್ ಜಬೇರ್‌ಗೆ ಪ್ರಯಾಸದ ಗೆಲುವು

ನ್ಯೂಯಾರ್ಕ್ (ರಾಯಿಟರ್ಸ್): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಈ ಬಾರಿಯ ಅಮೆರಿಕ ಓಪನ್ ಟೂರ್ನಿಯಲ್ಲಿ ಶನಿವಾರ ಮೊದಲ ನೈಜ ಪರೀಕ್ಷೆ ಎದುರಿಸಿದರಾದರೂ, ಛಲದ ಆಟವಾಡಿ ನಾಲ್ಕನೇ ಸುತ್ತಿಗೆ ಮುನ್ನಡೆದರು.

ಮೂರನೇ ಸುತ್ತಿನ ಪಂದ್ಯದಲ್ಲಿ ಬ್ರಿಟನ್‌ನ ಡೇನಿಯಲ್ ಇವಾನ್ಸ್ ಒಡ್ಡಿದ ಸವಾಲನ್ನು ಬದಿಗೊತ್ತಿದ ಅವರು 6-2, 6-3, 4-6, 6-3 ರಿಂದ ಗೆದ್ದರು. ಸ್ಪೇನ್‌ನ 20 ವರ್ಷದ ಆಟಗಾರ ಒಂದು ಸೆಟ್ ಕಳೆದುಕೊಂಡರೂ, ಲಯ ಕಂಡುಕೊಂಡು ಸತತ ಎರಡನೇ ಪ್ರಶಸ್ತಿ ಗೆಲ್ಲುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟರು.

ಅಮೆರಿಕ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ರೋಜರ್ ಫೆಡರರ್ ಬಳಿಕ ಯಾರೂ ಸತತ ಎರಡು ಪ್ರಶಸ್ತಿ ಜಯಿಸಿಲ್ಲ. ಸ್ವಿಟ್ಜರ್‌ಲೆಂಡ್‌ನ ದಿಗ್ಗಜ ಆಟಗಾರ 2004 ರಿಂದ 2008ರ ವರೆಗೆ ಸತತ ಐದು ಪ್ರಶಸ್ತಿ ಗೆದ್ದುಕೊಂಡಿದ್ದರು.

ಮೂರನೇ ಶ್ರೇಯಾಂಕದ ಆಟಗಾರ ರಷ್ಯಾದ ಡೇನಿಯಲ್ ಮೆಡ್ವೆಡೆವ್ 6-2, 6-2, 7-6 ರಿಂದ ಅರ್ಜೆಂಟೀನಾದ ಸೆಬಾಸ್ಟಿಯನ್ ಬಾಯೆಜ್ ಅವರನ್ನು ಮಣಿಸಿದರು. ಅತ್ಯುತ್ತಮ ಫಾರ್ಮ್‌ನಲ್ಲಿದ್ದ ಬಾಯೆಜ್ ಅವರ 12 ಪಂದ್ಯಗಳ ಗೆಲುವಿನ ಓಟಕ್ಕೆ ತೆರೆಬಿತ್ತು.

ಪುರುಷರ ವಿಭಾಗದ ಮೂರನೇ ಸುತ್ತಿನ ಇತರ ಪಂದ್ಯಗಳಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-7, 7-6, 6-1, 6-1 ರಿಂದ ಬಲ್ಗೇರಿಯದ ಗ್ರಿಗೊರ್ ದಿಮಿತ್ರೊವ್ ವಿರುದ್ಧ; ಇಟಲಿಯ ಯಾನಿಕ್ ಸಿನೆರ್ 6-3, 2-6, 6-4, 6-2 ರಿಂದ ಸ್ವಿಟ್ಜರ್ಲೆಂಡ್‌ನ ಸ್ಟಾನಿಸ್ಲಾಸ್ ವಾವ್ರಿಂಕಾ ವಿರುದ್ಧ; ಬ್ರಿಟನ್‌ನ ಜಾಕ್ ಡ್ರೇಪರ್ 6-4, 6-2, 3-6, 6-3 ರಿಂದ ಅಮೆರಿಕದ ಮೈಕಲ್ ಮೋಅ ವಿರುದ್ಧ; ರಷ್ಯಾದ ಆಂಡ್ರೆ ರುಬ್ಲೆವ್ 3-6, 6-3, 6-1, 7-5 ರಿಂದ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ ವಿರುದ್ಧವೂ ಗೆದ್ದರು.

ಜಬೇರ್‌ಗೆ ಪ್ರಯಾಸದ ಜಯ: ಟ್ಯುನೀಷಿಯಾದ ಆನ್ಸ್ ಜಬೇರ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಯಾಸದ ಗೆಲುವಿನೊಂದಿಗೆ ನಾಲ್ಕನೇ ಸುತ್ತಿನಲ್ಲಿ ಸ್ಥಾನ ಪಡೆದರು.

ಶನಿವಾರ ನಡೆದ ಪಂದ್ಯದಲ್ಲಿ ಜಬೇರ್ 5-7, 7-6, 6-3 ರಿಂದ ಜೆಕ್ ರಿಪಬ್ಲಿಕ್‌ನ ಮೆರಿಯಾ ಬೊಜ್ಕೊವಾ ವಿರುದ್ಧ ಗೆದ್ದರು. ಈ ಹೋರಾಟ ಸುಮಾರು ಮೂರು ಗಂಟೆ ನಡೆಯಿತು. ಮೊದಲ ಸೆಟ್ ಗೆದ್ದುಕೊಂಡ ಬೊಜ್ಕೊವಾ ಅವರಿಗೆ ಎರಡನೇ ಸೆಟ್‌ನಲ್ಲಿ ಕಾಲಿನ ನೋವು ಕಾಡಿತು. ಚಿಕಿತ್ಸೆ ಪಡೆದು ಆಟ ಮುಂದುವರಿಸಿದರೂ, ಲಯ ಕಳೆದುಕೊಂಡರು. ಇದರಿಂದ ಜಬೇರ್ ನಿಧಾನವಾಗಿ ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ಇನ್ನೊಂದು ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ ಬೆಲಾರಸ್‌ನ ಅರಿನಾ ಸಬಲೆಂಕಾ 6-1, 6-1 ರಿಂದ ಫ್ರಾನ್ಸ್‌ನ ಕ್ಲಾರಾ ಬರೆಲ್ ಅವರನ್ನು ಸೋಲಿಸಿದರು.

ಇತರ ಪಂದ್ಯಗಳಲ್ಲಿ ಜೆಕ್ ರಿಪಬ್ಲಿಕ್‌ನ ಮಾರ್ಕೆತಾ ವೊಂದ್ರೊಸೋವಾ 6-2, 6-1 ರಿಂದ ರಷ್ಯಾದ ಏಕ್ತರೀನಾ ಅಲೆಕ್ಸಾಂಡ್ರೋವಾ ವಿರುದ್ಧ; ಅಮೆರಿಕದ ಮ್ಯಾಡಿಸನ್ ಕೀಸ್ 5-7, 6-2, 6-2 ರಿಂದ ರಷ್ಯಾದ ಲುದ್ಮಿಲಾ ಸಮ್ಸೊನೊವಾ ವಿರುದ್ಧ; ರಷ್ಯಾದ ದರಿಯಾ ಕಸತ್‌ಕಿನಾ 6-3, 6-4 ರಿಂದ ಬೆಲಾರಸ್‌ನ ಗ್ರೀಟ್ ಮಿನೆನ್ ವಿರುದ್ಧ; ಅಮೆರಿಕದ ಜೆಸ್ಸಿಕಾ ಪೆಗುಲಾ 6-4, 4-6, 6-2 ರಿಂದ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ ವಿರುದ್ಧವೂ ಜಯ ಸಾಧಿಸಿದರು.


ಗೆಲುವಿನ ಸಂಭ್ರಮದಲ್ಲಿ ಆನ್ಸ್ ಜಬೇರ್ –ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನ ವಿರುದ್ಧ ಬಾಂಗ್ಲಾಕ್ಕೆ 89 ರನ್ ಗೆಲುವು

ಮಿರಾಜ್, ಶಾಂತೊ ಶತಕ

ಲಾಹೋರ್ (ಪಿಟಿಐ): ಮೆಹದಿ ಹಸನ್ ಮಿರಾಜ್ ಮತ್ತು ನಜ್ಮುಲ್ ಹುಸೇನ್ ಶಾಂತೊ ಅವರ ಶತಕಗಳ ಬಲದಿಂದ ಬಾಂಗ್ಲಾದೇಶ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 89 ರನ್‌ಗಳಿಂದ ಅಫ್ಗಾನಿಸ್ತಾನ ತಂಡವನ್ನು ಮಣಿಸಿತು.

ಗಡಾಫಿ ಮೈದಾನದಲ್ಲಿ ಭಾನುವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ, 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 334 ರನ್ ಗಳಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಬಾಂಗ್ಲಾ, 63 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು. ಆದರೆ ಮೆಹದಿ ಹಸನ್ 119 ಎಸೆತಗಳಲ್ಲಿ 112 ರನ್ ಗಳಿಸಿದರು. ಶಾಂತೊ 105 ಎಸೆತಗಳಲ್ಲಿ 104 ರನ್ ದಾಖಲಿಸಿದರು. ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 215 ರನ್‌ಗಳನ್ನು ಪೇರಿಸಿ ತಂಡವನ್ನು ಬೃಹತ್ ಮೊತ್ತದತ್ತ ಮುನ್ನಡೆಸಿದರು.

ಸವಾಲಿನ ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ 44.3 ಓವರ್‌ಗಳಲ್ಲಿ 245 ರನ್‌ಗಳಿಗೆ ಆಲೌಟಾಯಿತು. ಇಬ್ರಾಹಿಂ ಜದ್ರಾನ್ (75 ರನ್; 74 ಎ.) ಮತ್ತು ಹಷ್ಮತ್‌ಉಲ್ಲಾ ಶಾಹಿದಿ (51 ರನ್; 60 ಎ.) ಹೊರತುಪಡಿಸಿ ಇತರ ಬ್ಯಾಟರ್‌ಗಳು ವಿಫಲರಾದರು.

ಬಾಂಗ್ಲಾ ತಂಡದ ತಸ್ಕಿನ್ ಅಹ್ಮದ್ (44ಕ್ಕೆ 4) ಮತ್ತು ಶೊರೀಫುಲ್ ಇಸ್ಲಾಂ (36ಕ್ಕೆ 3) ಪರಿಣಾಮಕಾರಿ ಬೌಲಿಂಗ್ ಪ್ರದರ್ಶನ ನೀಡಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 334 (ಮೆಹದಿ ಹಸನ್ ಮಿರಾಜ್ 112, ನಜ್ಮುಲ್ ಹುಸೇನ್ ಶಾಂತೊ 104, ಮುಷ್ಫೀಕುರ್ ರಹೀಂ 25, ಶಕೀಬ್ ಅಲ್ ಹಸನ್ ಔಟಾಗದೆ 32, ಮೊಹಮ್ಮದ್ ನೈಮ್ 28, ಮುಜೀಬ್ 62ಕ್ಕೆ1, ಗುಲ್ಬದೀನ್ 58ಕ್ಕೆ1) **ಅಫ್ಗಾನಿಸ್ತಾನ:** 44.3 ಓವರ್‌ಗಳಲ್ಲಿ 245 (ಇಬ್ರಾಹಿಂ ಜದ್ರಾನ್ 75, ಹಷ್ಮತ್‌ಉಲ್ಲಾ ಶಾಹಿದಿ 51, ರಶೀದ್ ಖಾನ್ 24, ತಸ್ಕಿನ್ ಅಹ್ಮದ್ 44ಕ್ಕೆ 4, ಶೊರೀಫುಲ್ ಇಸ್ಲಾಂ 36ಕ್ಕೆ 3) ಫಲಿತಾಂಶ: ಬಾಂಗ್ಲಾಕ್ಕೆ 89 ರನ್ ಜಯ


ಶತಕ ಪೂರೈಸಿದ ಮೆಹದಿ ಹಸನ್ ಮಿರಾಜ್ (ಬಲ) ಅವರು ನಜ್ಮುಲ್ ಹುಸೇನ್ ಶಾಂತೊ ಜತೆ ಸಂಭ್ರಮಿಸಿದರು–ಎಎಫ್‌ಪಿ ಚಿತ್ರ

ಮಳೆ: ಕೊಲಂಬೊ ಪಂದ್ಯಗಳ ಸ್ಥಳಾಂತರ?

ಪಲೇಕೆಲೆ : ಮಳೆ ಬರುವ ಸಾಧ್ಯತೆಗಳು ಇರುವುದರಿಂದ ಕೊಲಂಬೊದಲ್ಲಿ ನಡೆಯಲಿರುವ ಏಷ್ಯಾ ಕಪ್ ಕ್ರಿಕೆಟ್ ಪಂದ್ಯಗಳನ್ನು ಬೇರೆ ಸ್ಥಳಗಳಿಗೆ ಸ್ಥಳಾಂತರಿಸುವ ಸಾಧ್ಯತೆ ಇದೆ.

ಸೂಪರ್–4 ಹಂತದ 5 ಪಂದ್ಯಗಳು ಮತ್ತು ಫೈನಲ್ ಕೊಲಂಬೊದಲ್ಲಿ ಆಯೋಜನೆಗೊಂಡಿವೆ. ಮಳೆ ಬರುವ ಸಾಧ್ಯತೆಗಳು ಇರುವುದರಿಂದ ಪಂದ್ಯಗಳನ್ನು ಪಲೇಕೆಲೆ, ದಂಬುಲಾ ಮತ್ತು ಹಂಬನಟೊಟಾಗಳಿಗೆ ಸ್ಥಳಾಂತರಿಸುವ ನಿರೀಕ್ಷೆ ಇದೆ.

ಏಷ್ಯಾ ಕ್ರಿಕೆಟ್ ಕೌನ್ಸಿಲ್ (ಎಸಿಸಿ), ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ಹಾಗೂ ಆತಿಥ್ಯ ವಹಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಈ ಬಗ್ಗೆ ಚರ್ಚೆ ನಡೆಸುತ್ತಿವೆ. ಈ ಬದಲಾವಣೆಯ ಸಾಧ್ಯತೆಗಳ ಕುರಿತು ಟೂರ್ನಿಯಲ್ಲಿ ಆಡುತ್ತಿರುವ ಆರು ತಂಡಗಳಿಗೂ ಮಾಹಿತಿ ನೀಡಲಾಗಿದೆ ಎಂದು ತಿಳಿದುಬಂದಿದೆ.

ಸೇಥಿ ಅಸಮಾಧಾನ: 'ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ಏಷ್ಯಾ ಕಪ್ ಆಯೋಜಿಸಬೇಕೆಂದು ಮೊದಲೇ ಹೇಳಿದ್ದೆವು. ಆದರೆ ಏಷ್ಯಾ ಕ್ರಿಕೆಟ್ ಕೌನ್ಸಿಲ್ ಶ್ರೀಲಂಕಾದಲ್ಲಿ ಆಯೋಜಿಸಿದೆ. ಹವಾಮಾನ ಮಾಹಿತಿ ಮೊದಲೇ ಗೊತ್ತಿದ್ದರೂ ಈ ರೀತಿ ಮಾಡಲಾಗಿದೆ' ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ನಜಾಂ ಸೇಥಿ ಕಿಡಿ ಕಾರಿದ್ದಾರೆ.

ಡುರಾಂಡ್ ಕಪ್: ಈಸ್ಟ್ ಬೆಂಗಾಲ್ ವಿರುದ್ಧ ಜಯ

ಮೋಹನ್ ಬಾಗನ್‌ಗೆ ಕಿರೀಟ

ಕೋಲ್ಕತ್ತ (ಪಿಟಿಐ): ದಿಮಿತ್ರಿ ಪೆಟ್ರಾಟೊಸ್ ತಂದಿತ್ತ ಗೋಲಿನ ನೆರವಿನಿಂದ ಈಸ್ಟ್ ಬೆಂಗಾಲ್ ತಂಡವನ್ನು 1–0 ಯಿಂದ ಮಣಿಸಿದ ಮೋಹನ್ ಬಾಗನ್ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

17ನೇ ಬಾರಿ ಡುರಾಂಡ್ ಕಪ್ ಗೆದ್ದುಕೊಂಡಿರುವ ಬಾಗನ್, 23 ವರ್ಷಗಳ ಪ್ರಶಸ್ತಿ ಬರ ನೀಗಿಸಿದೆ. ಕೋಲ್ಕತ್ತದ ತಂಡ 2000 ದಲ್ಲಿ ಕೊನೆಯದಾಗಿ ಚಾಂಪಿಯನ್ ಆಗಿತ್ತು. ಆ ವರ್ಷ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ಮಹೀಂದ್ರಾ ಯುನೈಟೆಡ್ ತಂಡವನ್ನು ಸೋಲಿಸಿತ್ತು.

ಕೋಲ್ಕತ್ತದ ಎರಡು 'ಬದ್ಧ ಎದುರಾಳಿ'ಗಳ ನಡುವಣ ಫೈನಲ್ ಪಂದ್ಯ ರೋಚಕತೆಯಿಂದ ಕೂಡಿತ್ತು. 62ನೇ ನಿಮಿಷದಲ್ಲಿ ಬಾಗನ್ ತಂಡದ ಅನಿರುದ್ಧ್ ಥಾಪಾ ಕೆಂಪು ಕಾರ್ಡ್ ಪಡೆದು ಹೊರನಡೆದರು. ಆ ಬಳಿಕ 10 ಮಂದಿಯೊಂದಿಗೆ ಆಡಿದರೂ, ಗೆಲುವು ಸಾಧಿಸುವಲ್ಲಿ ಯಶ ಕಂಡಿತು.

ಪೆಟ್ರಾಟೊಸ್ ಅವರು 71ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಆಸ್ಟ್ರೇಲಿಯಾದ ಈ ಆಟಗಾರ ಆಕರ್ಷಕ ಡ್ರಿಬ್ಲಿಂಗ್ ಮೂಲಕ ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿ, ಸುಮಾರು 25 ಯಾರ್ಡ್ ದೂರದಿಂದ ಬಿರುಸಿನಿಂದ ಒದ್ದ ಚೆಂಡು ಗುರಿ ಸೇರಿತು. ಚೆಂಡಿನ ವೇಗ ಎಷ್ಟಿತ್ತೆಂದರೆ ಈಸ್ಟ್ ಬೆಂಗಾಲ್ ತಂಡದ ಗೋಲ್‌ಕೀಪರ್ ಪ್ರಭ್‌ಸುಖನ್ ಸಿಂಗ್ ಗಿಲ್ ಅವರು ಪ್ರೇಕ್ಷಕನಂತೆ ನಿಂತುಬಿಟ್ಟರು.

ಈಸ್ಟ್ ಬೆಂಗಾಲ್ ತಂಡದ ಕೋಚ್ ಕಾರ್ಲೆಸ್ ಕ್ವದ್ರತ್ ಅವರು ಕೊನೆಯ 10 ನಿಮಿಷಗಳಲ್ಲಿ ಆಕ್ರಮಣದ ವೇಗ ಹೆಚ್ಚಿಸಲು ಮೂರು ಬದಲಾವಣೆಗಳನ್ನು ಮಾಡಿ ನಿಶು ಕುಮಾರ್, ವಿ.ಪಿ.ಸುಹೈರ್ ಮತ್ತು ಎಡ್ವಿನ್ ವನ್‌ಸ್ಪಾಲ್ ಅವರನ್ನು ಕಣಕ್ಕಿಳಿಸಿದರು.

ಇದಕ್ಕೆ ಪ್ರತಿತಂತ್ರ ರೂಪಿಸಿದ ಬಾಗನ್ ಕೋಚ್ ಯುವಾನ್ ಫೆರಾಂಡೊ, ರಕ್ಷಣಾ ವಿಭಾಗದಲ್ಲಿ ಎಂಟು ಆಟಗಾರರನ್ನು ನಿಯೋಜಿಸಿದರು. ಸೆಂಟರ್ ಬ್ಯಾಕ್ ಆಟಗಾರ ಅನ್ವರ್ ಅಲಿ ರಕ್ಷಣಾ ವಿಭಾಗದಲ್ಲಿ ಮಿಂಚಿದರು.

ಬಾಗನ್ ತಂಡ 2004ರ ಟೂರ್ನಿಯ ಫೈನಲ್‌ನಲ್ಲಿ ಎದುರಾಗಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. ಆ ವರ್ಷ ಈಸ್ಟ್ ಬೆಂಗಾಲ್ ಎದುರು 1–2 ಗೋಲುಗಳಿಂದ ಸೋತಿತ್ತು.


ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿ ಡುರಾಂಡ್ ಕಪ್ ಟೂರ್ನಿ ಗೆದ್ದುಕೊಂಡ ಮೋಹನ್ ಬಾಗನ್ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಟಿಟಿ: ರೆಯಾನ್ಶ್, ತನಿಷ್ಕಾ ಚಾಂಪಿಯನ್

ಬೆಂಗಳೂರು: ರೆಯಾನ್ಶ್ ಜಲನ್ ಮತ್ತು ತನಿಷ್ಕಾ ಕಪಿಲ್ ಕಾಲಭೈರವ್ ಅವರು ಬೆಳಗಾವಿಯಲ್ಲಿ ಕೊನೆಗೊಂಡ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ರೆಯಾನ್ಶ್ 11-9, 11-7, 12-10 ರಿಂದ ವೇದಾಂತ್ ವಶಿಷ್ಠ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ 11-6, 11-4, 11-3 ರಿಂದ ರಾಶಿ ವಿ.ರಾವ್ ಅವರನ್ನು ಮಣಿಸಿದರು.

ಬಾಲಕರ ಹೋಪ್ಸ್ ವಿಭಾಗದ ಫೈನಲ್‌ನಲ್ಲಿ ಸುದರ್ಶನ್ ಎ.ರಾಜ್ 7-11, 11-6, 11-8, 8-11, 11-7 ರಿಂದ ಎಂ.ಸಿದ್ಧಾಂತ್ ಅವರನ್ನು ಮಣಿಸಿದರೆ, ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಮಿಹಿಕಾ ಆರ್.ಉಡುಪ 11-8, 11-3, 10-12, 12-10 ರಿಂದ ಎಸ್.ರಚಿತಾ ವಿರುದ್ಧ ಗೆದ್ದರು.

ನಾನ್ ಮೆಡಲಿಸ್ಟ್ ವಿಭಾಗದಲ್ಲಿ ತೇಜಸ್ ಜವೂರ್ 11-9, 11-6, 11-9 ರಿಂದ ಆಯುಷ್ ಬಿ. ಗೋಡ್ಸೆ ಅವರನ್ನು ಸೋಲಿಸಿದರು.

ಸಂಕ್ಷಿಪ್ತ ಸುದ್ದಿ

ಮುರುಗಪ್ಪ ಗೋಲ್ಡ್ ಕಪ್: ಕರ್ನಾಟಕ ರನ್ನರ್ ಅಪ್

ಚೆನ್ನೈ (ಪಿಟಿಐ): ಇಂಡಿಯನ್ ರೈಲ್ವೇಸ್ ತಂಡವು ಮುರುಗಪ್ಪ ಗೋಲ್ಡ್ ಕಪ್ ಹಾಕಿ ಟೂರ್ನಿಯನ್ನು ಗೆದ್ದುಕೊಂಡಿತು. ಭಾನುವಾರ ನಡೆದ ಫೈನಲ್‌ನಲ್ಲಿ ರೈಲ್ವೇಸ್ ತಂಡ 5–2 ಗೋಲುಗಳಿಂದ ಹಾಕಿ ಕರ್ನಾಟಕ ತಂಡವನ್ನು ಮಣಿಸಿತು.

ಮೂರು ಗೋಲುಗಳನ್ನು ಗಳಿಸಿದ ಪ್ರತಾಪ್ ಲಾಕ್ರ ಅವರು ರೈಲ್ವೇಸ್ ತಂಡದ ಗೆಲುವಿಗೆ ಕಾರಣರಾದರು. ಕರ್ನಾಟಕದ ಪರ ತ್ರಿಶೂಲ್ ಗಣಪತಿ, ಚೇತನ್ ಚೆಂಡನ್ನು ಗುರಿ ಸೇರಿಸಿದರು.

ಬಿಸಿಸಿಐ ವಾರ್ಷಿಕ ಸಭೆ 25ರಂದು

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಾರ್ಷಿಕ ಸರ್ವಸದಸ್ಯರ ಸಭೆಯು (ಎಜಿಎಂ) ಇದೇ 25ರಂದು ಗೋವಾದಲ್ಲಿ ನಡೆಯಲಿದೆ. ಈಗಿರುವ ಪದಾಧಿಕಾರಿಗಳೇ ತಮ್ಮ ಸ್ಥಾನಗಳಲ್ಲಿ ಮುಂದುವರಿಯುವರು.

2022ರ ಅಕ್ಟೋಬರ್‌ನಲ್ಲಿ ಎಜಿಎಂ ನಡೆದಿತ್ತು. ಕಳೆದ ಮೇ 27ರಂದು ಎಸ್‌ಜಿಎಂ ಕೂಡ ಆಯೋಜನೆಗೊಂಡಿತ್ತು. ಈ ಬಾರಿಯ ಎಜಿಎಂನಲ್ಲಿ 18 ಅಂಶಗಳ ಕುರಿತು ಚರ್ಚೆ ನಡೆಸಲು ಉದ್ದೇಶಿಸಲಾಗಿದೆ.

ಸೇಂಟ್ ಜೋಸೆಫ್ಸ್ ಚಾಂಪಿಯನ್

ಮಂಗಳೂರು: ಬೆಂಗಳೂರಿನ ಸೇಂಟ್ ಕ್ಲಾರೆಟ್ ತಂಡವನ್ನು 53–34 ರಿಂದ ಮಣಿಸಿದ ಬೆಂಗಳೂರಿನ ಸೇಂಟ್ ಜೋಸೆಫ್ಸ್ ತಂಡ ದಕ್ಷಿಣ ಕನ್ನಡ ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಯೋಜಿಸಿದ್ದ ಜೇಮ್ಸ್ ನೈಸ್ಮಿತ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಕಾರ್ಕಳದ ನಿಟ್ಟೆ ಕ್ಯಾಂಪಸ್ ತಂಡ ನಿಟ್ಟೆ ವಿ.ವಿ ತಂಡವನ್ನು 37–30 ರಿಂದ ಮಣಿಸಿ ಮಹಿಳಾ ವಿಭಾಗದ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಚೆಸ್: ದಿವ್ಯಾ ದೇಶಮುಖ್‌ಗೆ ಪ್ರಶಸ್ತಿ

ಕೋಲ್ಕತ್ತ: ಕೊನೆಗಳಿಗೆಯಲ್ಲಿ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ಭಾರತದ ದಿವ್ಯಾ ದೇಶಮುಖ್ ಅವರು ಅಚ್ಚರಿ ಮೂಡಿಸುವ ರೀತಿ ಪ್ರಶಸ್ತಿಯನ್ನೇ ಗೆದ್ದುಕೊಂಡರು. ಶನಿವಾರ ಮುಕ್ತಾಯಗೊಂಡ ಟಾಟಾ ಸ್ಟೀಲ್ ಇಂಡಿಯಾ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ನಾಗ್ಪುರದ ಈ ಆಟಗಾರ್ತಿ ಏಳು ಪಾಯಿಂಟ್ಸ್ ಸಂಗ್ರಹಿಸಿ ಅನಿರೀಕ್ಷಿತ ಚಾಂಪಿಯನ್ ಆದರು.

ಆರ್.ಪ್ರಜ್ಞಾನಂದ ಅವರ ಸೋದರಿ ವಿಮೆನ್ ಗ್ರ್ಯಾಂಡ್‌ಮಾಸ್ಟರ್ ವೈಶಾಲಿ ಹಿಂದೆಸರಿದ ಕಾರಣ ದಿವ್ಯಾ ಅವರಿಗೆ ಕೊನೆಗಳಿಗೆಯಲ್ಲಿ ಈ ಟೂರ್ನಿಯಲ್ಲಿ ಆಡುವ ಅವಕಾಶ ದೊರಕಿತ್ತು. ಅವರಿಗೆ ಹತ್ತನೇ ಶ್ರೇಯಾಂಕ ನೀಡಲಾಗಿತ್ತು. ದಿವ್ಯಾ ಅಂತಿಮ (9ನೇ) ಸುತ್ತಿನಲ್ಲಿ ಕಪ್ಪುಕಾಯಿಗಳಲ್ಲಿ ಆಡಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರನ್ನು ಸೋಲಿಸಿ ಅಚ್ಚರಿಯ ಓಟ ಮುಂದುವರಿಸಿದರು. ಹಂಪಿ ಈ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದರು. ವಿಶ್ವ ಚಾಂಪಿಯನ್, ಚೀನಾದ ವೆನ್‌ಜುವಾನ್ (6.5) ಎರಡನೇ ಸ್ಥಾನ ಪಡೆದರು.

ಕೊನೆಯ ಸುತ್ತಿನಲ್ಲಿ ವೆನ್‌ಜುವಾನ್ ಜಯಗಳಿಸಿದ್ದರೆ ಅವರೇ ಚಾಂಪಿಯನ್ ಆಗುವ ಅವಕಾಶವಿತ್ತು. ಆದರೆ ಕಳೆದ ಸಲದ ಚಾಂಪಿಯನ್ ಅನ್ನಾ ಉಷೇನಿನಾ (ಉಕ್ರೇನ್), ವೆನ್‌ಜುವಾನ್ ಜೊತೆ ಡ್ರಾ ಮಾಡಿಕೊಂಡಿದ್ದು ದಿವ್ಯಾ ಅವರ ಪ್ರಶಸ್ತಿ ಹಾದಿ ಸುಗಮಗೊಳಿಸಿತು.

ಫಿಡೆ ಪ್ರತಿನಿಧಿಸಿದ ರಷ್ಯಾದ ಪೊಲಿನಾ ಶುವಲೋವಾ (5.5) ಅವರು ಮೂರನೇ ಸ್ಥಾನ ಪಡೆದರು.


ದಿವ್ಯಾ ದೇಶಮುಖ್

ಫುಟ್‌ಬಾಲ್: ಸೌತ್ ಯುನೈಟೆಡ್‌ಗೆ ಜಯ

ಬೆಂಗಳೂರು: ಮಹೇಶ್ ತಂದಿತ್ತ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 4–0 ಗೋಲುಗಳಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಮಹೇಶ್ ಸೆಲ್ವ 28, 84 ಮತ್ತು 90ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಇನ್ನೊಂದು ಗೋಲನ್ನು ಯು.ಕೆ. ಸೂರ್ಯ (76) ತಂದಿತ್ತರು

ಇನ್ನೊಂದು ಪಂದ್ಯದಲ್ಲಿ ಲೆನಾಲ್ಡ್ ಕಾರ್ಲ್ ಮಾರ್ಕ್ (85) ಅವರ ಗೋಲಿನ ನೆರವಿನಿಂದ ಎಚ್‌ಎಎಲ್ ಎಫ್‌ಸಿ 1–0 ಗೋಲಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಸೋಲಿಸಿತು.

65 ಟೆಸ್ಟ್ ಪಂದ್ಯಗಳನ್ನು ಆಡಿದ್ದ ವೇಗದ ಬೌಲರ್

ಜಿಂಬಾಬ್ವೆ ಕ್ರಿಕೆಟಿಗ ಸ್ಟ್ರೀಕ್ ನಿಧನ

ಜೊಹಾನೆಸ್‌ಬರ್ಗ್ (ಎಎಫ್‌ಪಿ): ಜಿಂಬಾಬ್ವೆಯ ದಿಗ್ಗಜ ಕ್ರಿಕೆಟಿಗರಲ್ಲೊಬ್ಬರಾದ ಹೀತ್ ಸ್ಟ್ರೀಕ್ (49) ಭಾನುವಾರ ನಿಧನರಾದರು. ಕಳೆದ ಕೆಲ ಸಮಯಗಳಿಂದ ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

ಜಿಂಬಾಬ್ವೆಯ ಬುಲವಾಯೊ ನಗರದಿಂದ 55 ಕಿ.ಮೀ ದೂರದಲ್ಲಿರುವ ನಿವಾಸದಲ್ಲಿ ಬೆಳಗಿನ ಜಾವ ಅವರು ಕೊನೆಯುಸಿರೆಳೆದರು. ಈ ವಿಷಯವನ್ನು ಅವರ ಪತ್ನಿ ನಾದಿನ್ ಸ್ಟ್ರೀಕ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಸ್ಟ್ರೀಕ್ ಕೊನೆಯ ದಿನಗಳನ್ನು ಕುಟುಂಬದ ಸದಸ್ಯರು ಮತ್ತು ಪ್ರೀತಿಪಾತ್ರರ ಜತೆ ಕಳೆಯಲು ಬಯಸಿದ್ದರು ಎಂದು ಹೇಳಿದ್ದಾರೆ.

'ಸ್ಟ್ರೀಕ್, ಕ್ಯಾನ್ಸರ್‌ಗೆ ಚಿಕಿತ್ಸೆಗಾಗಿ ಆಗಿಂದಾಗ್ಗೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣಿಸುತ್ತಿದ್ದರು. ಹುಟ್ಟೂರಿನಲ್ಲಿ ಅವರು ತಮ್ಮ ಹೆಚ್ಚಿನ ಸಮಯವನ್ನು ಮೀನುಗಾರಿಕೆ, ಕೃಷಿ ಮತ್ತು ಹೈನುಗಾರಿಕೆಯಲ್ಲಿ ಕಳೆಯುತ್ತಿದ್ದರು' ಎಂದು ಅವರ ಕುಟುಂಬದ ಸದಸ್ಯರೊಬ್ಬರು ತಿಳಿಸಿದರು.

ವೇಗದ ಬೌಲರ್ ಆಗಿದ್ದ ಸ್ಟ್ರೀಕ್, ಉಪಯುಕ್ತ ಬ್ಯಾಟರ್ ಆಗಿಯೂ ಗುರುತಿಸಿಕೊಂಡಿದ್ದರು.

65 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 236 ವಿಕೆಟ್‌ಗಳನ್ನು ಪಡೆದಿದ್ದಾರೆ. ಜಿಂಬಾಬ್ವೆಯ ಇತರ ಯಾವುದೇ ಬೌಲರ್ ಟೆಸ್ಟ್‌ನಲ್ಲಿ 80ಕ್ಕಿಂತ ಹೆಚ್ಚು ವಿಕೆಟ್ ಪಡೆದಿಲ್ಲ. 22.35ರ ಸರಾಸರಿಯಲ್ಲಿ 1,990 ರನ್ ಪೇರಿಸಿದ್ದಾರೆ. ಅವರ ಏಕೈಕ ಶತಕ (ಅಜೇಯ 127) ವೆಸ್ಟ್ ಇಂಡೀಸ್ ವಿರುದ್ಧ ಹರಾರೆಯಲ್ಲಿ (2003) ದಾಖಲಾಗಿತ್ತು.

ಏಕದಿನ ಕ್ರಿಕೆಟ್‌ನಲ್ಲಿ 187 ಪಂದ್ಯಗಳಿಂದ 237 ವಿಕೆಟ್‌ಗಳನ್ನು ಗಳಿಸಿದ್ದು, 2,901 ರನ್ ಕಲೆಹಾಕಿದ್ದಾರೆ. ಪ್ರಮುಖ ತಂಡಗಳ ವಿರುದ್ಧದ ಪಂದ್ಯಗಳಲ್ಲಿ ಏಕಾಂಗಿ ಹೋರಾಟ ನಡೆಸಿ ಅವರು ಗಮನ ಸೆಳೆದಿದ್ದರು. ನಾಯಕತ್ವದ ಜವಾಬ್ದಾರಿಯನ್ನೂ ನಿಭಾಯಿಸಿದ್ದ ಸ್ಟ್ರೀಕ್, 21 ಟೆಸ್ಟ್ ಮತ್ತು 68 ಏಕದಿನ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದರು. 2005 ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ವಿರಮಿಸಿದ್ದ ಅವರು 2016 ರಿಂದ 2018ರ ವರೆಗೆ ಜಿಂಬಾಬ್ವೆ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಭ್ರಷ್ಟಾಚಾರ ನಿಗ್ರಹ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ 2021 ರಲ್ಲಿ ಐಸಿಸಿ ಅವರ ಮೇಲೆ ಎಂಟು ವರ್ಷಗಳ ನಿಷೇಧ ಹೇರಿತ್ತು.


ಹೀತ್ ಸ್ಟ್ರೀಕ್